ಗುಲಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳು

(ಸಮಾಜಶಾಸ್ತ್ರದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ರಾಘವೇಂದ್ರ ಮಲ್ಲಣ್ಣ

ಮಾರ್ಗದರ್ಶಕರು

ಡಾ. ಎಲ್. ಶ್ರೀನಿವಾಸ

ಅಧ್ಯಾಪಕರು

ಮಾನವಶಾಸ್ತ್ರ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಮಾನವಶಾಸ್ತ್ರ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೮-೦೯

ಗುಲಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳು

(ಸಮಾಜಶಾಸ್ತ್ರದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ಸಂಪ್ರಬಂಧ)

ಸಂಶೋಧಕ
ರಾಘವೇಂದ್ರ ಮಲ್ಲಣ್ಣ

ಮಾರ್ಗದರ್ಶಕರು
ಡಾ. ಎಲ್. ಶ್ರೀನಿವಾಸ
ಅಧ್ಯಾಪಕರು
ಮಾನವಶಾಸ್ತ್ರ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಮಾನವಶಾಸ್ತ್ರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೦೮-೦೯

ಮಾರ್ಗದರ್ಶಕರ ದೃಢೀಕರಣ ಪತ್ರ

"ಗುಲಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳು" ಎಂಬ ಸಂಪ್ರಬಂಧವು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ರಾಘವೇಂದ್ರ ಮಲ್ಲಣ್ಣ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಎಲ್. ಶ್ರೀನಿವಾಸ)
ಅಧ್ಯಾಪಕರು
ಮಾನವಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ: 15-10-2009
ಸ್ಥಳ : ವಿದ್ಯಾರಣ್ಯ.

ಸಂಶೋಧಕರ ಪ್ರಮಾಣ ಪತ್ರ

"ಗುಲಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳು" ಎಂಬ ಸಂಪ್ರಬಂಧವನ್ನು ಡಾ. ಎಲ್. ಶ್ರೀನಿವಾಸ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಮಾನವಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ರಾಘವೇಂದ್ರ ಮಲ್ಲಣ್ಣ)
ಸಂಶೋಧಕರು
ಮಾನವಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ: 15-10-2009

ಸ್ಥಳ : ವಿದ್ಯಾರಣ್ಯ.

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಸಂಶೋಧನಾ ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಮತ್ತು ಮಾನ್ಯ ಕುಲಸಚಿವರಾದ ಶ್ರೀ ಎಸ್.ಎಸ್. ಪೂಜಾರ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ವೀರೇಶ ಬಡಿಗೇರ ಅವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ನನಗೆ "ಗುಲ್ಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳು" ಎಂಬ ವಿಷಯದ ಬಗ್ಗೆ ಎಂ.ಫಿಲ್. ಸಂಶೋಧನಾ ಅಧ್ಯಯನ ಮಾಡಲು ಮೂಲ ಪ್ರೇರಕರು ಮತ್ತು ಅಧ್ಯಯನದುದ್ದಕ್ಕೂ ಸಲಹೆ, ಸೂಚನೆ, ಸಹಕಾರವನ್ನು ನೀಡಿ ಮಾರ್ಗದರ್ಶನ ಮಾಡಿದ ಪ್ರೀತಿಯ ಪೂಜ್ಯ ಗುರುಗಳಾದ ಡಾ.ಎಲ್.ಶ್ರೀನಿವಾಸ ಅವರಿಗೆ ನನ್ನ ಕೃತಜ್ಞತೆಗಳು.

ಮಾನವಶಾಸ್ತ್ರ ವಿಭಾಗದ ಜವಾಬ್ದಾರಿಯನ್ನು ಹೊತ್ತುಕೊಂಡು ಈ ಹೊಸ ವಿಭಾಗವನ್ನು ಬೆಳವಣಿಗೆಯಾಗಲು ಶ್ರಮಿಸುತ್ತ ಹಲವು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿರುವ ನನ್ನ ಅಧ್ಯಯನಕ್ಕೆ ಪ್ರೋತ್ಸಾಹ ಸಹಕಾರ ನೀಡಿದ ನಮ್ಮ ವಿಭಾಗದ ಮುಖ್ಯಸ್ಥರಾದ ಡಾ. ತಾರಿಹಳ್ಳಿ ಹನುಮಂತಪ್ಪರವರಿಗೆ ನನ್ನ ಅನಂತ ಕೃತಜ್ಞತೆಗಳು ಹಾಗೂ ಸಿಬ್ಬಂದಿ ವರ್ಗದವರಾದ ಶ್ರೀ ಪಂಪಾವತಿ, ಶ್ರೀ ರಮೇಶ್‌ರವರಿಗೆ ಹೃತ್ಪೂರ್ವಕ ನಮನಗಳು.

ಡಾ. ಎಸ್.ಎಸ್. ಅಂಗಡಿ ಬುಡಕಟ್ಟು ಜನಾಂಗದ ಚಿಂತಕ ಮಾನವಶಾಸ್ತ್ರಜ್ಞ ಡಾ. ಕೆ.ಎಂ. ಮೇತ್ರಿ, ನನ್ನ ಅಧ್ಯಯನಕ್ಕೆ ಸ್ಫೂರ್ತಿಯಾದ ಡಾ. ಮಾರುತಿ, ಡಾ. ಮಂಜುನಾಥ ಬೇವಿನಕಟ್ಟಿ, ವಿಶ್ವವಿದ್ಯಾಲಯದ ವಿದ್ವಾಂಸರು, ಚಿಂತಕರು, ಪ್ರಗತಿಪರ ವಿಚಾರವಂತ ಸಮಸ್ತ ಗುರುವೃಂದಕ್ಕೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನನ್ನ ಶೈಕ್ಷಣಿಕ ಜೀವನದಲ್ಲಿ ಪ್ರಾತಃಸ್ಮರಣೀಯ ವಿದ್ಯಾ ಗುರುಗಳಾದ ಶ್ರೀ ಶಿವಪುತ್ರ ಪೋತಲಕರ, ಶ್ರೀ.ಎಸ್.ಎಂ.ಜುನ್ನಾ, ಶ್ರೀ. ಚೆನ್ನಾರಡ್ಡಿ ತಂಗಡಗಿ, ಪ್ರೊ. ಶಿವರಾಜ, ಎಂ. ದೇವಪ್ಪ, ಆನಂದಕುಮಾರ ಸಾಸನೂರ, ಆನಂದಕುಮಾರ ಜೋಷಿ ಮುಂತಾದವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಬದುಕಿನಲ್ಲಿ ಅಣ್ಣನ ಸ್ಥಾನದಲ್ಲಿ ನಿಂತು ಶೈಕ್ಷಣಿಕ ಜೀವನಕ್ಕೆ ತನು ಮನ ಧನದಿಂದ ಪ್ರೋತ್ಸಾಹ ನೀಡುತ್ತಿರುವ ಸಗರ ನಾಡಿಯ ಯುವ ನಾಯಕ ತಾಲೂಕು ಸೇವಾದಳದ ಅಧ್ಯಕ್ಷ ಬಸವರಾಜ ಕಡಗಂಚಿಯವರಿಗೆ ಹೃದಯಪೂರ್ವಕ ಕೃತಜ್ಞತೆಗಳು ಸಲ್ಲಿಸುತ್ತೇನೆ.

ಎಂ.ಫಿಲ್. ಸಂಶೋಧನಾ ಅಧ್ಯಯನಕ್ಕೆ ರೂ ೧೦,೦೦೦.೦೦ ಪ್ರೋತ್ಸಾಹ ಧನ ನೀಡಿದ ಕರ್ನಾಟಕ ರಕ್ಷಣಾ ವೇದಿಕೆ ಗುಲಬರ್ಗಾ ಜಿಲ್ಲಾ ವಿದ್ಯಾರ್ಥಿ ಘಟಕದ ಅಧ್ಯಕ್ಷರಾದ ಪ್ರಕಾಶ ಅಂಗಡಿಯವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ನನ್ನ ವಿಚಾರಗಳಿಗೆ, ಬರಹಗಳಿಗೆ ಸದಾ ಸ್ಫೂರ್ತಿಯಾಗಿರುವ ಆತ್ಮೀಯ ಗೆಳೆಯ ಕೆ.ರಂಗನಾಥ ಹಾಗೂ ತಮ್ಮನಾದ ನಾಗರಾಜ ಮಡಿವಾಳರ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಬರಹಗಳನ್ನು ನಾಡಿನ ಸಾರಸ್ವತ ಲೋಕಕ್ಕೆ ಪರಿಚಯನ್ನು ಕೊಟ್ಟ 'ಸುದ್ದಿ ಮನೆ' ವಿದ್ಯಾ ಗುರುಗಳಾದ ಶಿವರಾಜನ್, ಸತ್ಯಂಪೇಟೆ, ಪತ್ರಕರ್ತರಾದ ಟಿ. ನಾಗೇಂದ್ರ, ರವಿ ಹಿರೇಮಠ, ನಾರಾಯಚಾರ್ಯ ಸಾಗರ, ನಾಗೇಂದ್ರಸಿಂಗ್ ಮುಂತಾದವರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನಗೆ ಬಿ.ಎ.ಪದವಿಯಿಂದ ಇಲ್ಲಿಯವರೆಗೆ ಆಶ್ರಯ ನೀಡಿ ಎಲ್ಲಾ ರೀತಿಯಿಂದ ಸಹಾಯ ಸಹಕಾರ ನೀಡುತ್ತಿರುವ ಸಿದ್ಧರೂಢ ಆಶ್ರಯ ಭೀಗುಡಿಯ ಶರಣರಾದ ಜಗದೀಶ ಶರಣರಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನನ್ನ ಪ್ರೀತಿಯ, ಆತ್ಮೀಯ ಸ್ನೇಹಿತರಾದ ಜೋಗಿನಕಟ್ಟಿ ವಿಠಲ, ಸೋಮರಾಯ, ಮರೆಪ್ಪ ಪರಮೇಶ್ವರ, ರಂಗನಾಥ, ಶ್ರೀನಾಥ ಮುಂತಾದವರೆಗಿಲ್ಲರಿಗೂ ಪ್ರೀತಿಯ ಪೂರ್ವಕ ಕೃತಜ್ಞತೆಗಳು.

ಈ ಸಂಶೋಧನ ಪ್ರಬಂಧದ ಬರವಣಿಗೆಯಲ್ಲಿ ಆಗಾಗ ಚರ್ಚಿಸುತ್ತ ಸಲಹೆ, ಸಹಕಾರ ನೀಡಿದ ಹಿರಿಯ ಸಂಶೋಧನ ಸಹೋದರ ಕುಪ್ಪೆರಾವ್‌ರವರಿಗೂ. ಜಗದೀಶಕುಮಾರ, ಶೇಕರಚಾರ್ಯ ಮತ್ತು ಸ್ನೇಹಿತ ಗುರುಬಸವರಾಜ, ಎ.ಡಿ.ಬಸವರಾಜ, ಸತೀಶ, ರಂಗನಾಥ ತುಮಕೂರ ಎಲ್ಲರಿಗೂ ನನ್ನ ವಿಶೇಷ ಕೃತಜ್ಞತೆಗಳು.

ಈ ನಾಡಿನ ಪ್ರಗತಿಪರ ಚಿಂತಕರು, ಶರಣ ಸಾಹಿತಿ ಹಾಗೂ ಖ್ಯಾತ ಪತ್ರಕರ್ತರಾದ ರಂಜನ್ ದರ್ಗಾ, ಲಿಂಗಣ್ಣ ಸತ್ಯಂಪೇಟ, ಖ್ಯಾತ ಸಂಶೋಧಕ ಡಿ.ಎನಂ. ಹಕ್ಕಿ ಅವರಿಗೆ ನನ್ನ ಗೌರವಪೂರ್ಣ ಕೃತಜ್ಞತೆಗಳು.

ನನ್ನ ಪ್ರೀತಿಯ ಸಮಾನ ಮನಸ್ಕ ಸಹೋದರ ಸಹೋದರಿಯರಾದ ಕಾಶಿಂ ಅಲಿ ಹುಜರತಿ, ಸಿ.ಎಸ್. ಭೀಮರಾಯ, ಅಶ್ವಿನಿ ಜಹಗಿರಾದರ, ಉಪೇಂದ್ರ ನಾಯಕ, ಮಹೇಶ ಮಹಾಮನಿ, ಪ್ರಕಾಶ ರುದ್ರವಾಡಿ, ಹಣಮಂತ ಇಟಗಿ, ಬಸವರಾಜ ಸಿನ್ನೂರ ಮುಂತಾದವರೆಲ್ಲರಿಗೂ ನನ್ನ ವಿಶೇಷ ಕೃತಜ್ಞತೆಗಳು.

ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಎಲ್ಲಾ ಕಾರ್ಯಕರ್ತೆಯರಿಗೂ ಸದಾ ನನ್ನ ಎಳ್ಗೆಯನ್ನು ಬಯಸುವ ಮುಗ್ಧ ಅಪ್ಪ, ಅವ್ವ, ಅಣ್ಣಿ, ಅತ್ತಿಗೆ, ಕಾಕ, ಚಿಕ್ಕಮ್ಮ, ಮಾವಂದಿರು, ಅತ್ತೆಯಂದಿರು, ತಂಗಿಯರು ಎಲ್ಲರಿಗೂ ಪ್ರೀತಿಯ ಪೂರ್ವಕ ಕೃತಜ್ಞತೆಗಳು.

ಒಡಹುಟ್ಟಿನಲ್ಲಿ ಅಕ್ಕನ ಭಾಗ್ಯ ಇರದಿದ್ದರೂ ಸಮಾಜದ ಪರಿಸರದ ತರಂಗಗಳಲ್ಲಿ ಹಲವಾರು ಅಕ್ಕಂದಿರ ಭಾಗ್ಯ ದೊರತಿದೆ. ಅಂತಹ ಮಾತೃವಾತ್ಸಲ್ಯಕ್ಕೆ ಅಕ್ಷಿಯಾದ ಅಕ್ಕ ಭಾರತಿ ಮೇಡಂರವರು ತಮ್ಮ ಹಲವಾರು ಕೆಲಸಗಳ ಒತ್ತಡಗಳ ಮಧ್ಯೆ ನನ್ನ ಲೇಖನಗಳು ಮತ್ತು ಈ ಪ್ರಬಂಧವನ್ನು ಅಂದವಾಗಿ, ಸುಂದರವಾಗಿ ಡಿ.ಟಿ.ಪಿ. ಮಾಡಿಕೊಟ್ಟ ಶ್ರೀಮತಿ ಭಾರತಿ ಹೇಮಂತ ಕರಡಿ ಅವರಿಗೆ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನಾ ಅಧ್ಯಯನದಲ್ಲಿ ಹಾಗೂ ಶೈಕ್ಷಣಿಕ ಬದುಕಿನಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಾಯ, ಸಹಕಾರ, ಪ್ರೋತ್ಸಾಹ, ಸ್ಫೂರ್ತಿ ನೀಡಿದ ಪ್ರತಿಯೊಬ್ಬರನ್ನು ಸ್ಮರಿಸುತ್ತ ಅವರೆಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧. ಪ್ರಸ್ತಾವನೆ

೧.೨. ಪ್ರಸ್ತುತ ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವಿಧಾನ

೧.೪. ಅಧ್ಯಯನದ ಸ್ವರೂಪ

೧.೫. ಲೈಂಗಿಕ ಕಾರ್ಯಕರ್ತೆಯರ ಕುರಿತ ನಡೆದ ಅಧ್ಯಯನಗಳು

೧.೬. ಗುಲಬರ್ಗಾ ಜಿಲ್ಲೆಯ ಪರಿಚಯ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ

ವಿಶ್ವದ ಹಲವು ರಾಷ್ಟ್ರಗಳು ಹಾಗೂ ಭಾರತವು ಬಹು ಹಿಂದಿನಿಂದಲೂ ಎದುರಿಸುತ್ತಿರುವ ಅನೇಕ ಸಮಸ್ಯೆಗಳಲ್ಲಿ ವೇಶ್ಯಾವೃತ್ತಿಯೂ ಒಂದು. ಜಗತ್ತಿನಲ್ಲಿ ವೇಶ್ಯಾವೃತ್ತಿ ಅರ್ಥಾತ್ ಲೈಂಗಿಕ ಕಾರ್ಯಕರ್ತೆಯರಿರದ ರಾಷ್ಟ್ರವಿಲ್ಲ. ವ್ಯಭಿಚಾರಗಳಿಲ್ಲದ ನಾಡಿಲ್ಲ. ಪುರಾತನ ಕಾಲದಿಂದಲೂ ನಡೆದುಬಂದ ಅತ್ಯಂತ ಹೀನವೆಂದು ಬಣ್ಣಿಸಬಹುದಾದ ಈ ವೇಶಾವೃತ್ತಿ ಅಥವಾ ಲೈಂಗಿಕ ವೃತ್ತಿ ನಾಗರಿಕ ಸಮಾಜಕ್ಕಂತೂ ಕಳಂಕಪ್ರಾಯವಾಗಿದೆ. ಪುರುಷ ಪ್ರಧಾನ ಸಮಾಜ ಉಳಿಸಿ ಬೆಳೆಸಿಕೊಂಡು ಬಂದ ಕೆಟ್ಟ ಪದ್ಧತಿ ಅನಾರೋಗ್ಯಕರ ದಂಧೆಯಾಗಿ ಪರಿವರ್ತನೆಗೊಂಡಿದೆ. ಒಂದಡೆ ಶ್ರೀಮಂತರು, ಮತಧರ್ಮಗಳು, ಕೈಗಾರಿಕೀಕರಣ ಹಾಗೂ ನಗರೀಕರಣ ವೇಶ್ಯಾವೃತ್ತಿಯನ್ನು ಸಂರಕ್ಷಿಸಿದರೆ ಮತ್ತೊಂದೆಡೆ ಸಾರ್ವಜನಿಕರು ಮತ್ತು ಕಾನೂನು ಇದನ್ನು ತುಚ್ಛ್ಯವೆಂದು ಪರಿಗಣಿಸಿ ನಿಷೇಧಿಸಿದೆ.

ಮಾನವನ ಮೂಲಭೂತ ಬಯಕೆಗಳಲ್ಲಿ ಒಂದಾದ ಲೈಂಗಿಕ ಬಯಕೆ ಇತರ ಎಲ್ಲಾ ಬಯಕೆಗಳಿಗಿಂತ ಹೆಚ್ಚು ನಿಯಂತ್ರಣಕ್ಕೆ ಒಳಗಾಗಿರುವಂತಹದು. ಬಹಳ ಹಿಂದಿನಿಂದಲೂ ಈ ಬಯಕೆಯ ಮೇಲೆ ನಾನಾ ರೀತಿಯ ನಿರ್ಬಂಧಗಳು ಕಂಡುಬರುತ್ತವೆ. ಅನಿರ್ಬಂಧಿತ ಲೈಂಗಿಕ ಬಯಕೆಯನ್ನು ಸೀಮಿತಗೊಳಿಸುವ ಮತ್ತು ನಿರ್ದೇಶಿಸುವ ಉದ್ಧೇಶದಿಂದಲೇ ವಿವಾಹ ವಿಧಿಯನ್ನು ಬಳಕೆಗೆ ತರಲಾಗಿದೆ. ಆದರೆ ವಿವಾಹ ಸಂಸ್ಥೆ ಅಸ್ತಿತ್ವಕ್ಕೆ ಬಂದಾಗಿನಿಂದಲೇ ಇದರ ಪರಿಧಿಯ ಹೊರಗೂ ಲೈಂಗಿಕ ಬಯಕೆಯ ಅನುಭವಿಸುವಿಕೆ ನಡೆದುಕೊಂಡು ಬಂದಿದೆ. ವಿವಾಹದ ಹೊರಗಡೆ ನಡೆಯುವ ಮತ್ತು ಅಕ್ರಮವೆಂದು ಕರೆಯಲ್ಪಡುವ ಲೈಂಗಿಕ ವ್ಯವಹಾರ ಬಹುಶಃ ವಿವಾಹದ ಸಾಮಾಜಿಕ ಸಂಸ್ಥೆಗಿಂತಲೂ ಪುರಾತನವಾದುದು. ಅಂತೆಯೇ ಈ ವ್ಯವಹಾರ ಒಂದು ವ್ಯಾಪಾರವಾಗಿಯೂ ಬಹಳ ಹಿಂದಿನಿಂದಿಲೂ, ಪರಿವರ್ತನೆಗೊಂಡು ನಡೆದುಕೊಂಡು ಬಂದಿದೆ.

ಅತ್ಯಂತ ಪ್ರಾಚೀನ ಅವಧಿಯಲ್ಲಿ ವೇಶ್ಯೆಯು ಭಾರತದ ದೇವಸ್ಥಾನಗಳ ಪವಿತ್ರ ಅಂಗಣದಲ್ಲಿ ದೇವತೆಗಳ ಸೇವೆಯಲ್ಲಿ ತೊಡಗಿದ್ದಳು ಎಂದು ಹೇಳಲಾಗಿದೆ. ದೇವದಾಸಿ ಎಂಬ ಹೆಸರನ್ನು ಹೊತ್ತ ಅಂದಿನ ವೇಶ್ಯೆ ಇಂದಿನವರೆಗೆ ಬಹಳ ದೂರ ಕ್ರಮಿಸಿದ್ದಾಳೆ. ಆದರೆ ಇಂದು ಬೃಹತ್ ನಗರಗಳ ಕೆಲವು ಪ್ರದೇಶಗಳಲ್ಲಿ ಕಾಮ ತೃಷೆಯಿಂದ ಕೂಡಿದ ಜನರ ಸೇವೆಯಲ್ಲಿ ತೊಡಗಿದ್ದಾಳೆ. ಇದನ್ನು ಒಂದು ವೃತ್ತಿಯನ್ನಾಗಿಸಿದ್ದಾಳೆ.

ಗುಲಬರ್ಗಾದ ಪ್ರಜಾವಾಣಿ ಪತ್ರಿಕೆಯ ಪತ್ರಕರ್ತೆ ರಶ್ಮಿ ಎಸ್. ಅವರು ಹೇಳುವ ಪ್ರಕಾರ ಗಡಿ ಜಿಲ್ಲೆಗಳಲ್ಲಿ ಅಂತರ ರಾಜ್ಯ ಮಾನವ ಸಾಗಾಣಿಕೆ ಹೆಚ್ಚುತ್ತಿದೆ. ಇದರಲ್ಲಿ ಮನೆಗೆಲಸದ ನೆಪ ಹೇಳಿ ಮಹಿಳೆಯರು ಹಾಗೂ ಕಿಶೋರಾವಸ್ಥೆಯ ಹುಡುಗಿಯರನ್ನು ಪುಸಲಾಯಿಸಿ ಕರೆದೊಯ್ಯಲಾಗುತ್ತದೆ. ಅದರಲ್ಲಿ ಬಹುತೇಕ ಜನರು ಮಾಂಸ ಮಾರುಕಟ್ಟೆಗೆ ಸಾಗಿಸಲಾಗುತ್ತದೆ. ಮನೆಗೆಲಸ ಕೂಲಿಕೆಲಸದ ಆಸೆಗೆ ಗುಳೆ ಹೋಗುವ ಬಹುತೇಕ ಹೆಣ್ಣುಮಕ್ಕಳು ಕೆಂಪುದೀಪದ ಅಡಿಯಲ್ಲಿಯೇ ಲೈಂಗಿಕ ಕಾರ್ಯಕರ್ತೆಯರಾಗಿ ಕೆಲಸ ಮಾಡಲೇಬೇಕಾದ ಅನಿವಾರ್ಯ ಹುಟ್ಟುಹಾಕಲಾಗುತ್ತದೆ. ಇದನ್ನು ತಡೆಯಲು ಕೆಲಸಗಾರರನ್ನು ಸಂಘಟಿಸುವ ಕೆಲಸವಾಗಬೇಕಿದೆ.

ಮನೆ ಕೆಲಸಗಾರರ ನೆಪದಲ್ಲಿಯೂ, ಎಸ್ಕಾರ್ಟ್‌ಗಳೆಂಬ ಹೈಟೆಕ್ ಹೆಸರಿನ ನೆರಳಿನಲ್ಲಿಯೂ ಇಂಥವೇ ಕೆಲಸಗಳು ನಡೆಯುತ್ತಿವೆ. ಸಂಪ್ರದಾಯದ ಚೌಕಟ್ಟಿನಲ್ಲಿ ನಡೆಯುವ ದೇವದಾಸಿ ಪದ್ಧತಿಯ ಕಂದಾಚಾರ ತಡೆಯಬಹುದು. ಆದರೆ ದೇಹ ಮಾರಾಟದ ಕಸುಬು ವಿವಿಧ ಹೆಸರುಗಳಲ್ಲಿ ನಡೆಯುತ್ತಲೇ ಇರುವುದು ವಿಪರ್ಯಾಸವಾಗಿದೆ.

ಪಿತೃ ಪ್ರಧಾನ ಸಮಾಜದ ಒಂದು ಅನಿವಾರ್ಯವಾದ ಮೌಲ್ಯವಾಗಿಯೂ ವೇಶ್ಯೆಯರು ಅಥವಾ ಲೈಂಗಿಕ ಕಾರ್ಯಕರ್ತೆಯರ ಸೃಷ್ಟಿಯಾಗಿದೆ. ಹೆಣ್ಣಿನ ಲೈಂಗಿಕ ಸ್ವಾತಂತ್ರ್ಯ, ಸಂತಾನೋತ್ಪತ್ತಿ ಹಾಗೂ ಶ್ರಮ ಎಲ್ಲದರ ಮೇಲೂ ಅಸಾಧ್ಯ ಹಿಡಿತವನ್ನು ಹೊಂದಿರುವ ಪುರುಷ ಸಮಾಜದ ಪಾಳೇಗಾರಿಕೆ ಮೌಲ್ಯಗಳಿಂದಾಗಿ ಹೆಣ್ಣನ್ನು ವ್ಯಕ್ತಿಯಾಗಿ, ಮನುಷ್ಯ ಜೀವಿಯಾಗಿ ಪರಿಭಾವಿಸಿಯೇ ಇಲ್ಲ. ವೇಶ್ಯೆಯರು ಅಥವಾ ಲೈಂಗಿಕ ಕಾರ್ಯಕರ್ತೆಯರು ಮೊದಲು ಕೇವಲ ಆಸ್ತಿವಂತರ, ಅದರ ಭೂ ಮಾಲಿಕರ, ಅಧಿಕಾರದಲ್ಲಿ ವರಿಷ್ಠರ, ಸೈನಿಕರ ಮುಂತಾದವರ ಕಾಮ ಪೂರೈಕೆಯ ವಸ್ತುಗಳಾಗಿದ್ದರು. ಆದರೆ ಕೈಗಾರೀಕರಣದ ನಂತರ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹೆಣ್ಣಿನ ಲೈಂಗಿಕ ಸಮಸ್ಯೆ ಹಲವಾರು ಹೊಸ ಆಯಾಮಗಳನ್ನು ಪಡೆದುಕೊಂಡಿವೆ.

ಹಲವಾರು ಕಾರಣಗಳಿಂದಾಗಿ ವಲಸೆ ಹೋಗುವ ಪುರುಷರಿಂದಾಗಿ ಹಾಗೂ ನಗರ ಪ್ರದೇಶಗಳಲ್ಲಿನ ಕೌಟುಂಬಿಕ ವಿಘಟನೆ, ಬಡತನ ಮುಂತಾದವು ವೇಶ್ಯಾವೃತ್ತಿಯ ಹೆಚ್ಚಳಕ್ಕೆ ಕಾರಣವಾದವು. ಇಂದು ಭಾರತದ ಪ್ರಮುಖ ದೊಡ್ಡ ದೊಡ್ಡ ನಗರಗಳಲ್ಲಿ, ಪಟ್ಟಣಗಳಲ್ಲಿ ಕೆಂಪು ದೀಪದ ಕಬಂಧ ಬಾಹುವಿನಲ್ಲಿ ಸಿಕ್ಕಿ ಬಿದ್ದಿರುವ ವೇಶ್ಯೆಯರಲ್ಲಿ ಮೂರನೇ ಒಂದು ಭಾಗ ಅಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳಿದ್ದಾರೆ. ಇಂದು ಅತಿ ಹೆಚ್ಚು ಸಂಖ್ಯೆಯ ವೇಶ್ಯೆಯರು ಅಥವಾ ಲೈಂಗಿಕ ಕಾರ್ಯಕರ್ತೆಯರು ಆಂಧ್ರಪ್ರದೇಶ, ಕರ್ನಾಟಕ, ಕೇರಳ, ತಮಿಳುನಾಡು, ಉತ್ತರಪ್ರದೇಶ, ಪಶ್ಚಿಮ ಬಂಗಾಲ, ದೆಹಲಿ, ಗೋವಾ ಮತ್ತು ನೇಪಾಳಗಳಿಂದ ವೇಶ್ಯೆಯರು ದೇಶದ ದೊಡ್ಡ ದೊಡ್ಡ ನಗರಗಳಿಗೆ ಬರುತ್ತಿದ್ದಾರೆ.

ಇವರಲ್ಲಿ ಸುಮಾರು ೩೭% ರಷ್ಟು ಲೈಂಗಿಕ ಕಾರ್ಯಕರ್ತೆಯರು ಹೆತ್ತವರೇ ಇಲ್ಲವೇ ಒಡಹುಟ್ಟಿದವರೇ ಈ ವೃತ್ತಿಗೆ ನೂಕಿದವರಾಗಿದ್ದಾರೆ. ಅತ್ಯಾಚಾರಕ್ಕೆ ಗುರಿಯಾಗಿ ಮನೆಯವರಿಂದ ತ್ಯಜಿಸಲ್ಪಟ್ಟಿರುವರು. ಅಪಹರಿಸಲ್ಪಟ್ಟವರು, ಮಾರಾಟವಾದವರು, ಪ್ರೀತಿಸಿ ವಂಚಿಸಲ್ಪಟ್ಟವರು ಈ ರೀತಿ ಹಲವಾರು ಕಾರಣಗಳಿಂದ ವೇಶ್ಯಾವೃತ್ತಿ ಎಂಬ ಪಾಪಕೂಪಕ್ಕೆ ಸಿಲುಕಿದವರಾಗಿದ್ದಾರೆ.

ಪೇರೆಂಟ್ ಡುಶ್‌ಟೆಲೆಟ್ ಅವರ ವರದಿಯಂತೆ ೫,೦೦೦ ವೇಶ್ಯೆಯರಲ್ಲಿ ೧೪೪೧ ಜನ ಬಡತನದಿಂದ, ೧೪೨೫ ಜನ ಕಾಮಪೀಪಾಸೆಗೆ ಬಲಿಯಾಗಿ ತ್ಯಜಿಸಲ್ಪಟ್ಟ ೧೨೫೫ ಜನ ಬದುಕಲು ಬೇರೆ ದಾರಿಯಿಲ್ಲದೆ ಪಾಲಕರಿಂದ ಹೊರದೂಡಲ್ಪಟ್ಟು ಈ ವೃತ್ತಿಗೆ ಬಂದಿದ್ದರು ಇದು ೧೮೫೭ರ ವಿಷಯ. ವೇಶ್ಯಾವಾಟಿಕೆ ಈಗ ಜಾಗತಿಕ ಉದ್ಯಮವಾಗಿದೆ. ಅಪಾರ ಪ್ರಮಾಣದ ಹಣ ಹೂಡಿಕೆ, ಲಾಭಕೋರತನ ನಡೆಯುತ್ತಿದೆ. ಹಲವು ರಾಷ್ಟ್ರಗಳಲ್ಲಿ 'ವೇಶ್ಯಾವಾಟಿಕೆ' ಕಾನೂನು ಬಾಹಿರವಾಗಿದ್ದರೆ ಇನ್ನು ಹಲವು ರಾಷ್ಟ್ರಗಳಲ್ಲಿ ಇದು 'ಲೈಂಗಿಕ ವೃತ್ತಿ' ಹೆಸರಿನಲ್ಲಿ ಮಾನ್ಯತೆ ಪಡೆದಿದೆ. ಅಸಹಾಯಕ ಹಾಗೂ ಅಮಾಯಕರಾದ ಕೋಟ್ಯಾಂತರ ಯುವತಿಯರು. ಮಕ್ಕಳು, ಮಹಿಳೆಯರು ಬಲವಂತದಿಂದ ಈ ಕೂಪಕ್ಕೆ ದೂಡಲ್ಪಡುತ್ತಾರೆ. ಒಮ್ಮೆ ದೂಡಲ್ಪಟ್ಟವರು ಅಲ್ಲೆ ಜೀವನದ ಕೊನೆ ಕಾಣುತ್ತಾರೆ.

ಈ ವೃತ್ತಿಗೆ ದೇಶ, ಪ್ರಾಂತ್ಯದ ಗಡಿ ಇಲ್ಲ. ಈ ವೃತ್ತಿಯನ್ನೇ ಬಂಡವಾಗಿಸಿಕೊಂಡಿರುವ ಬಹು ದೊಡ್ಡ ಜಾಲಗಳು ದೇಶ ವಿದೇಶಗಳ ಸಂಪರ್ಕದೊಂದಿಗೆ ಮಾನವ ಸಾಗಾಟದ ವೃತ್ತಿಯಲ್ಲಿ ತೊಡಗಿವೆ. ವಿಶ್ವಸಂಸ್ಥೆಯ ಒಂದು ಅಂದಾಜಿನ ಪ್ರಕಾರ ಪ್ರತಿವರ್ಷ ೫ರಿಂದ ೭ ಬಿಲಿಯನ್ ಡಾಲರ್‌ನಷ್ಟು ವ್ಯವಹಾರ ಮಾನವ ಸಾಗಾಟದಲ್ಲಿ ಆಗುತ್ತದೆ. ಜಗತ್ತಿನಾದ್ಯಾಂತ ಪ್ರತಿವರ್ಷ ೨ ಕೋಟಿ ಮಹಿಳೆಯರು ಮತ್ತು ಮಕ್ಕಳನ್ನು ಲೈಂಗಿಕ ಚಟುವಟಿಕೆಗೆ ದುರ್ಬಳಕೆ

ಮಾಡಲಾಗುತ್ತದೆ. ಮಾನವ ಸಾಗಾಟದ ಮೂಲಕ ಜನರನ್ನು ಯಾವುದೇ ಕೆಲಸಕ್ಕೆ ಬಲವಂತವಾಗಿ ಬಳಸಬಹುದಾಗಿದ್ದರೂ ಇದರಲ್ಲಿ ವೇಶ್ಯಾವಾಟಿಕೆಗೆ ಬಳಕೆಯಾಗುವುದೇ ಹೆಚ್ಚು, ರಾಷ್ಟ್ರೀಯ ಮಹಿಳಾ ಆಯೋಗದ ವರದಿಯೊಂದರ ಪ್ರಕಾರ ಭಾರತದಲ್ಲಿ ೨೦೦ ರಿಂದ ೫೦೦ ಕೋಟಿಯಷ್ಟು ಆದಾಯ ವೇಶ್ಯಾವಾಟಿಕೆಯಿಂದ ಬರುತ್ತದೆ ಎಂದು ವರದಿ ಮಾಡಿದೆ.

ದೇಶದಲ್ಲಿ ವೇಶ್ಯೆಯರ ಕುರಿತು ಸರಿಯಾದ ಅಂಕಿ-ಸಂಖ್ಯೆಯ ಬಗ್ಗೆ ಯಾವುದೇ ಗಣತಿ ಇಲ್ಲ. ಆದರೆ ಕೆಲವು ಅಧ್ಯಯನಗಳ ಪ್ರಕಾರ ಭಾರತದಲ್ಲಿ ಸುಮಾರು ೪೦ ಲಕ್ಷ ಲೈಂಗಿಕ ದುಡಿಮೆಗಾರರು ಅಥವಾ ಲೈಂಗಿಕ ಕಾರ್ಯಕರ್ತೆಯರಿದ್ದಾರೆ. ಸುಮಾರು ೬೦,೦೦೦ ಮಹಿಳೆಯರು ಪ್ರತಿವರ್ಷ ಈ ಲೈಂಗಿಕ ವ್ಯಾಪಾರಕ್ಕೆ ಪ್ರವೇಶಿಸುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ.

ಮಹಾರಾಷ್ಟ್ರದ ಗಡಿ ಪ್ರದೇಶಕ್ಕೆ ಹತ್ತಿಕೊಂಡಿರುವ ಗುಲಬರ್ಗಾ ಜಿಲ್ಲೆಯಲ್ಲಿ ೫೦೦ಕ್ಕಿಂತ ಹೆಚ್ಚಿನ ಮಹಿಳೆಯರು ಲೈಂಗಿಕ ವೃತ್ತಿಯಲ್ಲಿ ತೊಡಗಿದ್ದಾರೆ. ಈ ಜಿಲ್ಲೆಯ ಜನತೆಗೆ ಮಹಾರಾಷ್ಟ್ರದ ಅಂಬಾಭವಾನಿ ಪ್ರವಾಹ ಬಹಳಷ್ಟು ಹೆಚ್ಚಿರುವುದರಿಂದ ಪ್ರತಿನಿತ್ಯ ಸಾವಿರಾರು ಲಾರಿ, ಟ್ರಕ್, ಕಾರು, ಜೀಪು, ಬಸ್ಸು, ಟೆಂಪೊಗಳು ಮಹಾರಾಷ್ಟ್ರದ ಪ್ರಮುಖ ಊರುಗಳಿಗೆ ಹೋಗಿಬರುತ್ತವೆ. ಇದರಿಂದ ಜಿಲ್ಲೆಯ ಗಡಿಭಾಗಗಳಾದ ಚಿಂಚೋಳಿ, ಸೇಡಂ, ಚಿತ್ತಾಪುರ, ಯಾನಗುಂದಿ, ಸೈದಾಪೂರ, ಯಾದಗಿರಿ ಮುಂತಾದ ಪ್ರದೇಶಗಳಲ್ಲಿ ಜೋಗತಿ, ಬಸವಿ, ಸೂಳೆಯರು ಅಥವಾ ವೇಶ್ಯೆಯರು ಅಥವಾ ಲೈಂಗಿಕ ಕಾರ್ಯಕರ್ತೆಯರು ಹೆಚ್ಚಾಗಿ ಕಂಡುಬರುತ್ತಾರೆ.

ಇಂದು ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿ ಬಹಳಷ್ಟು ಶೋಚನೀಯವಾಗಿದೆ. ಇವರು ಆರ್ಥಿಕವಾಗಿ, ಸಾಮಾಜಿಕವಾಗಿ, ದೈಹಿಕವಾಗಿ ಮತ್ತು ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಆದ್ದರಿಂದ ಗುಲಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯರ ಬಗ್ಗೆ ಸಾಮಾಜಿಕ ವಾಸ್ತವಿಕ ಪರಿಸ್ಥಿತಿಗಳ ಬಗ್ಗೆ ಅಧ್ಯಯನದ ಅವಶ್ಯಕತೆ ಇರುವುದರಿಂದ ಇವರ ಸಾಮಾಜಿಕ ಪರಿಸ್ಥಿತಿಗಳ ಕುರಿತು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

೧.೨. ಅಧ್ಯಯನದ ಉದ್ದೇಶ:

ಬಡತನ, ಮೌಢ್ಯ, ಮುಟ್ಠಾಳ ಗಂಡಸರ ಆಸೆಬುರುಕುತನ ಮುಂತಾದವುಗಳು ಸೇರಿ ಅಮಾಯಕ ಹೆಣ್ಣುಮಕ್ಕಳನ್ನು ವೇಶ್ಯಾವೃತ್ತಿಗೆ ನೂಕುತ್ತವೆ. ಒಮ್ಮೆ ಈ ದಂಧೆಗಿಳಿದು ಅಲ್ಲಿಂದ ಪಾರಾಗಬೇಕೆನ್ನುವ ಯೋಚನೆ ಸುಳಿಯುವ ಹೊತ್ತಿಗೆ ಅದೊಂದು ವಿಷವ್ಯೂಹವಾಗಿ, ಬೆಳಕಿನ ಕಿರಣವೇ ಕಾಣದ ರೌರವ ನರಕವಾಗಿ ಪರಿಣಮಿಸಲ್ಪಟ್ಟಿರುತ್ತವೆ. ಧಾರುಣ ಬಲಿಗೆ

ಸಿದ್ಧವಾಗಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿಬಿಟ್ಟಿರುತ್ತದ. ಇಂತಹ ಶೋಚನೀಯ ಸ್ಥಿತಿಯಲ್ಲಿರುವ ಗುಲಬರ್ಗಾದಲ್ಲಿರುವ ಲೈಂಗಿಕ ಕಾರ್ಯಕರ್ತೆಯರು ಹಲವಾರು ಗಂಭೀರ ಸಮಸ್ಯೆಗಳಲ್ಲಿ ಬಳಲುತ್ತಿದ್ದಾಳೆ. ಆದ್ದರಿಂದ 'ಗುಲಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿ'ಗಳನ್ನು ವಿಶ್ಲೇಷಣೆಯ ಮೂಲಕ ತಿಳಿದುಕೊಳ್ಳುವುದು ಅಧ್ಯಯನದ ಉದ್ದೇಶವಾಗಿದೆ. ಅವುಗಳೆಂದರೆ-

೧. ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳನ್ನು ಅರಿಯುವುದು.

೨. ಅವರು ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತ್ತಿಗೆ ತೊಡಗಿರುವುದಕ್ಕೆ ಕಾರಣವಾದ ಅಂಶಗಳನ್ನು ಕುರಿತು ಕುಲಂಕುಶವಾಗಿ ಅಧ್ಯಯನ ಮಾಡುವುದು.

೩. ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಾನಮಾನ ಯಾವ ರೀತಿಯಾಗಿದೆ ಎಂಬುದರ ಬಗ್ಗೆ ತಿಳಿದುಕೊಳ್ಳುವುದು.

೪. ಲೈಂಗಿಕ ಕಾರ್ಯಕರ್ತೆಯರು ಎದುರಿಸುತ್ತಿರವು ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡುವುದು.

೫. ಲೈಂಗಿಕ ವೃತ್ತಿ ಅಥವಾ ವೇಶ್ಯಾವೃತ್ತಿಯ ಬಗ್ಗೆ ಅವರಿಗಿರುವ ಮನೋಭಾವನೆಗಳ ಬಗ್ಗೆ ತಿಳಿದುಕೊಳ್ಳುವುದು.

೬. ಲೈಂಗಿಕ ಕಾರ್ಯಕರ್ತೆಯರ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕುರಿತು ಅಧ್ಯಯನ ಮಾಡುವುದು.

೭. ಅವರಲ್ಲಿರುವ ಕೀಳರಿಮೆ, ಆತಂಕ, ಭಯ-ಬೀಡುವಂತೆ ಮಾಡುವುದಕ್ಕೆ ಸಲಹೆ ಸೂಚನೆಗಳನ್ನು ನೀಡುವುದು.

೧.೩ ಅಧ್ಯಯನದ ವಿಧಾನ

ಇಂದು ಔದ್ಯೋಗಿಕರಣ ಮತ್ತು ನಗರೀಕರಣಗಳು ವೇಶ್ಯಾವೃತ್ತಿಗೆ ಸ್ವರ್ಗ ಸೋಪಾನವನ್ನುಂಟು ಮಾಡಿದೆ. ಹೇಳಿ ಮಾಡಿಸಿದಂತಹ ಪೂರಕ ಪರಿಸ್ಥಿತಿಗಳನ್ನು ನಿರ್ಮಾಣ ಮಾಡಿದೆ. ಇಂದಿನ ಆಧುನಿಕ ನಗರಗಳಲ್ಲಿ ಇತರ ಉದ್ಯೋಗಗಳಂತೆ ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತ್ತಿ ಒಂದು ಪ್ರಮುಖ ಉದ್ಯೋಗವಾಗಿದೆ. ನಿರ್ಗತಿಕ, ಅನಾಥ, ಬಡತನದಿಂದ ಬಳಲುವ ಸ್ತ್ರೀಯರಿಗೆ ಇದೊಂದು ಲಾಭದಾಯಕ ಉದ್ಯೋಗವಾಗಿ ಪರಿಣಮಿಸಿದೆ. ಗುಲಬರ್ಗಾ

ನಗರದಲ್ಲಿ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಮಹಿಳೆಯರೊಂದಿಗೆ ಕಾರ್ಯನಿರ್ವಹಿಸುತ್ತಿರುವ ಕೆಲವು ಸರ್ಕಾರೇತರ ಸಂಘ ಸಂಸ್ಥೆಗಳು ೫೦೦ಕ್ಕಿಂತ ಹೆಚ್ಚು ಮಹಿಳೆಯರನ್ನು ಗುರುತಿಸಿದೆ. ಇಲ್ಲಿ ನಾನು ಕೈಗೊಂಡ ಸಂಶೋಧನಾ ಅಧ್ಯಯನಕ್ಕೆ ಸಂಬಂಧಿಸಿದಂತೆ ೪೦ ಜನ ಲೈಂಗಿಕ ಕಾರ್ಯಕರ್ತೆ ಮಹಿಳೆಯರನ್ನು ಮಾತ್ರ ಆಯ್ಕೆ ಮಾಡಲಾಗಿದೆ.

ದತ್ತಾಂಶಗಳ ಸಂಗ್ರಹಣೆ:

ಈ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯವಾಗಿ ಪ್ರಾಥಮಿಕ ಮೂಲಗಳಾದ ಅವಲೋಕನ, ಸಂದರ್ಶನ, ಪ್ರಶ್ನಾವಳಿಗಳ ಮೂಲಕ ಮತ್ತು ಇದಕ್ಕೆ ಸಂಬಂಧಪಟ್ಟ ಅನುಷಂಗಿಕ ಮೂಲಗಳಾದ ವಿವಿಧ ಅಧ್ಯಯನಗಳ, ಪುಸ್ತಕಗಳಿಂದ ಮತ್ತು ವೃತ್ತಿ ಪತ್ರಿಕೆಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

ದತ್ತಾಂಶಗಳ ವಿಶ್ಲೇಷಣೆ:

ಕ್ಷೇತ್ರಕಾರ್ಯದಿಂದ ಪಡೆದ ಮಾಹಿತಿ, ವಕ್ತೃಗಳು ನೀಡಿದ ವಿವರಗಳು, ವಿವಿಧ ದತ್ತಾಂಶಗಳನ್ನು ಒಂದುಗೂಡಿಸಿ ಮಾಹಿತಿಯನ್ನು ವಿಶ್ಲೇಷಣೆ ಮಾಡಿ ಫಲಿತಾಂಶವನ್ನು ವಿವರಿಸಲಾಗಿದೆ.

೧.೪ ಅಧ್ಯಯನದ ಸ್ವರೂಪ

ಲೈಂಗಿಕ ಕಾರ್ಯಕರ್ತೆಯರನ್ನು ಸಮಾಜೋ–ಸಾಂಸ್ಕೃತಿಕ ಮತ್ತು ಧಾರ್ಮಿಕ ವ್ಯವಸ್ಥೆಯ ನೆಲೆಯಲ್ಲಿ ವಿಶ್ಲೇಷಣೆಗೊಳಪಡಿಸುವ ಅಗತ್ಯವಿದೆ. ಪುರುಷರ ಹುಚ್ಚು ಕಾಮನೆಯ ಫಲವಾಗಿ ಬೆಳೆದುಬಂದ ಲೈಂಗಿಕ ಕಾರ್ಯಕರ್ತೆಯರ ರೂಪ–ಸ್ವರೂಪಗಳನ್ನು ಒಂದೊಂದಾಗಿ ಪರಿಶೀಲಿಸಬೇಕಾಗಿದೆ. ಪುರೋಹಿತ ಶಾಹಿಗಳ ಹಿಂದೂ ಸಮಾಜ ದೇವದಾಸಿ, ಜೋಗತಿ, ಬಸವಿ, ರಾಜದಾಸಿಯರಿಗೆ ಸೂಳೆ ಮಟ್ಟಕ್ಕಿಳಿಸಿದರೆ ಬ್ರಿಟಿಷರ ಕಂಟೋನ್ಮೆಂಟ್‌ಗಳು ನಿಗದಿತಗೊಳಿಸಿದ ರೇಟಿಗೆ ತಂದು ಕೆಲವು ದೀಪಗಳ ಕೇರಿಗಳನ್ನಾಗಿ ಮಾಡಿ ಇಂದು ದೇಶದದ್ಯಾಂತ ಒಂದು ದೊಡ್ಡ ಗಂಭೀರ ಸಮಸ್ಯೆಯಾಗಿ ಪರಿಣಮಿಸಿರುವ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಲೈಂಗಿಕ ಕಾರ್ಯಕರ್ತೆಯರು ಸಾಮಾಜಿಕ ಸ್ಥಿತಿಗತಿಗಳು, ಶೋಷಣೆಗಳು ವಿಶ್ಲೇಷಣೆಗೊಳಪಡಿಸಬೇಕಾದ ತುರ್ತು ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಅವರ ಸಾಮಾಜಿಕ ಸ್ಥಿತಿಗತಿಗಳು ಕುರಿತು ಚರ್ಚಿಸಲಾಗಿದೆ.

ಪ್ರಸ್ತುತ ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗಳ ಕುರಿತು ಕೈಗೊಂಡಿರುವ ಅಧ್ಯಯನದ ಸ್ವರೂಪ ಈ ಕೆಳಕಂಡಂತೆ ಗುರುತಿಸಲಾಗಿದೆ.

ಮೊದಲನೆಯ ಅಧ್ಯಯನದಲ್ಲಿ ಅಧ್ಯಯನದ ಉದ್ದೇಶ ಮತ್ತು ವಿಧಾನ, ಸ್ವರೂಪ ಹಾಗೂ ಲೈಂಗಿಕ ಕಾರ್ಯಕರ್ತೆಯರ ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನಗಳು ವಿವರಿಸಿದ್ದೇನೆ. ಅಲ್ಲದೆ ಅಧ್ಯಯನ ಕ್ಷೇತ್ರವನ್ನು ಪರಿಚಯಿಸಲಾಗಿದೆ.

ಎರಡನೆಯ ಅಧ್ಯಯನದಲ್ಲಿ ವೇಶ್ಯಾವೃತ್ತಿ ಅರ್ಥಾತ್ ಲೈಂಗಿಕ ಕಾರ್ಯಕರ್ತೆಯರ ಐತಿಹಾಸಿಕ ಹಿನ್ನೆಲೆ, ವೈಶ್ಯಾವೃತ್ತಿಯ ಪರಿಕಲ್ಪನೆ, ಲೈಂಗಿಕ ವೃತ್ತಿಯಲ್ಲಿ ತೊಡಗಲು ಪ್ರೇರಿತವಾದ ಅಂಶಗಳು, ವೇಶ್ಯಾವತ್ತಿಯ ಪ್ರಕಾರಗಳು ಕುರಿತು ವಿವರಿಸಲಾಗಿದೆ.

ಮೂರನೆಯ ಅಧ್ಯಯನದಲ್ಲಿ ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳು, ಅವರ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರ ಕ್ರಮಗಳು, ಅಧ್ಯಯನದ ಫಲಿತಾಂಶಗಳು ಕುರಿತು ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಯನದಲ್ಲಿ ನಾಲ್ಕು ಜನ ಲೈಂಗಿಕ ಕಾರ್ಯಕರ್ತೆಯರ ವೃತ್ತಾಂತಗಳನ್ನು ವಿವರಿಸಲು ಇಷ್ಟಪಡುತ್ತೇನೆ. ಮತ್ತು ಸಮಾರೋಪ ಹಾಗೂ ಕೆಲವು ಸಲಹೆಗಳನ್ನು ನೀಡಲಾಗಿದೆ. ಕೊನೆಯಲ್ಲಿ ಅನುಬಂಧದಲ್ಲಿ ಗ್ರಂಥಋಣ, ಕೋಷ್ಟಕ, ವಕ್ತೃವಿವರ ತಿಳಿಸಲಾಗಿದೆ.

೧.೫. ಲೈಂಗಿಕ ಕಾರ್ಯಕರ್ತೆಯರ ಕುರಿತು ನಡೆದ ಅಧ್ಯಯನಗಳು

ಲೈಂಗಿಕ ಕಾರ್ಯಕರ್ತೆಯರ ಅಥವಾ ಲೈಂಗಿಕ ವೃತ್ತಿ ಮಹಿಳೆಯರ ಕುರಿತು ಹಲವಾರು ಅಧ್ಯಯನಗಳು ನಡೆದಿವೆ. ಅವುಗಳು ಲೈಂಗಿಕ ಕಾರ್ಯಕರ್ತೆಯರ ಬದುಕು ಮತ್ತು ಬವಣೆಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ.

ಪ್ರಥಮವಾಗಿ ಸಿಮೋನ್ ದ ಬೋವಾರವರು 'ದಿ ಸೆಕೆಂಡ್ ಸೆಕ್ಸ್' (೧೯೦೮-೧೯೮೬) ಕೃತಿಯಲ್ಲಿ ವೇಶ್ಯಾವೃತ್ತಿ ಅತವಾ ಲೈಂಗಿಕ ವೃತ್ತಿ ಪಾಶ್ಚ್ಯಾತ ನೆಲೆಗಟ್ಟಿನಲ್ಲಿ ಹೇಗೆ ಬೆಳೆದುಕೊಂಡು ಬಂದಿದೆ ಎಂಬುದನ್ನು ಹಲವಾರು ನಿರ್ದೇಶನಗಳ ಮೂಲಕ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಎನ್. ಗಾಯತ್ರಿಯವರು 'ಮಹಿಳೆ ಬಿಡುಗಡೆಯ ಹಾದಿಯಲ್ಲಿ' (೧೯೯೧) ವೇಶ್ಯಾವೃತ್ತಿಯ ಮಹಿಳೆಯರ ಸ್ಥಿತಿಗತಿಗಳ ಕುರಿತು ವಿವರಿಸಿದ್ದಾರೆ. ಡಾ. ಕೆ.ಜಿ. ಗುರುಮೂರ್ತಿಯವರು 'ಹರಕೆಯ ಹೆಣ್ಣು' (೧೯೯೨) ಎಂಬ ಕೃತಿಯಲ್ಲಿ ಭಾರತದ ವೇಶ್ಯಾವೃತ್ತಿಯ ಪರಿಚಯ ಹಾಗೂ ಅವರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳ ಕುರಿತು ಆಳವಾದ ಅಧ್ಯಯನ ಮಾಡಿದ್ದಾರೆ.

ಡಾ. ಶೈಲಜ ಹಿರೇಮಠರವರು 'ಪಾತರದವರು' (೧೯೯೯) ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತ್ತಿ ಮಹಿಳೆಯರ ಅಂದಿನ ಸಾಂಸ್ಕೃತಿಕ ಬದುಕಿನಿಂದ ಇಂದಿನ ಅತಂತ್ರ ಬದುಕಿಗೆ ಬಂದ ರೀತಿ ಕುರಿತು ಅಧ್ಯಯನ ಮಾಡಿದ್ದಾರೆ.

ಚೆನ್ನಣ್ಣ ವಾಲಿಕಾರ್‌ರವರು 'ಮಹಾರಾಷ್ಟ್ರ ರಾಜ್ಯದ ತುಂಬ ಹರಿಯುತ್ತಿರುವ ವೇಶ್ಯಾ ಸೋದರಿಯರ ಕಣ್ಣೀರಿನ ಕಡಲಿನ ಕೋಗಿಲೆ ಗಾನ' ಎಂ ಕೃತಿಯಲ್ಲಿ ವೇಶ್ಯಾವೃತ್ತಿ ಮಹಿಳೆಯರ ಕರುಣಾಜನಕ ಸ್ಥಿತಿಯನ್ನು ಬಹಳಷ್ಟು ಮಾರ್ಮಿಕವಾಗಿ ವಿವರಿಸಿದ್ದಾರೆ. ಮತ್ತು ವಾಲಿಕಾರ್‌ರವರ ಇನ್ನೊಂದು ಕೃತಿಯಾದ 'ಕರ್ನಾಟಕ ದೇವದಾಸಿಯರ ಸಮಾಜೋಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ' (೨೦೦೧) ಎಂಬ ಮಹಾ ಗ್ರಂಥವು ಕರ್ನಾಟಕದಲ್ಲಿ ದೇವದಾಸಿಯರು ಮತ್ತು ವೇಶ್ಯಾ ಪದ್ಧತಿ ಕುರಿತು ಬೆಳಕು ಚೆಲ್ಲುವ ಮಹತ್ವದ ದಾಖಲೆಯ ಕೃತಿಯಾಗಿದೆ.

ಈ ರೀತಿಯಾಗಿ ವೇಶ್ಯಾವೃತ್ತಿ ಮಹಿಳೆಯರ ಕುರಿತು ಅನೇಕ ವಿದ್ವಾಂಸರು, ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು, ಪ್ರಗತಿಪರ ಚಿಂತಕರು ಅಧ್ಯಯನ ಮಾಡಿದ್ದಾರೆ ಎಂದು ಹೇಳಬಹುದು.

೧.೬. ಅಧ್ಯಯನದ ಕ್ಷೇತ್ರ ಪರಿಚಯ

ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳ ಅಧ್ಯಯನಕ್ಕೆ ಗುಲಬರ್ಗಾ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಗುಲಬರ್ಗಾ ಜಿಲ್ಲೆಯನ್ನು ಪರಿಚಯಿಸುವುದು ಸೂಕ್ತವೆನಿಸುತ್ತದೆ.

ಇಡೀ ಕರ್ನಾಟಕದಲ್ಲಿಯೇ ಅತ್ಯಂತ ದೊಡ್ಡ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಗುಲಬರ್ಗಾ ಜಿಲ್ಲೆ ಕರ್ನಾಟಕದ ಉತ್ತರ ಭಾಗದಲ್ಲಿವೆ. ೧೯೫೬ರಲ್ಲಿ ರಾಜ್ಯ ಪುನರ್ವಿಂಗಡಣೆಯಾದಾಗ ಹೈದ್ರಾಬಾದ ಕರ್ನಾಟಕ ಪ್ರದೇಶದಿಂದ ಅಂದಿನ ಮೈಸೂರು ರಾಜ್ಯಕ್ಕೆ ಬೀದರ ಮತ್ತು ರಾಯಚೂರು ಜಿಲ್ಲೆಗಳೊಂದಿಗೆ ಸೇರ್ಪಡೆಯಾಯಿತು. ಉತ್ತರದಲ್ಲಿ ಬೀದರ ಮತ್ತು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆ, ಪೂರ್ವದಲ್ಲಿ ಆಂಧ್ರಪ್ರದೇಶ ಮೇಡರ್ ಮತ್ತು ಮಹಬೂಬ್ ನಗರ ಜಿಲ್ಲೆಗಳು, ದಕ್ಷಿಣದಲ್ಲಿ ರಾಯಚೂರು ಜಿಲ್ಲೆ, ಪಶ್ಚಿಮದಲ್ಲಿ ಬಿಜಾಪೂರ ಮತ್ತು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆ. ಇವು ಗುಲಬರ್ಗಾ ಜಿಲ್ಲೆಯನ್ನು ಸುತ್ತುವರಿದಿದೆ.

ಈ ಜಿಲ್ಲೆಗೆ ಮೊದಲು ಕಲಬುರ್ಗಿ ಎಂದು ಕರೆಯುತ್ತಿದ್ದರು. ಕಲ್ಲು ಪಂಬರಿಕೆ ಅಂದರೆ ಕಲ್ಲಿನ ಪದರುಗಳ ಪ್ರದೇಶವೆಂಬ ಅರ್ಥ ಹೊಂದಿದ ಹೆಸರು ಮುಂದೆ ಕಲಬುರ್ಗಿಯಾಗಿ ರೂಪುಗೊಂಡಿದೆ. ನಂತರ ಬಹುಮನಿ ಅರಸರ ಕಾಲದಲ್ಲಿ ಗುಲಬರ್ಗಾ ಎಂದು ಕರೆಯಲ್ಪಟ್ಟಿತ್ತು. 'ಗುಲ್' ಎಂದರೆ ಹೂವು 'ಬರ್ಗ್' ಎಂದರೆ 'ಎಲೆ' ಎಂಬ ಅರ್ಥವಿದೆ. ಪರ್ಶಿಯನ್ ಭಾಷೆಯ ಈ ಹೆಸರು ಹೂವು ಎಲೆಗಳ ಸುಂದರ ಪ್ರದೇಶ ಎಂಬ ಅರ್ಥವನ್ನು ನೀಡುತ್ತದೆ. ಅಂದರೆ ಕಲಬುರ್ಗಿಯು ಸುಂದರ ಉದ್ಯಾನನಗರಿಯೆಂದು ಕರೆಯಲ್ಪಡುತ್ತಿತ್ತು. ಇಂದು ಗುಲಬರ್ಗಾ ಎಂದೆ ಜನಪ್ರಿಯವಾಗಿದೆ. ಹಿರಿಯರು ಇಂದಿಗೂ ಕೂಡ ಕಲಬುರ್ಗಿ ಎಂದೆ ಕರೆಯುತ್ತಾರೆ.

೧೬.೨೪೨ ಚ.ಕಿ.ಮೀ. ವಿಸ್ತೀರ್ಣ ಹೊಂದಿರುವ ಗುಲಬರ್ಗಾ ಜಿಲ್ಲೆ ೨೫.೮೫.೧೯೯ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿದೆ. ಅದರಲ್ಲಿ ೧೩.೧೧.೬೬೪ ಕ್ಕಿಂತ ಹೆಚ್ಚು ಪುರುಷರಿದ್ದರೆ ೧೨.೬೨.೨೩೬ರಷ್ಟು ಸ್ತ್ರೀಯರಿದ್ದಾರೆ. ಗುಲಬರ್ಗಾ, ಚಿತ್ತಾಪೂರ, ಅಫಜಲ್‌ಪುರ, ಆಳಂದ, ಯಾದಗಿರಿ, ಚಿಂಚೋಳಿ, ಜೇವರ್ಗಿ, ಶಹಾಪೂರ, ಸುರಪುರ ಎಂಬ ಹತ್ತು ತಾಲ್ಲೂಕುಗಳನ್ನು ಹೊಂದಿರುವ ಈ ಜಿಲ್ಲೆಗೆ ಇತ್ತೀಚೆಗೆ ಹುಣಸಿಗಿ, ವಡಗೇರಾ, ಯಡ್ರಾಮ, ಕಾಳಗಿ ಹೊಸ ತಾಲ್ಲೂಕಗಳು ರಚನೆಯಾಗಿವೆ. ಅಲ್ಲದೆ ಆಡಳಿತದ ಅನುಕೂಲಕ್ಕಾಗಿ ಗುಲಬರ್ಗಾ ಜಿಲ್ಲೆ ವಿಭಜಿಸಿ ಯಾದಗಿರಿ ಜಿಲ್ಲೆಯೆಂದು ಘೋಷಿಸಿಲಾಗಿದೆ. ನವ್ಹೆಂಬರ್ ೧, ರಾಜ್ಯೋತ್ಸವ ದಿನದಂದು ಅಧಿಕೃತವಾಗಿ ಜಾರಿಗೆ ಬರಲಿದೆ. ಆದರೆ ಈ ಹೊಸ ಜಿಲ್ಲೆಗೆ ಇನ್ನೂ ತಾಲ್ಲೂಕುಗಳು ಹಂಚಿಕೆಯಾಗಿಲ್ಲ.

ಪ್ರಾಕೃತಿಕ ಭೂಸಂಪತ್ತು, ಖನಿಜ ಸಂಪತ್ತು, ಸಾಹಿತ್ಯ, ಸಂಗೀತ, ಲಲಿತ ಕಲೆ ಜೊತೆಗೆ ಧಾರ್ಮಿಕ ನೆಲೆ ಮತ್ತು ಐತಿಹಾಸಿಕ ಪರಂಪರೆ ಈ ಜಿಲ್ಲೆಗಿದೆ. ಅರ್ಥಪೂರ್ಣವಾದ ಸಾಂಸ್ಕೃತಿಕ ಸಂಪನ್ನತೆಯಿದೆ. ಶಾತವಾಹನರು, ಚಾಲುಕ್ಯರು, ರಾಷ್ಟ್ರಕೂಟರು, ಕಳಚೂರ್ಯರು, ಸೇವುಣರು ರಾಜ್ಯವಾಳಿದ ಈ ಪ್ರದೇಶದಲ್ಲಿ ಬಹುಮನೀ ಅರಸರು, ಆದಿಲ್‌ಶಾಹಿ ಅರಸರು ಆಳ್ವಿಕೆ ನಡೆಸಿದ ನಂತರ ಹೈದ್ರಾಬಾದ ನಿಜಾಮರು ಆಳಿದ್ದಾರೆ. ಹೀಗಾಗಿ ಈ ಪ್ರದೇಶವು ಹಲವಾರು ಧರ್ಮಗಳ ಅರಸರ ಆಳ್ವಿಕೆಗೆ ಒಳಗಾಗಿದ್ದರಿಂದ ಇಲ್ಲಿಯ ಧರ್ಮ, ಸಂಸ್ಕೃತಿ ಹಾಗೂ ಸಾಹಿತ್ಯ ಕ್ಷೇತ್ರಗಳು ಅನ್ಯ ಸಂಸ್ಕೃತಿ ಹಾಗೂ ಧರ್ಮಗಳ ಪ್ರಭಾವಕ್ಕೆ ಒಳಗಾಗಿ ತನ್ನದೇಯಾದ ವೈಶಿಷ್ಟ್ಯಗಳನ್ನು ಮೂಡಿಸಿಕೊಂಡಿದೆ.

ಸಾಮಾಜಿಕ ಜೀವನ

ಗುಲಬರ್ಗಾ ಜಿಲ್ಲೆ ಸಾಮಾಜಿಕ, ಆರ್ಥಿಕ, ರಾಜಕೀಯ ದೃಷ್ಟಿಯಿಂದ ಹಿಂದೂಳಿದ

ಪ್ರದೇಶವಾಗಿದೆ. ಒಂದು ಭಾಗದ ಸಾಮಾಜಿಕ ಜೀವನ ತಿಳಿದುಕೊಳ್ಳಬೇಕಾದರೆ ಅಲ್ಲಿನ ಕೌಟುಂಬಿಕ, ವೈವಾಹಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಜೀವನದ ಚಿಂತನೆ ಮಾಡಬೇಕಾಗುತ್ತದೆ.

ಅವಿಭಕ್ತ ಕುಟುಂಬ ಈ ಭಾಗದ ಜನಜೀವನದ ಮಹತ್ವದ ಲಕ್ಷಣವಾಗಿದೆ. ಪಿತೃ ಪ್ರಧಾನ ಕುಟುಂಬಗಳು ಹೆಚ್ಚು ಕಂಡುಬರುತ್ತವೆ. ಈ ಕುಟುಂಬಗಳು ಸಾಂಸ್ಕೃತಿಕವಾಗಿ ಬಂದ ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಮಹತ್ವದ ಪಾತ್ರವಹಿಸಿದೆ. ಹಲವು ಜಾತಿಗಳ ಸಮೂಹಗಳು, ವಿಭಿನ್ನ ಜಾತಿಗಳಲ್ಲಿ ಅನೇಕ ಸಾಂಪ್ರದಾಯಿಕ ಆಚರಣೆಗಳು, ಮಠ, ಮಸೀದಿ, ಗುಡಿಗುಂಡಾರಗಳ ವಿಭಿನ್ನ ಆಚರಣೆಗಳು, ನಂಬಿಕೆಗಳು, ಕೋಮು ಸೌಹಾರ್ದತೆ, ಧಾರ್ಮಿಕ ಸಹಿಷ್ಣುತಾ ಭಾವನೆ ಮುಂತಾದ ವಿಶಿಷ್ಟ ಅಂಶಗಳನ್ನು ಕಾಣಬಹುದಾಗಿದೆ.

ಭೂಸಂಪತ್ತು

ವಿಶ್ವದಲ್ಲಿಯೇ ಪ್ರಸಿದ್ದ ತೊಗರಿ ಕಣಜ, ಜೋಳ, ಭತ್ತ, ಸಜ್ಜೆ, ಹುರುಳಿ, ಅವರೆ, ಕಬ್ಬು, ಮೆಣಸಿನಕಾಯಿ, ಹತ್ತಿ, ಗೋದಿ ಇಂದು ಸಮೃದ್ಧವಾಗಿ ಬೆಳೆಯುತ್ತಾರೆ. ತಂಬಾಕು, ಕಡಲೆ, ಶೇಂಗಾ, ಅಗಸೆ, ಕುಸುಬಿ ಎಣ್ಣೆ ಬೆಳೆಗಳು ಜಿಲ್ಲೆಯ ಮುಖ್ಯ ಬೆಳಗಳಾಗಿವೆ.

ಜಿಲ್ಲೆಯ ಮುಖ್ಯ ನದಿಗಳು

ಕೃಷ್ಣಾ ಮತ್ತು ಭೀಮಾ, ಕಾಗಿಣಾ, ಅಮರ್ಜಾ, ಮುಲ್ಲಾಮರಿ, ಕಲಾವತಿ, ಬೆಣ್ಣೆತೋರಾ ಮತ್ತು ಗಂಡೋರಿ ಈ ಜಿಲ್ಲೆಯ ಅನ್ನದ ಜೀವನದಿಗಳಾಗಿವೆ. ನೀರಾವರಿ ಹೊಂದಿದ ಪ್ರದೇಶಗಳಲ್ಲಿ ಉಳ್ಳಾಗಡ್ಡಿ ಸಾಕಷ್ಟು ಬೆಳೆಯುತ್ತಾರೆ. ನದಿಗಳ ದಡದಲ್ಲಿ ಕರಬೂಜ ಮತ್ತು ಕಲ್ಲಂಗಡಿ ಬೇಸಗೆಯ ಬಿಸಿಯನ್ನು ತಣಿಸುತ್ತದೆ.

ಭೂಗರ್ಭ ಸಂಪತ್ತು

ವಿಶ್ವವಿಖ್ಯಾತ ಸಿಮೆಂಟ್ ಕಾರ್ಖಾನೆಗಳು ಬ್ಲೂ ಶಾಬಾದ ಕಲ್ಲುಗಳು ಇತ್ತೀಚೆಗೆ ಮಾಸಾಯಿಕ ನೆಲಹಾಸೆ ನಾಚಿಸುವಂತಹ ಸೇಡಂದಲ್ಲಿ ಸಿಗುವ ಪಿಂಕ ಚೀಟಾ ಕಲ್ಲುಗಳು, ಪುಲ್ಲದ ಅರ್ತ ಎಂದು ಹೇಳಿಕೊಳ್ಳುವ ಪೆಟ್ರೋಲಿಯಂ ಶುದ್ಧಗೊಳಿಸುವ ಸಾಳು ಮಣ್ಣು, ಗ್ರಾನೈಟ್ ಕಲ್ಲು, ಮುಂದಿನ ಭವಿಷ್ಯದ ಆಶಾಕಿರಣವಾಗಿರುವ ಶಹಾಪೂರ ತಾಲ್ಲೂಕಿನ ಗೋಗಿಯಲ್ಲಿ ದೊರೆತಿರುವ ಯುರೇನಿಯಂ ನಿಕ್ಷೇಪ ಗುಲಬರ್ಗಾ ಜಿಲ್ಲೆಯ ಸಂಪತ್ತಾಗಿದೆ.

ಧಾರ್ಮಿಕ ಸಹಿಷ್ಣುತೆಯ ತಳಹದಿ

ಗುಲಬರ್ಗಾ ಜಿಲ್ಲೆ ಕೋಮು ಸೌಹಾರ್ದತೆಗೆ ಹೆಸರುವಾಸಿಯಾಗಿದೆ. ನಗರದಲ್ಲಿರುವ ಶ್ರೀ ಶರಣಬಸವೇಶ್ವರ ಮಂದಿರ ಹಾಗೂ ಖಾಜಾ ಬಂದವಾಜ ದರ್ಗಾ ಇವೆರಡು ಗುಲಬರ್ಗಾದ ಎರಡು ಶಿಖರಗಳಾಗಿವೆ. ಖಾಜಾ ಬಂದನವಾಜ ದರ್ಗಾದಿಂದ ಬೆಳ್ಳಿ ಬಟ್ಟಲು ತಂದೆ ನಂತರವೇ ಶ್ರೀ ಶರಣಬಸವೇಶ್ವರ ರಥೋತ್ಸವ ನೇರವೇರುತ್ತದೆ. ಹಾಗೆಯೇ ಶರಣಬಸವೇಶ್ವರ ದೇವಸ್ಥಾನದ ಸ್ವಾಮಿಗಳಿಂದ ಗಂಧ ತಂದ ನಂತರವೇ ಬಂದನವಾಜ ದರ್ಗಾದ ಉರುಸ್ ಪ್ರಾರಂಭವಾಗುತ್ತದೆ. ಇದು ಹಿಂದೂ-ಮುಸ್ಲಿಂ ಹಾಗೂ ಬೌದ್ಧ ಧರ್ಮಗಳ ತ್ರಿವೇಣಿ ಸಂಗಮಕ್ಕೆ ಸೊಗಸನ್ನುಂಟು ಮಾಡಿದೆ. ಈ ಬೌದ್ಧವಿಹಾರ ಈ ಬೌದ್ಧವಿಹಾರ ಇಡೀ ಏಶಿಯಾ ಖಂಡದಲ್ಲಿಯೇ ಅತ್ಯಂತ ದೊಡ್ಡದಾಗಿದ್ದು, ಭಾವೈಕ್ಯತೆಯ ಬೆಸುಗೆಯಾಗಿದೆ. ಈಚೆಗೆ ಭಾರತದ ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ಪಾಟೀಲ ಹಾಗೂ ಬೌದ್ಧಗುರು ದಲೈಲಾಮಾ ಅವರಿಂದ ರಾಷ್ಟ್ರಕ್ಕೆ ಸಮರ್ಪಣೆಗೊಂಡ ಭವ್ಯವಾದ ಬೌದ್ಧವಿಹಾರ ಇಡೀ ಏಷಿಯಾ ಖಂಡದಲ್ಲಿಯೇ ಅತ್ಯಂತ ದೊಡ್ಡದಾಗಿದ್ದು ಜಿಲ್ಲೆಗೆ ಹೆಮ್ಮೆಯ ಸಂಗತಿ. ಇದು ಕನ್ನಡ ಹಾಗೂ ಭಾರತೀಯ ಸಂಸ್ಕೃತಿಗೆ ಕನ್ನಡಿಯನ್ನು ಹಿಡಿದಿದೆ.

ಹೀಗೆ ಈ ಜಿಲ್ಲೆ ಸಾಹಿತ್ಯ, ಸಂಸ್ಕೃತಿ, ಶಿಲ್ಪಕಲೆ ಮುಂತಾದ ಅನೇಕ ಮಹತ್ವದ ವೈಶಿಷ್ಟ್ಯಗಳನ್ನು ಹೊಂದಿದೆ.

೧.೬. ಗುಲಬರ್ಗಾ ಜಿಲ್ಲೆಯ ಶೈಕ್ಷಣಿಕ ಹೆಜ್ಜೆಗಳು

ಯಾವುದೇ ಪ್ರದೇಶ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ರಂಗಗಳು ಅಭಿವೃದ್ಧಿಯಾಗಬೇಕಾದರೆ ಶಿಕ್ಷಣವೇ ಮೂಲ ಕಾರಣವಾಗಿದೆ. ಸುಮಾರು ೯ನೇ ಶತಮಾನದಿಂದ ೧೨ನೇ ಶತಮಾನದವರೆಗೆ ಈ ಭಾಗ ಶೈಕ್ಷಣಿಕವಾಗಿ ಉತ್ತುಂಗ ಸ್ಥಾನದಲ್ಲಿತ್ತು. ೯ನೇ ಶತಮಾನದಲ್ಲಿ ನಾಗಾವಿ ವಿಶ್ವವಿದ್ಯಾಲಯ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನಲ್ಲಿತ್ತು ಎಂದು ತಿಳಿದುಬರುತ್ತದೆ. ಜಿಲ್ಲೆಯ ಅತ್ಯಂತ ಹಳೆಯವಾದ ಶೈಕ್ಷಣಿಕ ಇತಿಹಾಸವನ್ನು ತಿಳಿಸುವ ಸ್ಥಳ ಇದಾಗಿದೆ. ಷಟ್‌ಶಾಸ್ತ್ರಗಳ ಬೋಧನೆ ಇಲ್ಲಿ ಲಭ್ಯವಿತ್ತು. ೨೫೭ ವಿದ್ಯಾರ್ಥಿಗಳ ಊಟ ಮತ್ತು ವಸತಿ ಸೌಕರ್ಯವನ್ನು ಇದು ಒದಗಿಸುತ್ತಿತ್ತು ಎಂದು ತಿಳಿದುಬರುತ್ತದೆ.

ಮಧ್ಯಯುಗದ ಮಹಮ್ಮದೀಯ ಅರಸರ ಆಳ್ವಿಕೆಯಲ್ಲಿ ಈ ಭಾಗಕ್ಕೆ ಇಸ್ಲಾಮಿ ಮಾದರಿಯ ಶಿಕ್ಷಣ ದೊರೆಯಿತು. ಬೀದರಿನ 'ಮಹಮ್ಮದ ಶಾ' ಅರಸನ ಗವಾನ, ಶಿಕ್ಷಣ ಪ್ರೇಮಿಯಾಗಿದ್ದನು.

ಅವನು ಈ ಪ್ರದೇಶದಲ್ಲಿ 'ಮುಕ್ತಾಬ' ಅಥವಾ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದನು. ೧೧ನೇ ಶತಮಾನದಲ್ಲಿ ವಿಜ್ಞಾನೇಶ್ವರನು ಮರತೂರಿನಲ್ಲಿದ್ದು ಲೋಕವಿಖ್ಯಾತವಾಗಿರುವ ಮಿತಾಕ್ಷರ ಕಾನೂನು ಗ್ರಂಥವನ್ನು ಬರೆದನು. ೧೨ನೇ ಶತಮಾನದಲ್ಲಿ ಬಸವಾದಿ ಶರಣರು ಬಸವ ಕಲ್ಯಾಣದಲ್ಲಿ ಸೇರಿ ವಚನ ಸಾಹಿತ್ಯದ ಸೃಷ್ಟಿಯ ಮೂಲಕ ಕನ್ನಡದ ಮನಸ್ಸುಗಳನ್ನು ತೊಳಗಿ ಬೆಳಗಿದರು.

ಆದರೆ ೧೫ನೇ ಶತಮಾನದಿಂದ ೧೯ನೇ ಶತಮಾನದವರೆಗೆ ಹಲವಾರು ಕಾರಣಗಳಿಂದ ಈ ಪ್ರದೇಶದಲ್ಲಿ ಶಿಕ್ಷಣ ಬಹಳ ಸಂಸ್ಕೃತಿಗೆ ಇಳಿಯಿತು. ಸ್ವಾತಂತ್ರ್ಯ ನಂತರ ಹಲವಾರು ಶಿಕ್ಷಣ ಪ್ರೇಮಿಗಳ, ಚಿಂತಕರ ರಾಜಕೀಯ ಮುತ್ಸದ್ದಿಗಳ ಪ್ರಯತ್ನದಿಂದ ಈ ಭಾಗ ಶೈಕ್ಷಣಿಕವಾಗಿ ಹಂತ ಹಂತವಾಗಿ ಬೆಳೆಯಲು ಪ್ರಾರಂಭಿಸಿತು. ೧೯೮೦ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಇಂದು ೪ಕ್ಕಿಂತ ಹೆಚ್ಚು ಇಂಜಿನಿಯರ್ ೨ ಮೆಡಿಕಲ್ ಹಾಗೂ ಆಯುರ್ವೇದಿಕ್, ಡೆಂಟಲ್, ನರ್ಸಿಂಗ್ ಲಾ ಫಾರ್ಮಸಿ ಮೊದಲಾದ ಅತ್ಯಾಧುನಿಕ ಹಾಗೂ ವೃತ್ತಿಪರ ಕಾಲೇಜುಗಳು ಪ್ರಾರಂಭವಾಗಿವೆ. ಇಂದು ಶೈಕ್ಷಣಿಕವಾಗಿ ಗುಲಬರ್ಗಾ ಜಿಲ್ಲೆ ಮಹತ್ತರ ದಾಪುಗಾಲನ್ನು ಇಡುತ್ತ ನಡೆದಿದೆ ಎಂದು ಹೇಳಬಹುದು.

ಈ ಜಿಲ್ಲೆಯಲ್ಲಿ ಪ್ರತಿಶತ ಪುರುಷರಲ್ಲಿ ಪ್ರತಿಶತ ೧೨.೪ರಷ್ಟು ಸಾಕ್ಷರರಾಗಿದ್ದಾರೆ. ೩.೭ರಷ್ಟು ಮಹಿಳೆಯರು ಅಕ್ಷರಭ್ಯಾಸ ಕಲಿತಿದ್ದಾರೆ. ಇಲ್ಲಿನ ಜನತೆ ಕನ್ನಡ, ಹಿಂದಿ, ಉರ್ದು, ಮರಾಠಿ ಮುಂತಾದ ಭಾಷೆಗಳನ್ನಾಡುತ್ತಾರೆ.

ಕಲಬುರ್ಗಿ ಜಿಲ್ಲೆಯ ಒಟ್ಟು ಸಾಮಾಜಿಕ ಜೀವನ ಅವಲೋಕಿಸಿದಾಗ ತಿಳಿದುಬರುವ ಸಂಗತಿ ಎಂದರೆ ಸಮೃದ್ಧಿಯಾದ ಜನಸಂಖ್ಯೆ, ಅಲ್ಪಪ್ರಮಾಣದ ಸಾಕ್ಷರಸ್ಥರ ಸಂಖ್ಯೆ, ಕೃಷಿ ಪ್ರಧಾನ ಸಮೂಹಗಳಲ್ಲಿ ಪೂರ್ಣ ಪ್ರಾಥಮಿಕ ಸಂಬಂಧಗಳು ವೈವಿಧ್ಯಮಯವಾದ ಭಾಷಾ ಬಳಕೆ, ಅವಿಭಕ್ತ ಕುಟುಂಬ, ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ, ಧಾರ್ಮಿಕ ಸಹಿಷ್ಣುತೆ ಹೀಗೆ ಹತ್ತು ಹಲವಾರು ವಿಶಿಷ್ಟ ಅಂಶಗಳು ಗಮನಕ್ಕೆ ಬರುತ್ತವೆ. ಅಲ್ಲದೆ ಬಡತನ, ನಿರುದ್ಯೋಗ, ಕೃಷಿಕರ ಸಮಸ್ಯೆ, ಕೊಳಚೆ, ಶೈಕ್ಷಣಿಕ ಸಮಸ್ಯೆ, ವೇಶ್ಯಾವೃತ್ತಿ, ಮಕ್ಕಳ ಮಾರಾಟ, ಬಾಲಾಪರಾಧಗಳು, ಹೆಣ್ಣು ಭ್ರೂಣ ಹತ್ಯೆ, ಬಾಲಕಾರ್ಮಿಕ ಸಮಸ್ಯೆ ಮುಂತಾದ ಸಮಸ್ಯೆಗಳು ಈ ಜಿಲ್ಲೆ ಎದುರಿಸುತ್ತಿದೆ. ಇಂದು ಜಿಲ್ಲೆಯಲ್ಲಿ ಕಂಡುಬರುವ ಲೈಂಗಿಕ ಕಾರ್ಯಕರ್ತೆಯರ ಸ್ಥಿತಿ ಶೋಚನೀಯವಾಗಿದೆ. ಅವರು ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಆದ್ದರಿಂದ ಅವರ ಸಾಮಾಜಿಕ ಸ್ಥಿತಿಗತಿಗಳನ್ನು

ಕುಲಂಕೂಷವಾಗಿ ಅಧ್ಯಯನ ಮಾಡಿ ಲೈಂಗಿಕ ಕಾರ್ಯಕರ್ತೆಯರ ಬದುಕು ಬವಣೆಗಳ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸಲಾಗಿದೆ.

ಅಡಿಟಿಪ್ಪಣಿಗಳು:

೧. ಕರ್ನಾಟಕದ ದೇವದಾಸಿಯರ ಸಮಾಜೋ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ, ಡಾ. ಚೆನ್ನಣ್ಣ ವಾಲಿಕಾರ, ಪುಟ–೨೨೩.

೨. ಕಲಬುರ್ಗಿ ಜಿಲ್ಲಾ ೧೦ನೇ ಕನ್ನಡ ಸಾಹಿತ್ಯ ಸಮ್ಮೇಳನ, ಡಾ. ಡಿ.ಬಿ.ನಾಯಕ, ಪುಟ–೭.

೩. ಕಲಬುರ್ಗಿ ಜಿಲ್ಲಾ ದರ್ಶನ, ಡಾ. ಟಿ.ಎಂ.ಭಾಸ್ಕರ, ಶ್ರೀ ರಾಜಶೇಖರ ಹತಗುಂದಿ, ಪುಟ–೧೮, ೨೨.

೪. ಓಲಂಪಿಕ್ಸ್ ಎಂಬ ಕೆಂಪು ದೀಪ, ಡಾ. ಲೀಲಾ ಸಂಪಿಕೆ, ಪುಟ–೧೨, ೧೬

ಅಧ್ಯಾಯ ೨

ವೇಶ್ಯಾವೃತ್ತಿ ನಡೆದು ಬಂದ ದಾರಿ

೨.೧. ವೇಶ್ಯಾವೃತ್ತಿ ಅರ್ಥಾತ್ ಲೈಂಗಿಕ ಕಾರ್ಯಕರ್ತೆಯರ ಐತಿಹಾಸಿಕ ಹಿನ್ನೆಲೆ

೨.೨. ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತ್ತಿಯ ಪರಿಕಲ್ಪನೆ

೨.೩. ವೇಶ್ಯಾವೃತ್ತಿಯಲ್ಲಿ ತೊಡಗಲು ಪ್ರೇರಿತವಾದ ಅಂಶಗಳು

೨.೪. ಲೈಂಗಿಕ ವೃತ್ತಿ ಅಥವಾ ವೇಶ್ಯಾವೃತ್ತಿಯ ಪ್ರಕಾರಗಳು

ವೇಶ್ಯಾವೃತ್ತಿ ನಡೆದು ಬಂದ ದಾರಿ

ವಿವಾಹ ಮತ್ತು ವೇಶ್ಯಾವೃತ್ತಿ ಇವುಗಳಲ್ಲಿ ಪರಸ್ಪರ ನೇರ ಸಂಬಂಧವಿದೆ. ವೇಶ್ಯಾವೃತ್ತಿ ಪ್ರಾಚೀನ ಕಾಲದಿಂದ ಇಂದಿನವರೆಗೂ ಕುಟುಂಬದ ಮೇಲೆ ಕಪ್ಪು ನೆರಳಿನಂತೆ ಕವಿದಿದೆ. ವಿವಾಹವೆಂಬುದು ಮಾನವರಲ್ಲಿನ ಲೈಂಗಿಕ ಬೇಡಿಕೆಯನ್ನು ಈಡೇರಿಸುವ ಮತ್ತು ಲೈಂಗಿಕ ಸಂಬಂಧಗಳನ್ನು ಕಟ್ಟುಪಾಡುಗಳಿಗೆ ಒಳಪಡಿಸುವ ಉದ್ದೇಶದೊಂದಿಗೆ ಜನ್ಮ ತಳೆದ ಸಂಸ್ಥೆ. ಯಾರು ಯಾರೊಂದಿಗೆ ವಿವಾಹವಾಗಬಹುದು ಮತ್ತು ಎಷ್ಟು ಜನರೊಂದಿಗೆ ಹೇಗೆ ಮತ್ತು ಯಾವ ವಯಸ್ಸಿನಲ್ಲಿ ವಿವಾಹವಾಗಬಹುದು ಎಂಬುದನ್ನು ಕುರಿತಂತೆ ಪ್ರತಿಯೊಂದು ಸಮಾಜದಲ್ಲಿ ಅಸಂಖ್ಯಾತ ನಿಯಮಗಳು ಬೆಳೆದುಬಂದಿರುತ್ತವೆ. ಈ ರೀತಿಯಾಗಿ ಸಮಾಜದಲ್ಲಿರುವ ಈ ಕೆಲವು ಸಾಮಾಜಿಕ ಕಟ್ಟುಪಾಡುಗಳಿಂದ ಕೆಲವರಿಗೆ ತಮ್ಮ ಲೈಂಗಿಕ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಅಡೆತಡೆಗಳು ನಿರ್ಮಾಣವಾಗುತ್ತವೆ. ಈ ಅಡೆತಡೆಗಳು ತಾತ್ಕಾಲಿಕವಾಗಿರಬಹುದು ಅಥವಾ ಶಾಶ್ವತವಾಗಿರಬಹುದು. ಸಮಾಜದಲ್ಲಿರುವ ವಿಧುರರು, ಸನ್ಯಾಸಿಗಳು, ವಿವಾಹದ ವಯಸ್ಸನ್ನು ಮೀರಿದ್ದರೂ ವಿವಾಹವಾಗದೆ ಉಳಿದವರು, ವಿವಾಹದ ವಯಸ್ಸಿನವರಗೆ ಕಾಯಲಾಗದವರು ಜೀವನ ಸಂಗಾತಿಗಳನ್ನು ಬಿಟ್ಟು ಪರಸ್ಥಳಕ್ಕೆ ದುಡಿಯಲು ಹೋದ ವಲಸಿಗರು, ಪ್ರಯಾಣಿಕರು, ನಾವಿಕರು ಮುಂತಾದವರು ತಮ್ಮ ಹಣ ಚೆಲ್ಲಿಯಾದರೂ ಸರಿ ತಮ್ಮ ಲೈಂಗಿಕೆ ಬಯಕೆಗಳನ್ನು ಈಡೇರಿಸುವ ಸಲುವಾಗಿ ವೇಶ್ಯಾವೃತ್ತಿ ಜನ್ಮ ತಳೆದಂತಿದೆ. ಇದಕ್ಕೆ ಸಮಾಜದ ಪ್ರಕಟಿತ, ಸ್ಪಷ್ಟ ಬೆಂಬಲವಿಲ್ಲದಿದ್ದರೂ, ಮಾನ್ಯತೆ ಇರದಿದ್ದರೂ ವೇಶ್ಯಾವೃತ್ತಿ ಹಿಂದಿನ ಕಾಲದಿಂದ ಇಲ್ಲಿಯವರೆಗೆ ನಿರಂತರವಾಗಿ ಬೆಳೆದುಬಂದಿದೆ. ಇದೊಂದು ಅತೀ ಪುರಾತನ ವೃತ್ತಿಯೆಂದು ಕುಖ್ಯಾತಿ ಪಡಿದಿದೆ. ವೇಶ್ಯಾವೃತ್ತಿ ನಡೆದು ಬಂದ ದಾರಿ, ಅದರ ಪರಿಕಲ್ಪನೆ ಹಾಗೂ ವೇಶ್ಯಾವೃತ್ತಿಯಲ್ಲಿ ತೊಡಗಲು ಕಾರಣವಾಗುವ ಅಂಶಗಳು ಮತ್ತು ಲೈಂಗಿಕ ವೃತ್ತಿಯ ಪ್ರಕಾರಗಳ ಕುರಿತು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

೨.೧. ವೇಶ್ಯಾವೃತ್ತಿ ಅರ್ಥಾತ್ ಲೈಂಗಿಕ ಕಾರ್ಯಕರ್ತೆಯರ ಐತಿಹಾಸಿಕ ಹಿನ್ನೆಲೆ

ಜಗತ್ತಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಸಮಸ್ಯೆಗಳಲ್ಲಿ ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತ್ತಿಯು ಒಂದು ಪುರಾತನವಾದ ವೃತ್ತಿಯಾಗಿದೆ. ಇದು ಇತರ ರಾಷ್ಟ್ರಗಳಲ್ಲಿ ವೇಶ್ಯಾವೃತ್ತಿಗೆ ಪೂರಕವಾದ ಅಂಶಗಳು ಬೇರೆ ಬೇರೆಯಾಗಿವೆ ಎಂದು ಹೇಳಬಹುದು.

ಪರ್ಷಿಯಾದ ರಾಜರು ಪಾನಗೋಷ್ಠಿಗಳಿಗೆ ತಮ್ಮ ಪತ್ನಿಯರನ್ನು ಆಹ್ವಾನಿಸುತ್ತಿದ್ದರು. ಅಲ್ಲಿ ಮದಿರೆಯನ್ನು ಸೇವಿಸಿ ಅವರು ಉತ್ತೇಜಿತರಾಗುವ ಹೊತ್ತಿಗೆ ಅವರು ಜಾಗರೂಕತೆಯಿಂದ ಪತ್ನಿಯರನ್ನು ಅವರವರ ಖಾಸಗಿ ಕೋಣೆಗಳಿಗೆ ಕಳುಹಿಸುತ್ತಿದ್ದರು. ತಮ್ಮ ಕಾಮದಾಸೆಯ ಅಸಭ್ಯ ನಡುವಳಿಕೆಗಳಲ್ಲಿ ಅವರು ಭಾಗಿಗಳಾಗಬಾರದು ಎಂದು ಎಚ್ಚರವಹಿಸುತ್ತಿದ್ದರು. ಅವರ ಬದಲು ಇತರ ಹೆಂಗಸರು ಅಲ್ಲಿ ಬರುತ್ತಿದ್ದರು. ಈ ಹೆಂಗಸರ ಬಗ್ಗೆ ರಾಜರಿಗೆ ಯಾವ ಗೌರವದ ಹೊಣೆಯೂ ಇರುತ್ತಿರಲಿಲ್ಲ.

ಅಮೇರಿಕಾದಲ್ಲಿ ಲಜ್ಜೆಗೆಟ್ಟ ಹೆಂಗಸರಿಂದಾಗಿ ಗೌರವಾನ್ವಿತ ಹೆಂಗಸರು ಸ್ಥಾನಮಾನಗಳನ್ನು ಕಾಯ್ದುಕೊಳ್ಳುವುದು ಅಸಾಧ್ಯವೆಂದು ಹೇಳಲಾಗುತ್ತದೆ. ವೇಶ್ಯೆ ಅಥವಾ ಲೈಂಗಿಕ ಕಾರ್ಯಕರ್ತೆ ಬೇಟೆಯ ಮಿಕ. ಗಂಡಸು ತನ್ನೆಲ್ಲ ಅತೃಪ್ತಿಯ ದಾಹವನ್ನು ಅವಳಲ್ಲಿ ಪೂರೈಸಿಕೊಳ್ಳುತ್ತಾನೆ. ಜೊತೆಗೆ ಆಕೆಯನ್ನು ತಿರಸ್ಕರಿಸುತ್ತಾನೆ. ಆಕೆ ಪೋಲಿಸರ ಸುರಕ್ಷೆಯಲ್ಲಿರಲಿ, ಇಲ್ಲವೇ ಅಕ್ರಮವಾಗಿ ದಂಧೆ ಮಾಡಲಿ, ಅವಳನ್ನು ಬೇಡದವಳೆಂದೇ ಪರಿಗಣಿಸಲಾಗುತ್ತಿತ್ತು.

ಪುರಾತನ ರೋಮ್ ಸಮಾಜದಲ್ಲಿ ವೇಶ್ಯಾವೃತ್ತಿ ಸರ್ವೆ ಸಾಮಾನ್ಯ ವೃತ್ತಿಯಾಗಿತ್ತು. ಈ ವೃತ್ತಿಯ ಮೇಲೆ ತೀಕ್ಷ್ಣವಾದ ಕಾನೂನು ಪ್ರತಿಬಂಧಕಗಳು ಇದ್ದವು. ರೋಮ್ ಸೈನ್ಯದಲ್ಲಿನ ಒಂದು ಸೈನಿಕ ವರ್ಗವು ಯುದ್ಧದಲ್ಲಿ ಬೇರೆ ದೇಶದಲ್ಲಿ ಸೆರೆ ಹಿಡಿದ ಸ್ತ್ರೀ ಗುಲಾಮರನ್ನು ತಂದು ನಗರದಲ್ಲಿನ ವೇಶ್ಯಾವಾಟಿಕೆಗಳಿಗೆ ತಳ್ಳುತ್ತಿದ್ದರು. ರೋಮನ್ ಅಧಿಕಾರಿಗಳು ಕಟ್ಟುನಿಟ್ಟಾದ ಕ್ರಮಗಳ ಮೂಲಕ ಗುಲಾಮ ವೇಶ್ಯೆಯರ ಸಂಖ್ಯೆಯನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದರು. ವೇಶ್ಯಾಗೃಹಗಳಲ್ಲಿ ವಾಸವಾದವರನ್ನು ಮೆರಿಟ್ರಸೆಸ್ ಎಂದು ಕರೆಯಲಾಗುತ್ತಿತ್ತು. ಅವರು ತಮ್ಮ ಹೆಸರನ್ನು ಸರ್ಕಾರಿ ಇಲಾಖೆಯಲ್ಲಿ ನೋಂದಾಯಿಸಿಕೊಳ್ಳಬೇಕಿತ್ತು.

ಸ್ತ್ರೀಯರ ಪಾವಿತ್ರತೆಗೆ ಮಹತ್ವ ನೀಡಿದ ಮಧ್ಯಕಾಲೀನ ಯುಗದ ಚರ್ಚ್‌ಗಳು ವೇಶ್ಯೆಯರ ಮನಪರಿವರ್ತನೆ ಮತ್ತು ಪುನರ್ವಸತಿಗೆ ಪ್ರಯತ್ನಿಸಿದರು. ಆದರೆ ಚರ್ಚುಗಳು ವೇಶ್ಯಾವೃತ್ತಿಯನ್ನು ವಿರೋಧಿಸುವ ಯಾವುದೇ ಪ್ರಯತ್ನ ಮಾಡಲಿಲ್ಲ. ಚರ್ಚಿನ ಪಾದ್ರಿಗಳ ಪ್ರಕಾರ ಅರಮನೆಗಳು

ಶುಚಿಯಾಗಿರಬೇಕಾದರೆ, ಗಟಾರಗಳಿರಬೇಕು. ಸ್ತ್ರೀ ಸಮುದಾಯದ ಒಂದು ವರ್ಗವನ್ನು ಸಂರಕ್ಷಿಸಿ ಅವರಿಗೆ ತೊಂದರೆಗಳಾಗದಂತೆ ನೋಡಿಕೊಳ್ಳಲು ಇನ್ನೊಂದು ವರ್ಗವನ್ನು ಬಲಿಕೊಡುವುದು ಅನಿವಾರ್ಯವೆಂದು ಹೇಳಲಾಗುತ್ತದೆ. ಸೇಂಟ್ ಅಗಸ್ಟೈನ್ ಕ್ರೈಸ್ತ ಧರ್ಮಗುರು ವೈಶ್ಯಾವೃತ್ತಿಯನ್ನು ತೊಡೆದು ಹಾಕುವುದು ಇನ್ನು ಹೆಚ್ಚಿನ ಅನೈತಿಕತೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಏಕೆಂದರೆ ಜನರು ವಿವಾಹ ಚೌಕಟ್ಟಿನಾಚೆ ಲೈಂಗಿಕ ಸಂಪರ್ಕ ಮಾಡುವುದನ್ನು ಮುಂದುವರಿಸಿಕೊಂಡು ಹೋಗುವವರೇ ಎಂದು ವಾದಿಸಿದರು. ಆದ್ದರಿಂದ ಚರ್ಚುಗಳು ವೇಶ್ಯಾವೃತ್ತಿಯ ವಿರುದ್ಧ ಧ್ವನಿ ಎತ್ತಲಿಲ್ಲ.

ಪಶ್ಚಿಮಾತ್ಯ ಇತಿಹಾಸಗಳಲ್ಲಿಯೇ ವೇಶ್ಯಾವೃತ್ತಿಯು ಮಧ್ಯಕಾಲೀನ ಯುಗದ ಕೊನೆಗೆ ಉಚ್ಛ್ರಾಯ ಸ್ಥಿತಿ ತಲುಪಿತು. ಲೈಸನ್ಸ್ ಪಡೆದ ವೇಶ್ಯಾವಾಟಿಕೆಗಳು ಯೂರೋಪಿನುದ್ದಕ್ಕೂ ಸಮೃದ್ಧಿಯಾಗಿ ಬೆಳೆದವು. ವೇಶ್ಯಾವೃತ್ತಿಯು ಸರ್ಕಾರಿ ಅಧಿಕಾರಿಗೆ ಮತ್ತು ಭ್ರಷ್ಟರಾದ ಚರ್ಚ್‌ಮನ್‌ಗಳಿಗೆ ಅತ್ಯಧಿಕ ಆದಾಯ ಕೊಡುತ್ತಿತ್ತು. ಏಷಿಯಾ ಖಂಡದಲ್ಲಿ ವೇಶ್ಯಾವೃತ್ತಿಯಲ್ಲಿ ತೊಡುಗುವುದಕ್ಕೆ ಧರ್ಮದ ವಿರೋಧವಿರಲಿಲ್ಲ. ಇದರಿಂದಾಗಿ ವೇಶ್ಯಾವೃತ್ತಿಗೆ ಯಾವುದೇ ಅಡೆತಡೆಗಳು ಇರಲಿಲ್ಲ.

ಆದರೆ ಅದೃಷ್ಟವಶಾತ ೧೯ನೇ ಶತಮಾನದಲ್ಲಿ ಪ್ರೊಟೆಸ್ಟೆಂಟರು ವೇಶ್ಯಾವೃತ್ತಿಗೆ ತಮ್ಮ ವಿರೋಧ ವ್ಯಕ್ತಪಡಿಸಿದರು. ಅವರು ವೇಶ್ಯಾವೃತ್ತಿ ಮತ್ತು ಸಿಫಿಲಸ್ ಎಂಬ ಲೈಂಗಿಕ ರೋಗದ ನಡುವೆ ಸಂಬಂಧವಿರುವುದನ್ನು ಗುರುತಿಸಿದರು. ಇದರಿಂದ ಪಶ್ಚಿಮದ ವಿವಿಧ ನಗರಗಳಲ್ಲಿ ಮುಚ್ಚಲಾಯಿತು. ಪ್ರಾಚೀನ ನಾಗರಿಕತೆಯಿರುವ ಭಾರತದಂತಹ ದೇಶದಲ್ಲೂ ವೇಶ್ಯಾವೃತ್ತಿಗೆ ತನ್ನದೇಯಾದ ಇತಿಹಾಸವಿದೆ.

ಭಾರತದ ಅತ್ಯಂತ ಪ್ರಾಚೀನ ಕೃತಿಯಾದ ಋಗ್ವೇದದಲ್ಲಿ ವೇಶ್ಯಾವೃತ್ತಿ ಪದ್ಧತಿಯ ಉಲ್ಲೇಖ ಕಂಡುಬರುತ್ತದೆ. ಆದಿ ಕಾಲದಿಂದ ಸ್ತ್ರೀಯರನ್ನು ಸೂಳೆಯನ್ನಾಗಿ ಮಾಡುವ ವೇದಕಾಲದಿಂದ ಇಂದಿನವರೆಗೆ ನಡೆದುಕೊಂಡುಬಂದಿದೆ. ವೇದ ಪೂರ್ವದ ಸಮಾಜದಲ್ಲೂ ವಿವಾಹದ ಚೌಕಟ್ಟಿನಾಚೆ ಲೈಂಗಿಕ ಸಂಬಂಧಗಳು ವೈಯಕ್ತಿಕ ಇಚ್ಛೆಯಿಂದ ಮೂಡಿ ಬಂದಿದ್ದವು. ಅವರಲ್ಲಿ ಹಣದ ವಿನಿಮಯ ಅಷ್ಟಾಗಿ ಇರಲಿಲ್ಲ. ಪ್ರಿಯಕರನು ತನ್ನ ಖುಷಿಗಾಗಿ ಪ್ರಿಯತಮೆಗೆ ಉಡುಗೊರೆ ವಸ್ತುಗಳನ್ನು ಕೊಡುವ ಪರಿಪಾಠವಿತ್ತು. ಎಲ್ಲಿಯವರೆಗೆ ಪ್ರಿಯತಮೆಯ ಸಂಬಂಧ ಒಬ್ಬ ಪುರುಷನಿಗೆ ಸೀಮಿತವಾಗಿದ್ದು, ತಾತ್ಕಾಲಿಕ ಸಂಬಂಧವಾಗಿತ್ತೋ ಅಲ್ಲಿಯವರೆಗೆ ಅದು ವೃತ್ತಿಯಾಗಿರಲಿಲ್ಲ. ಮುಂದೆ ಕ್ರಮೇಣ ಸಮಾಜದಲ್ಲಿ ಇದು ವೃತ್ತಿಯಾಗಿ ಸ್ಪಷ್ಟವಾಗಿ

ಒಡಮೂಡಿರುವುದು ವೇದಕಾಲದ ನಂತರದ ಸಾಹಿತ್ಯದಲ್ಲಿ ಕಾಣುತ್ತೇವೆ. ಸುಮಾರು ಕ್ರಿಪೂ. ೭ ಅಥವಾ ೮ನೇ ಶತಮಾನದ ವೇಳೆಗೆ ನಾವು ವೇಶ್ಯಾವೃತ್ತಿ ವ್ಯವಸ್ಥಿತವಾಗಿ ಸಾಮಾಜಿಕ ಸಂಸ್ಥೆಯಾಗಿ ಪ್ರಚಲಿತವಾಗಿತ್ತೆಂಬುದನ್ನು ಕಾಣಬಹುದಾಗಿದೆ. ಸಾಂಸ್ಥಿಕವಾಗಿ ಅಲ್ಲದಿದ್ದರೂ ವೇಶ್ಯಾವೃತ್ತಿ ಋಗ್ವೇದದ ಕಾಲದಲ್ಲೇ ಅಸ್ತಿತ್ವದಲ್ಲಿತ್ತೆಂಬುದು ನಿಸ್ಸಂಶಯವಾಗಿ ಹೇಳಬಹುದು.

ವೇಶ್ಯಾವೃತ್ತಿಯ ಉಗಮದ ಬಗ್ಗೆ ಹಲವಾರು ಐತಿಹ್ಯಗಳು ದಂತಕಥೆಗಳು ಕಂಡುಬರುತ್ತವೆ. ಮಹಾಭಾರತ ಮತ್ತು ಮತ್ಸ್ಯ ಪುರಾಣಗಳಲ್ಲಿ ವೇಶ್ಯಾವೃತ್ತಿಯನ್ನು ಕುರಿತಂತೆ ಅನೇಕ ಕಥೆಗಳು ಇವೆ. ಕ್ಷೇಮೇಂದ್ರನು ದುಷ್ಟ ತಾಯಂದಿರು ತಮ್ಮ ಮಕ್ಕಳನ್ನು ಬೋಗಿಸಲು ಬೇರೆ ಪುರುಷರಿಗೆ ಕೊಟ್ಟುಬಿಡುವ ಪ್ರಸಂಗಗಳನ್ನು ಹೇಳುತ್ತಾನೆ. ವಾತ್ಸಾಯನು ತನ್ನ ಕಾಮಸೂತ್ರದಲ್ಲಿ ಹೇಗೆ ಪವಿತ್ರಳಾದ ಹೆಣ್ಣು ಅತ್ಯಾಚಾರಕ್ಕೊಳಗಾಗಿ ವೇಶ್ಯೆಯಾಗುತ್ತಾಳೆಂಬುದನ್ನು ವಿವರಿಸಿದ್ದಾನೆ.

ಹಲವಾರು ರಾಜರ ಆಸ್ಥಾನಗಳಲ್ಲಿ ರಾಜನ ಆಣತಿಯಂತೆ ಅವನ ಖುಷಿಗೆ ಹಲವು ಹೆಣ್ಣುಗಳನ್ನು ಮೀಸಲಾಡಿಲಾಗುತ್ತಿತ್ತು. ಅವರು ಉಪಯೋಗಿಸಿದ ನಂತರ ರಾಜನಿಂದ ಪರಿತ್ಯಕ್ತವಾದ ಹೆಣ್ಣುಗಳಿದ್ದ ದಾರಿ ವೇಶ್ಯಾವಾಟಿಕೆಯೊಂದೇ. ಕೌಟಿಲ್ಯನು ಒಂದು ಕಡೆ ವೇಶ್ಯೆಯರು ನಿರ್ಮಾಣವಾಗುವ ನಾಲ್ಕು ಮೂಲಗಳನ್ನು ಹೇಳುತ್ತಾನೆ. ಅವರು ವೇಶ್ಯಾ ತಾಯಂದಿರ ಮಕ್ಕಳಾಗಿರಬಹುದು. ಹಣಕ್ಕೆ ಕೊಂಡುಕೊಂಡವರಾಗಿರಬಹುದು. ಯುದ್ಧಗಳಲ್ಲಿ ಸೆರೆ ಹಿಡಿದು ತಂದವರಾಗಿರಬೇಕು ಅಥವಾ ಶಿಕ್ಷೆಗೆಒಳಗಾದ ಕಳಂಕಿತ ಮಹಿಳೆಯಾಗಿರಬೇಕು.

ಕಾಳಿದಾಸನು ಕ್ರಿ.ಶ. ೫ನೇ ಶತಮಾನದ ವೇಳೆಗೆ ವೇಶ್ಯಾವೃತ್ತಿ ಒಂದು ವ್ಯವಸ್ಥಿತ ಸಂಪ್ರದಾಯವೆಂಬಂತೆ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಕ್ರಿ.ಶ.೬ನೇ ಸಾಹಿತ್ಯ ಶಾಸನಗಳೆಲ್ಲೆಲ್ಲಾ ವೇಶ್ಯಾವೃತ್ತಿಯ ಅಸ್ತಿತ್ವದಲ್ಲಿರುವುದನ್ನು ತೋರಿಸುತ್ತವೆ. 'ನಮ್ಮಯ್ಯ ಸುಂದರಿ ಕಥಾ' ಎಂಬ ೧೨ನೇ ಶತಮಾನದ ಕೃತಿಯಲ್ಲಿ ೨೪% ರಿಂದ ೩೦% ರಷ್ಟು ವೇಶ್ಯೆಯರ ಆದಾಯವನ್ನು ತೆರಿಗೆಯ ರೂಪದಲ್ಲಿ ಪಡೆಯುತ್ತಿತ್ತೆಂದು ಹೇಳಲಾಗಿದೆ. ಗಣಿಕಾ ಸ್ತ್ರೀಯರು ಅತ್ಯಂತ ದುಬಾರಿ ಬೆಲೆಯನ್ನು ಪಡೆಯುತ್ತಿದ್ದರೆಂದು ಹಾಗೂ ಪ್ರತಿಯೊಂದು ಪಟ್ಟಣದಲ್ಲೂ ಪ್ರಮುಖ ವೇಶ್ಯೆಯೊಬ್ಬಳು ಇರುತ್ತಿದ್ದಳು. ಜನಪದ ಕಲ್ಯಾಣ ಅಥವಾ ಸಾಧಾರಣ ಎಂದು ಕರೆಸಿಕೊಳ್ಳುವ ಇವಳು ದೇಶದಲ್ಲೇ ಅನುಪಮ ಸುಂದರಿಯಾಗುತ್ತಿದ್ದಳು ಎಂದು ಬೌದ್ಧ ಗ್ರಂಥಗಳು ಹೇಳುತ್ತವೆ. ಬುದ್ಧ ಮತ್ತು ಆತನ ಅನುಚರಿಗೆ ಆಹಾರವನ್ನು ನೀಡಿದ ಮಹಾನ್ ವೇಶ್ಯೆಯರ ಅನೇಕ ಹೆಸರುಗಳನ್ನು ದೀರ್ಘ ನಿಕಾಯ ಮಜ್ಜಿಯ ನಿಕಾಯ ಮತ್ತು ಸಂಯುಕ್ತಾ ಎಂಬ ಬೌದ್ಧ ಗ್ರಂಥಗಳು ನಮೂದಿಸುತ್ತವೆ.

ಬಸವಣ್ಣನವರ ಕಾಲದಲ್ಲಿಯೂ ಕೂಡ ಸೂಳೆ ಸಕ್ಕವ್ವನ ನಿರ್ದೇಶನ ಬರುತ್ತದೆ. ವೇಶ್ಯಾವೃತ್ತಿ ಮಾಡುತ್ತಿದ್ದ ಸಕ್ಕವ್ವನ ಬಸವಣ್ಣನವರ ಹಾಗೂ ಹಲವಾರು ಶರಣ-ಶರಣೆಯರ ಪ್ರಭಾವಕ್ಕೆ ಒಳಗಾಗಿ ಶರಣೆಯಾಗಿ ಬದುಕು ಸಾಗಿಸಿರುವುದು ಕಾಣಬಹುದು.

ಭಾರತದಲ್ಲಿ ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತ್ತಿಗೆ ಪೂರಕವಾದದ್ದು. ದೇವದಾಸಿ ಪದ್ಧತಿ ಬಹು ಪ್ರಾಚೀನವಾದುದು. ಮಾತೃದೇವತೆಯ ಕಲ್ಪನೆಯಿರುವ ಎಲ್ಲಾ ಧರ್ಮಗಳಲ್ಲಿಯೂ ಒಂದಲ್ಲ ಒಂದು ವಿಧದಲ್ಲಿ ಇಂತಹ ಪದ್ಧತಿ ಇರುವುದು ಕಂಡುಬರುತ್ತದೆ. ದೇವರಿಗೆ ಕಾಣಿಕೆಯಾಗಿ, ಮುಡುಪಾಗಿ, ಸೇವೆಗಾಗಿ ಮೀಸಲಾದ ಸ್ತ್ರೀಯರೇ ದೇವದಾಸಿಯರು. ಇವರು ದೇವರನ್ನು ಮದುವೆಯಾದವರು, ದೇವರ ವಿವಿಧ ಸೇವೆಯಲ್ಲಿ ನಿರತರಾದವರು, ದೇವರ ಮಕ್ಕಳು ಹೀಗೆ ಅನೇಕ ಬಗೆಯ ಸ್ತ್ರೀಯರು ಗುಡಿಗಳಿಗೆ, ಧರ್ಮಕ್ಕೆ ಸಂಬಂಧಿಸಿದವರಾಗಿದ್ದಾರೆ. ಅನೇಕ ಶಿಲಾಶಾಸನಗಳು ಹೇಳುವಂತೆ ದಕ್ಷಿಣ ಭಾರತದ ತಂಜಾವೂರು, ಮಧುರೈ, ಬೇಲೂರು, ಸೋಮನಾಥಪುರ ಮುಂತಾದ ಅನೇಕ ಗುಡಿಗಳಿಗೆ ದೇವದಾಸಿಯರಿದ್ದ ಉಲ್ಲೇಖನ ಬರುತ್ತದೆ.

ಚರಿತ್ರೆಯಿಂದ ತಿಳಿದುಬರುವಂತೆ ದೇವಸ್ಥಾನಕ್ಕೆ ದತ್ತಿಯಾಗಿ ಬಂದ ಸ್ತ್ರೀಯರು ಗುಡಿಯಲ್ಲೇ ವಾಸವಾಗಿದ್ದುಕೊಂಡು ತಮಗೆ ವಹಿಸಿಕೊಟ್ಟ ಕೆಲಸಗಳಾದ ಗಂಟೆ ಬಾರಿಸುವುದು, ಹಾಡುವುದು, ನೃತ್ಯ ಮಾಡುವುದು, ಗುಡಿ ಮತ್ತು ಅಂಗಳ ಸ್ವಚ್ಛ ಮಾಡುವುದು ಹೀಗೆ ಅನೇಕ ಕಾರ್ಯಗಳನ್ನು ಮಾಡುತ್ತಿದ್ದರು. ದೇವರ ದಾಸಿಯರಾದ ದೇವಸ್ಥಾನದ ಆಸ್ತಿಯಾದ ಇವರು ತಮ್ಮ ಜೀವನಕ್ಕೆ ಗುಡಿಯಿಂದ ಬರುವ ಆದಾಯವನ್ನು ಅವಲಂಬಿಸಿರುತ್ತಿದ್ದರು. ಆದಾಯ ಕಡಿಮೆಯಾದಾಗ ಅವರು ಬಟ್ಟೆ, ಬುಟ್ಟಿ ಹೆಣೆಯುವುದು, ಹಣ್ಣು, ಕಾಯಿ ಮತ್ತು ತಾಯಿತ, ವಿಗ್ರಹ ಮುಂತಾದವುಗಳನ್ನು ಮಾಡುವ ಅನೇಕ ವೃತ್ತಿಗಳಲ್ಲಿ ತೊಡಗಿರುತ್ತಿದ್ದರು. ಹೀಗೆ ದೇವಸ್ಥಾನಕ್ಕೆ ಹಣಗಳಿಸಲು ದುಡಿಯುವುದು ಮುಂದೆ ದೇವರಿಗೆ ಸಲ್ಲಿಸುವ ಸೇವೆಗಾಗಿ ಪರಿಣಮಿಸಿದವು. ಇವುಗಳಲ್ಲಿ ದೇವರ ಹೆಸರಿನಲ್ಲಿ ಮೈಮಾರಿ ಹಣಗಳಿಸುವ ಕಾರ್ಯ ಒಂದು ಸೇವೆಯಾಗಿ ಪರಿಣಮಿಸಿತು. ದೇವಸ್ಥಾನದ ಹತ್ತಿರ ದೇವರ ಸೇವೆಯ ರೂಪದಲ್ಲಿ ನಡೆದ ಈ ಕೆಲಸದಿಂದ ಬಂದ ಆದಾಯದ ಮೇಲೆ ಒಂದು ನಿರ್ದಿಷ್ಟ ತೆರಿಗೆಯನ್ನು ವಿಧಿಸಲಾಯಿತು. ಇದರಿಂದ ಅವರಿಗೆ ಲೈಂಗಿಕ ವೃತ್ತಿಯಲ್ಲಿ ಅಥವಾ ಸೂಳೆಗಾರಿಕೆಯಲ್ಲಿ ತೊಡಗಲು ಒಂದು ಬಗೆಯ ಹಕ್ಕು ಲಭಿಸಿದಂತಾಗಿ ಪ್ರಬಲರಾದರು.

೧೭ನೇ ಶತಮಾನದ ಸುಮಾರಿಗೆ ವೇಶ್ಯಾವೃತ್ತಿ ಬಂದರು-ನಗರಗಳಲ್ಲಿ ಲಾಭದಾಯಿಕ ವೃತ್ತಿಯಾಗಿ ಬೆಳೆಯಿತು. ತಮ್ಮ ಹೆಂಡತಿಯರನ್ನು ವಾಸಸ್ಥಳದಲ್ಲಿ ಬಿಟ್ಟುಬರುತ್ತಿದ್ದ ನಾವಿಕ

ವರ್ಗ ಬಂದರು ನಗರಗಳಲ್ಲಿ ವೇಶ್ಯಾ ಕೇಂದ್ರಗಳನ್ನು ಸಂದರ್ಶಿಸುವುದು ಸರ್ವೆಸಾಮಾನ್ಯ ಸಂಗತಿಯಾಗಿತ್ತು. ಅದರಂತೆ ಭಾರತದ ಕೈಗಾರಿಕಾ ಕೇಂದ್ರಗಳಿಗೆ, ನಗರಗಳಿಗೆ, ಕೆಲಸಕ್ಕೆಂದು ವಲಸೆ ಬಂದವರು ತಮ್ಮ ಹೆಂಡತಿಯರನ್ನು ಊರಲ್ಲಿಯೇ ಬಿಟ್ಟು ಬಂದಿರುತ್ತಾರೆ. ಇವರು ತಮ್ಮ ಕಾಮಾಪೇಕ್ಷೆಯನ್ನು ಪೂರೈಸಿಕೊಳ್ಳಲು ನಗರದಲ್ಲಿನ ವೇಶ್ಯೆಯರ ಹತ್ತಿರ ಹೋಗುವುದು ಹೆಚ್ಚಾಯಿತು. ಇದರಿಂದಾಗಿಯೂ ವಲಸೆಗಾರ, ಕೆಲಸಗಾರರು ನಗರ ವೇಶ್ಯಾವೃತ್ತಿಯನ್ನು ನೀರೆರೆದು ಪೋಷಿಸುತ್ತದೆ.

ಮಧ್ಯಯುಗದಲ್ಲಿ ಮುಸ್ಲಿಂ ದೊರೆಗಳು ವೇಶ್ಯಾವೃತ್ತಿಯನ್ನು ಪುರಸ್ಕರಿಸಿ ಮನ್ನಣೆ ನೀಡಿದ್ದರು. ಮೊಗಲರ ಆಸ್ಥಾನದಲ್ಲಿ ವೇಶ್ಯೆಯರು, ನೃತ್ಯಗಾರ್ತಿಯರು ಗಾಯಕರಾಗಿರುತ್ತಿದ್ದರು. ಬ್ರಿಟಿಷರ ಆಡಳಿತದಲ್ಲಿ ವೇಶ್ಯಾವಾಟಿಕೆಯ ಬಗೆಗಿನ ತಾತ್ಸಾರ ಹಾಗೂ ಶ್ರೀಮಂತರ, ಜಮೀನ್ದಾರರ ಗುತ್ತಿಗೆಯಿಂದ ವೇಶ್ಯಾವೃತ್ತಿಯು ವೃದ್ಧಿಸಿತು. ರಾಜ್ಯ ಮನ್ನಣೆಯನ್ನು ಪಡೆಯಿತು.

೧೮ ಮತ್ತು ೧೯ನೇ ಶತಮಾನದಲ್ಲಿನ ನಂತರದ ಸಮಾಜದಲ್ಲಿ ವೇಶ್ಯಾವೃತ್ತಿ ಅವಶ್ಯಕ ಪಿಡುಗು ಎಂದು ಪರಿಗಣಿಸಲಾಗಿದೆ. ಅನೈತಿಕ ಉದ್ದೇಶಗಳಿಗೆ ವೇಶ್ಯೆಯರು ಅಂತರಾಷ್ಟ್ರೀಯ ಗಡಿಯನ್ನು ದಾಟಿ ಹೋಗುವುದು ಪ್ರಾರಂಭವಾದದ್ದೇ ಕೈಗಾರಿಕಾ ಕ್ರಾಂತಿಯ ನಂತರದ ದಿನಗಳಲ್ಲಿ ಇದರೊಂದಿಗೆ ವೇಶ್ಯೆಯರಿಗೆ ಲೈಸನ್ಸ್ ಕೊಡುವ ಪರಿಪಾಠ ಬೆಳೆದುಬಂದಿತು.

ಒಟ್ಟಿನಲ್ಲಿ ಇಂದು ವೇಶ್ಯಾವೃತ್ತಿ ಹಾಗೂ ವೇಶ್ಯೆಯರ ಅಥವಾ ಲೈಂಗಿಕ ಕಾರ್ಯಕರ್ತೆಯರ ಕ್ರಮವನ್ನು ಸಮಾಜವು ಅವಶ್ಯಕ ಪೀಡೆಯಾಗಿ ಕಂಡಿದೆ. ಅವಶ್ಯಕತೆಗಿಂತ ಹೆಚ್ಚಾಗಿಯೇ ಈ ಪಿಡುಗನ್ನು ವೈಭವೀಕರಿಸಿ ಪುರುಷ ಸಮಾಜವು ತನಗಿರುವ ಶೋಷಣೆಯ ಹಕ್ಕನ್ನು ಸ್ಥಾಪಿಸಿಕೊಂಡಿದೆ. ಕೆಲವೊಮ್ಮೆ ಮಹಿಳೆಯರಿಗೆ ಗೌರವದಿಂದ ಬದುಕನ್ನು ನಡೆಸುವ ಹಕ್ಕು ಮತ್ತು ಅವಕಾಶವನ್ನು ನಿರಾಕರಿಸಿ ಅವರನ್ನು ಲೈಂಗಿಕ ವೃತ್ತಿಗೆ ತಳ್ಳದೆ ಅವರನ್ನು ವೇಶ್ಯೆಯರಾಗಿಯೇ ಬಾಳ್ವೆ ನಡೆಸುವಂತೆ ನೋಡಿಕೊಳ್ಳುವಂತೆ ಗಿರಾಕಿಗಳ ಸಮೂಹವನ್ನೇ ಸರಬರಾಜು ಮಾಡಿದೆ.

೨.೨. ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತ್ತಿಯ ಲೈಂಗಿಕ ಕಾರ್ಯಕರ್ತೆಯರ ಪರಿಕಲ್ಪನೆ

ಪ್ರತಿಯೊಂದು ಸಮಾಜ ತನ್ನಲ್ಲಿನ ಸಾಂಸ್ಕೃತಿಕ ಮೌಲ್ಯಗಳನ್ನಾಧರಿಸಿ ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತಿ ಪರಿಕಲ್ಪನೆಯನ್ನು ಅರ್ಥೈಸಲಾಗುತ್ತದೆ. ಸಾಂಸ್ಕೃತಿಕ ಮೌಲ್ಯಗಳು ಎಲ್ಲಾ ಸಮಾಜಗಳಲ್ಲೂ ಒಂದೇ ತೆರನಾಗಿ ಇರುವುದಿಲ್ಲ. ಆದ್ದರಿಂದ ವೇಶ್ಯಾವೃತ್ತಿಯ ಪರಿಕಲ್ಪನೆ

ಕೂಡ ಒಂದು ದೇಶದಲ್ಲಿರುವಂತೆ ಮತ್ತೊಂದು ದೇಶದಲ್ಲಿರುವುದಿಲ್ಲ. ಲೈಂಗಿಕ ವೃತ್ತಿಯು ಸಮಾಜದಿಂದ ಸಮಾಜಕ್ಕೆ ಮತ್ತು ಒಂದು ಸಮಾಜದೊಳಗೆ ಉಪಸಂಸ್ಕೃತಿಯಿಂದ ಇನ್ನೊಂದು ಉಪಸಂಸ್ಕೃತಿಗೆ ಬೇರೆ ಬೇರೆಯಾಗುತ್ತದೆ. ಲೈಂಗಿಕ ವೃತ್ತಿ ಅಥವಾ ವೇಶ್ಯಾವೃತ್ತಿಯಲ್ಲಿ ಹಣದ ಅಥವಾ ಇನ್ನಿತರ ವಸ್ತುಗಳ ಆಸೆಯಿಂದ ತಮ್ಮ ಮೈ ಮಾರಿಕೊಳ್ಳುವುದು ಎದ್ದು ಕಾಣುವ ಅಂಶವಾಗಿದೆ.

ಪ್ರಾಚೀನ ಕಾಲದಲ್ಲಿ ಗಣಿಕ, ರೂಪ ಜೀವಾ, ವಾರಸ್ತ್ರೀ ಎಂದು ಗುರುತಿಸುತ್ತಿದ್ದವರನ್ನು ಈಗ ಸೂಳೆ, ವೇಶ್ಯೆ, ಕಸವಿ, ಲೈಂಗಿಕ ದಾಸಿ, ಲೈಂಗಿಕ ಕಾರ್ಯಕರ್ತೆ ಎಂದು ಕರೆಯುತ್ತಿರುವರು. ಇವರ ಲೈಂಗಿಕ ಸೇವೆ ಧರ್ಮ ಪ್ರಧಾನವಾದುದಲ್ಲ. ವೃತ್ತಿಪ್ರಧಾನವಾದುದು ಈ ಅರ್ಥ ಪ್ರಕ್ರಿಯೆ ವಿಭಿನ್ನ ಸಾಂಸ್ಕೃತಿಕ ಘಟ್ಟದಲ್ಲಿ ಹುಟ್ಟಿಕೊಂಡವು. ಇವು ವೈವಾಹಿಕ ಚೌಕಟ್ಟಿನ ಹೊರಗಿನ ಪದಗಳು.

ಲೌಕಿಕಕೇಂದ್ರಿತ ಲೈಂಗಿಕ ದಾಸಿಯರಾದ ಸೂಳೆ ಹಾಗೂ ಕಸುಬಿಯರನ್ನು ನೇರವಾಗಿದ ಸೆಕ್ಸ್ ವರ್ಕ್‌ರ್ಸ್ ಲೈಂಗಿಕ ಕಾರ್ಯಕರ್ತೆಯರು ಎಂದು ಕರೆಯಬಹುದು. ಸಾಮಾಜಿಕ, ಆರ್ಥಿಕ, ಕೌಟುಂಬಿಕದ ಅನಿವಾರ್ಯ ಒತ್ತಡಗಳಿಂದಾಗಿ ಲೈಂಗಿಕ ದುಡಿಮೆಯನ್ನು ಅವರು ಸ್ವೀಕರಿಸಿರುತ್ತಾರೆ.

ಇಂದು ಹೀನ ಅರ್ಥವನ್ನು ಪಡೆದುಕೊಂಡ ಸೂಳೆ, ವೇಶ್ಯೆ ಅಂತಹ ಪದಗಳ ಬಳಕೆಯಿಂದ ಅವಮಾನಗೊಳಿಸಬಾರದು ಎಂಬ ಗಾಢವಾದ ಕಾಳಜಿಯಿಂದ 'ಲೈಂಗಿಕ ದಾಸಿಯರು' ಅಥವಾ ಲೈಂಗಿಕ ಕಾರ್ಯಕರ್ತೆಯರು ಎಂಬ ಪದವನ್ನು ಬಳಸಿದೆ.

'ಲೈಂಗಿಕ ಕಾರ್ಯಕರ್ತೆ' ಎಂಬ ಹೊಸ ಶಬ್ಧ ಬಳಕೆ

'ಲೈಂಗಿಕ ಕಾರ್ಯಕರ್ತೆ' ಎಂಬ ಹೊಸ ಶಬ್ದದ ಬಳಕೆ ಇತ್ತೀಚಿಗೆ ವೇಶ್ಯಾವಾಟಿಕೆ ಅಥವಾ ಅಲ್ಲಿಯ ಬಗ್ಗೆ ಬಳಸಲ್ಪಡುತ್ತಿರುವ ಶಬ್ಧಗಳ ಬಗ್ಗೆಯೂ ಚರ್ಚೆಯಾಗುತ್ತಿದೆ. ಸಾಂಪ್ರದಾಯಿಕವಾಗಿ ಬಳಸುತ್ತ ಬಂದಿರುವ 'ಸೂಳೆ, ವೇಶ್ಯೆ, ಗಣಿಕೆ, ದೇವದಾಸಿ ಮತ್ತು ಬಸವಿ' ಮುಂತಾದ ಹೆಸರುಗಳಿಂದ ಕರೆಯುತ್ತಿದ್ದಾರೆ. ಹೆಚ್.ಐ.ವಿ/ಏಡ್ಸ್ ಛಾಮು ಒತ್ತಿದ್ದು ಮೊದಲು ಈ ಲೈಂಗಿಕ ವೃತ್ತಿನಿರತರ ಮೇಲೆ ಆಗ ವಿಶ್ವ ಆರೋಗ್ಯ ಸಂಸ್ಥೆ (W.H.O) ಒಂದು ಬದಲಾವಣೆಯನ್ನು ಶಬ್ಧ ಪ್ರಯೋಗದಲ್ಲಿ ತಂದಿತು.

ಸಾಂಪ್ರದಾಯಿಕವಾಗಿ ಬಳಸುತ್ತಿರುವ ಶಬ್ದಗಳೆಲ್ಲವೂ ಸಾಮಾನ್ಯವಾಗಿ ಉದ್ದೀಪನಗೊಳಿಸುವ ಅರ್ಥಗಳು, ಪ್ರಕ್ರಿಯೆಗಳನ್ನು, ಭಾವನೆಯನ್ನು ಅವಹೇಳನಕಾರಿಯಾಗಿ, ಕಳಂಕರೂಪಿತವಾಗಿ ತಾರತಮ್ಯ ಮೂಡಿಸುತ್ತವೆ. ಮಹಿಳೆಯರನ್ನೇ ಕಳಂಕಿತವಾಗಿ ನೋಡುವುದು, ಭೇದ ಮಾಡುವಂತಹ ಅರ್ಥವಿದೆ.

ಹೆಚ್.ಐ.ವಿ/ಏಡ್ಸ್ ಪಿಡುಗು ವ್ಯಾಪಕವಾದಾಗ ಅದನ್ನು ತಡೆಗಟ್ಟುವ ಪ್ರಯತ್ನಗಳಲ್ಲಿ ಲೈಂಗಿಕ ವೃತ್ತಿ ನಿರತರನ್ನು ಒಳಗೊಳ್ಳುವ ಪ್ರಕ್ರಿಯೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆ (W.H.O)ಯು 'ಕಮರ್ಷಿಯಲ್' ಲೈಂಗಿಕ ಕಾರ್ಯಕರ್ತೆಯರು ಎಂಬ ಪದವನ್ನು ಸಾರ್ವತ್ರಿಕರಣಗೊಳಿಸಿತು. ಇದರಿಂದ ಅವರ ವೃತ್ತಿಗೊಂದು ಘನತೆಯನ್ನು ತಂದುಕೊಡುವುದಕ್ಕೆ ಮತ್ತು ಅದನ್ನು ಕಳಂಕರಹಿತಗೊಳಿಸುವ ನಿಟ್ಟಿನ ಒಂದು ಪ್ರಯತ್ನವಾಗಿ ಈ ಪದ ಬಳಸಲಾಯಿತು. ಆದರೂ ಈ ಪದದ ಅಥವಾ ಶಬ್ದದ ಬಗ್ಗೆ ಹಲವಾರು ವಿವಾದಗಳು ಕೇಳಿಬಂದವು.

ಮುಂದೆ ೧೯೮೬ರ ಪೀಟಾ (Pita) ಕಾಯ್ದೆಯಲ್ಲಿ "ಲೈಂಗಿಕ ವೃತ್ತಿ ನಿರತರು" ಎನ್ನುವ "Sexual Worker" ಎಂಬ ನಾಗರೀಕವಾದಂತಹ ಉದ್ದೇಶವುಳ್ಳ ಪದವು ಬಳಕೆಯಾಗಿವೆ. ಇಂದು ಹೆಚ್ಚು ಲೈಂಗಿಕ ಕಾರ್ಯಕರ್ತೆಯರೆಂದು ಹೆಚ್ಚು ಜನಪ್ರಿಯವಾಗುತ್ತಿದೆ ಎಂದು ಹೇಳಬಹುದು.

ಹಣಕ್ಕಾಗಿ ಇಲ್ಲವೇ ವಸ್ತುವಿಗಾಗಿ ತನ್ನ ದೇಹವನ್ನು ತಾರತಮ್ಯವಿಲ್ಲದೆ ಬಾಡಿಗೆಗಾಗಿ ಸಂಭೋಗಕ್ಕೆ ನೀಡುವವಳೇ ವೇಶ್ಯೆ. ಸ್ವೇಚ್ಛಾಚಾರ್ಯ ಮತ್ತು ಅನೈತಿಕ ಸಂಬೋಗವನ್ನಾಧರಿಸಿದ ವೇಶ್ಯೆವಾಟಿಕೆಯು ಒಂದು ಸಾಮಾಜಿಕ ಪಿಡುಗಾಗಿ ಹಾಗೂ ಇದೊಂದು ವಾಣಿಜೀಕೃತ ದುರ್ವ್ಯವಹಾರವಾಗಿ ಪರಿಣಮಿಸಿದೆ.

ಎನ್. ಸೈಕ್ಲೋಪಿಡಿಯಾ ಬ್ರಿಟಾನಿಕಾ ೨೦೦೫ರ ಪ್ರಕಾರ

ಗಂಡ ಅಥವಾ ಹೆಂಡತಿ, ಗೆಳೆಯ/ಗೆಳತಿಯರನ್ನು ಹೊರತುಪಡಿಸಿ ತಕ್ಷಣದಲ್ಲಿ ಹಣ ಇಲ್ಲವೇ ಯಾವುದೇ ತಾರತಮ್ಯವಿಲ್ಲದೇ ಲೈಂಗಿಕ ಚಟುವಟಿಕೆಗಳಲ್ಲಿ ತೊಡುಗುವುದೇ ವೇಶ್ಯಾವೃತ್ತಿಯಾಗಿದೆ.

ದಿ ಸಪ್ರೆಶನ್ ಇಮ್ಮೊರಲ್ ಟ್ರಾಫಿಕ್ ಇನ್ ಹೂಮ್ಯೂನ್ ಆಂಡ್ ಗರ್ಲ್ ಆಕ್ಟ್ ೧೯೫೬ ಸ್ತ್ರೀಯರ ಹಾಗೂ ಯುವತಿಯರ ಅನೈತಿಕ ನಿಗ್ರಹಣಾ ಕಾಯದೆ ಪ್ರಕಾರ "ಹಣ ಅಥವಾ ವಸ್ತುಗಳನ್ನು ಪಡೆಯುವ ಉದ್ದೇಶದಿಂದ ಮಹಿಳೆಯು (ಪುರುಷರ) ಸ್ವೇಚ್ಛಾ

ಕಾಮಕೇಳಿಗೆ ತನ್ನ ದೇಹವನ್ನು ಬಾಡಿಗೆಯ ವಸ್ತುವನ್ನಾಗಿ ಮಾಡಿಕೊಳ್ಳುವ ಕ್ರಿಯೆಯೇ ವೇಶ್ಯಾವೃತ್ತಿ.

ಎಸ್.ಡಿ.ಪುಣೆಕರ್ ಮತ್ತು ಕಮಲಾರಾವ್‌ರವರು 'A Study of Prostituctes in Bombay' ಎಂಬ ಪುಸ್ತಕದಲ್ಲಿ ವೇಶ್ಯಾ ಅಥವಾ ಲೈಂಗಿಕ ಕಾರ್ಯಕರ್ತೆ ಎನ್ನುವ ಪದಕ್ಕೆ ಈ ರೀತಿ ಅರ್ಥೈಸಿದ್ದಾರೆ.

ಕಾನೂನಿನ ರೀತಿ ವಿವಾಹವಾಗದೆ ಇರುವ ಯಾವುದೇ ವ್ಯಕ್ತಿಗಳಿಗೆ ಹಣ ಅಥವಾ ಇತರ ಸೌಲಭ್ಯಗೋಸ್ಕರ ಲೈಂಗಿಕ ಅಥವಾ ಸಂಬಂಧಪಟ್ಟಂತಹ ತೃಪ್ತಿಗಾಗಿ ತನ್ನ ಶರೀರವನ್ನು ನಿರಂತರವಾಗಿ ಅರ್ಪಿಸುವ ಸ್ತ್ರೀ ವೇಶ್ಯೆ ಅಥವಾ ಲೈಂಗಿಕ ಕಾರ್ಯಕರ್ತೆಯೆನಿಸಿಕೊಳ್ಳುತ್ತಾಳೆ.

ಈ ವೇಶ್ಯಾ ಅಥವಾ ಲೈಂಗಿಕ ಕಾರ್ಯಕರ್ತೆಯರನ್ನು ದೇವದಾಸಿ, ಸೂಳೆ, ಮಂಗಳಮುಖಿ, ಬಸವಿ, ನಾಯಕ್ಸಾನಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

೨.೩. ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತ್ತಿಯಲ್ಲಿ ತೊಡಗಲು ಪ್ರೇರಿತವಾದ ಅಂಶಗಳು.

ಸ್ತ್ರೀಯು ವೇಶ್ಯಾವೃತ್ತಿಯನ್ನು ತೊಡುಗುವುದಕ್ಕೆ ಹಲವಾರು ಸಂದರ್ಭಗಳು ಪರಿಸ್ಥಿತಿಗಳು ಮತ್ತು ಮಾನಸಿಕ ಸ್ಥಿತಿಗತಿಗಳು ಕಾರಣವಾಗುತ್ತವೆ. ಅನುವಂಶೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ಮಾನವಿಕ ಅಂಶಗಳ ಫಲವೇ ವೇಶ್ಯಾವೃತ್ತಿಯಾಗಿದೆ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ ಮಹಿಳೆಯರ ಸ್ಥಿತಿಗತಿ ಹೀನಾಯವಾಗಿರುವುದರಿಂದ ಇಲ್ಲಿನ ವೇಶ್ಯಾವೃತ್ತಿ ಸಮಸ್ಯೆ ಹೆಚ್ಚಿನದಾಗಿದೆ. ಮಹಿಳೆಯರ ಬದುಕಿನಲ್ಲಿ ವೇಶ್ಯಾವಾಟಿಕೆಯನ್ನು ವಿಸ್ತರಿಸುತ್ತವೆ. ಅತ್ಯಾಚಾರಕ್ಕೆ ಒಳಗಾದವರೂ, ವಿಧವೆಯರು, ಪರಿತ್ಯಕ್ತೆಯರು, ಬಡಕುಟುಂಬದವರು ಮುಂತಾದವರು ತಮ್ಮ ಸಮಸ್ಯೆಗೆ ಪರಿಹಾರ ಕಾಣುವ ಬದಲು ತೀರಾ ಅತಂತ್ರ ಸ್ಥಿತಿಯಲ್ಲಿ ಇಳಿಯಬೇಕಾಗುತ್ತದೆ.

ನಮ್ಮ ದೇಶದಲ್ಲಿ ವೇಶ್ಯಾ ಸಮಸ್ಯೆಯೊಂದು ಅತ್ಯಂತ ಕ್ಲಿಷ್ಟವಾದ ಸಮಾಜೋ ಆರ್ಥಿಕ ಸ್ವರೂಪದಲ್ಲಿ ಕಂಡುಬರುತ್ತದೆ. ಇದರಲ್ಲಿ ಬಡತನದ ಪಾಲು ಅಧಿಕವಾದರೆ, ಸಾಂಸ್ಕೃತಿಕ, ಧಾರ್ಮಿಕ, ನಂಬಿಕೆ, ಸಾಮಾಜಿಕ ರಚನೆಯ ಪಾಲು ಅಷ್ಟೇ ಮುಖ್ಯವಾದುದಾಗಿದೆ. ಗುಲಬರ್ಗಾ ನಗರದಲ್ಲಿ ಕಂಡುಬರುವ ಲೈಂಗಿಕ ಕಾರ್ಯಕರ್ತೆಯರ ಬದುಕನ್ನು ಅವಲೋಕಿಸಿದಾಗ ಅಲ್ಲಿನ ವಕ್ತೃಗಳ ನೀಡಿದ ವಿವರಗಳು ಆಧಾರದ ಮೇಲೆ ಬಡತನ, ಅನಕ್ಷರತೆ, ಅಸ್ಪೃಶ್ಯತೆ ಹಾಗೂ ಅನೇಕರು ಹೊಟ್ಟೆಪಾಡಿಗಾಗಿ ಗಂಡನಿಂದ ತಿರಸ್ಕೃತರಾದವರು, ವಿಧವೆಯರು, ತವರುಮನೆಯ

ಹಾಗೂ ಬಂಧುಗಳ ಆಸರೆಯ ಇಲ್ಲದಂತಹವರು ಮುಂತಾದ ಕಾರಣಗಳಿಂದ ಲೈಂಗಿಕ ವೃತ್ತಿಯನ್ನು ಅವಲಂಬಿಸಿರುವುದು ತಿಳಿದುಬರುತ್ತದೆ.

ಆರ್ಥಿಕ ಕಾರಣಗಳು

ಆರ್ಥಿಕ ಅಂಶಗಳಾದ ಬಡತನ, ನಿರುದ್ಯೋಗ, ಕೈಗಾರೀಕರಣ, ನಗರೀಕರಣ ಮುಂತಾದವು ವೇಶ್ಯಾವೃತ್ತಿಗೆ ಪ್ರಬಲವಾದ ಅವ್ಯಕ್ತ ಕಾರಣಗಳೆಂದು ಅನೇಕ ಸಮೀಕ್ಷೆ ಹಾಗೂ ಅಧ್ಯಯನಗಳಿಂದ ಖಚಿತವಾಗಿ ತಿಳಿದುಬಂದಿದೆ. ಹಳ್ಳಿಯಿಂದ ನಗರಕ್ಕೆ ಬಂದ ಬಡ ಯುವತಿಯರು ನಗರದಲ್ಲೇ ಹುಟ್ಟಿ ಬೆಳೆದು ಬಡತನದಲ್ಲಿರುವವರು ಅವಿದ್ಯಾವಂತರಾಗಿದ್ದಾರೆ. ಇನ್ನೊಬ್ಬರ ಮನೆಯ ಕೆಲಸ ಮಾಡಿ ಜೀವಿಸಬೇಕಾಗುತ್ತದೆ. ಮನೆಯ ಮಾಲೀಕ ಅಥವಾ ಅವನ ಗಂಡುಮಕ್ಕಳು ಕಾಮುಕರಾಗಿದ್ದರೆ ಕೆಲಸ ಮಾಡುವ ಯುವತಿಯರಿಗೆ ಹಣದಾಸೆ ಒಡ್ಡಿ ಅವರನ್ನು ಹಾಳು ಮಾಡುತ್ತಾರೆ. ನಂತರ ಆ ಮನೆಯವರು ನಿನ್ನ ನಡತೆ, ರೀತಿ-ನೀತಿ ಚೆನ್ನಾಗಿಲ್ಲ ಎಂದು ಮನೆಯ ಯಜಮಾನಿ ಅವಳನ್ನು ಕೆಲಸದಿಂದ ಬಿಡಿಸುತ್ತಾಳೆ. ಬೇರೆಯವರ ಮನೆಯಲ್ಲಿ ಇದೇ ಪುನಾರಾವರ್ತನೆಯಾಗಬಹುದು. ಹೀಗೆ ಹಲವಾರು ರೀತಿಯಲ್ಲಿ ಬಡತನದಲ್ಲಿ ಬಳಲುವ ಸ್ತ್ರೀಯರು ಶೋಷಣೆಗೆ ಒಳಗಾಗುತ್ತಾರೆ. ಮುಂದೆ ದಾರಿ ಕಾಣದೆ ಮೈ ಮಾರಿಕೊಂಡು ಹಣಗಳಿಸುವ ವೃತ್ತಿಗೆ ಇಳಿಯುವ ಸಂಭವವೇ ಹೆಚ್ಚು ಎಂದು ಹೇಳಬಹುದು. ಮುಂದೆ ಜನಸಂದಣಿ ಇರುವ ಜಾಗದಲ್ಲಿ ನಿಂತು ಕಾಮುಕರ ಕೈ ಹಿಡಿದು ಅವರಿಗೆ ದೇಹ ಒಪ್ಪಿಸಿ ಹಣ ಸಂಪಾದಿಸುತ್ತಾರೆ. ಒಬ್ಬ ಸ್ತ್ರೀ ವೇಶ್ಯಾಯಾಗುವುದಕ್ಕೆ ಹಲವಾರು ಕಾರಣಗಳಿರಬಹುದಾದರೂ ಬಡತನವೇ ಮುಖ್ಯ ಕಾರಣವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಕ್ತೃಗಳ ಹೇಳುವ ಪ್ರಕಾರ ಅವರು ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಬಡತನವೇ ಮೂಲ ಕಾರಣವೆಂಬುದು ಸ್ಪಷ್ಟವಾಗಿ ತಿಳಿದುಬಂದಿದೆ. ಬಡ ಹುಡುಗಿಯರು ಹಾಗೂ ಸ್ತ್ರೀಯರಿಗೆ ಜೀವನೋಪಾಯಕ್ಕೆ ಬೇರೆ ಮಾರ್ಗವಿಲ್ಲದೆ ಲೈಂಗಿಕ ಸ್ವೇಚ್ಛಾಪರತೆಗೆ ಬಲಿಯಾಗಿ ವೇಶ್ಯೆಯಾಗುತ್ತಾರೆ. ಹಸಿವು, ಬಡತನ, ಆರ್ಥಿಕ ಅಸಮಾನತೆ, ಮೋಜಿನ ಜೀವನದ ವ್ಯಾಮೋಹ ಮುಂತಾದ ಕೆಲವು ಅಂಶಗಳು ವೇಶ್ಯಾವೃತ್ತಿಗಿಳಿಯಲು ಪ್ರಚೋದಿಸುತ್ತವೆ. ಅಸಹಾಯಕ ಸ್ತ್ರೀಯರಿಗೆ ವೇಶ್ಯಾವೃತ್ತಿಯು ಸುಲಭ ಜೀವನೋಪಾಯವಾಗಿದೆ ಎಂಬುದನ್ನು ಹೇಳಿದರೆ ತಪ್ಪಾಗಲಾರದು.

ತೀವ್ರ ಕೈಗಾರೀಕರಣ ಹಾಗೂ ನಗರೀಕರಣದಿಂದಾಗಿ ವಸತಿ ಗೃಹಗಳ ಅಭಾವ, ಏಕಾಂತತೆಗೆ ಅವಕಾಶವಿಲ್ಲದಿರುವಿಕೆ, ಕಿಕ್ಕಿರಿದ ಜನಸಂದಣಿ, ಮನರಂಜನಾ ಸೌಲಭ್ಯಗಳ

ಅಭಾವ ಮುಂತಾದವು ಕಾರ್ಮಿಕ ಸ್ತ್ರೀಯರನ್ನು ಅನೈತಿಕ ಲೈಂಗಿಕ ಕ್ರಿಯೆಯಲ್ಲಿ ತೊಡಗುವಂತೆ ಪ್ರಚೋದಿಸುತ್ತವೆ. ಏರುತ್ತಿರುವ ಬೆಲೆಗಳಲ್ಲಿ ಕಡಿಮೆ ಕೂಲಿಯಲ್ಲಿ ಜೀವನ ಸಾಗಿಸುವ ಸ್ತ್ರೀಯರು ತಮ್ಮ ದೇಹವನ್ನು ಹಣಕ್ಕಾಗಿ ಮಾರಿಕೊಳ್ಳುವ ಸಂದರ್ಭಗಳು ಬರಬಹುದು. ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಲ್ಲಿ ವೇಶ್ಯಾವೃತ್ತಿಯು ಆಚರಣೆಯಲ್ಲಿದೆಯೆಂದು ಅನೇಕ ಸಮೀಕ್ಷೆಗಳು ರುಜುವಾತುಪಡಿಸಿದೆ.

ಗುಲಬರ್ಗಾ ಇಂದು ಇಡೀ ರಾಜ್ಯದಲ್ಲಿಯೇ ಬಹುದೊಡ್ಡ ಜಿಲ್ಲೆಯಾಗಿ ಬೆಳೆದಿದೆ. ಈ ಬೃಹತ್ ನಗರದಲ್ಲಿ ಬೇರೆ ಬೇರೆ ಹಳ್ಳಿಗಳಿಂದ ಅಥವಾ ಊರುಗಳಿಂದ ಸಾವಿರಾರು ಕಾರ್ಮಿಕರು ಬಂದು ವಿವಿಧ ಕಾರ್ಖಾನೆಗಳ, ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ವಿವಿಧ ಸ್ಥಳಗಳಲ್ಲಿ ದುಡಿಯುತ್ತಿದ್ದಾರೆ. ನಗರದಲ್ಲಿ ಹೆಚ್ಚು ವೇಶ್ಯಾವೃತ್ತಿಗೆ ಇಳಿದವರಲ್ಲಿ ಈ ಕಾರ್ಮಿಕ ವಲಯದಿಂದ ಬಂದವರಾಗಿದ್ದಾರೆ. ಇವರು ತಮ್ಮ ಊರು, ಹಳ್ಳಿಗಳಲ್ಲಿ ಹೆಂಡಿರು ಮಕ್ಕಳು ಬಿಟ್ಟು ಬಂದಿರುತ್ತಾರೆ. ಅಲ್ಲದೇ ಸ್ತ್ರೀಯರು ಕೂಡ ತಂದೆತಾಯಿ, ಅಣ್ಣ ತಮ್ಮಂದಿರನ್ನು ಬಿಟ್ಟು ಕುಟುಂಬಕ್ಕೆ ಆರ್ಥಿಕವಾಗಿ ಆಸರೆಯಾಗಲು ವಿಶೇಷವಾಗಿ ವಿಧವೆಯರು ಬಂದಿರುವುದನ್ನು ಕಾಣಬಹುದಾಗಿದೆ. ದುಡಿಯುವ ಸ್ಥಳಗಳಲ್ಲಿ ಕೆಲಸ ಮಾಡುವಾಗ ಕಾಮೋದ್ರೇಕಕ್ಕೆ ಬಲಿಯಾಗಿ ಅರಿವಿಲ್ಲದೆಯೆ ಲೈಂಗಿಕ ಸಂಬಂಧ ಏರ್ಪಟ್ಟು ಮುಂದೆ ಇದೇ ಸಂಬಂಧಗಳು ಬೆಳೆಯುತ್ತಾ ಹೋಗಿ ಕಾರ್ಮಿಕ ಸ್ತ್ರೀಯರು ವೇಶ್ಯಾವೃತ್ತಿಗೆ ಬಹಳ ಸುಲಭವಾಗಿ ಬಲಿಯಾಗುತ್ತಾರೆ.

ವಕ್ತೃ ಹೇಳುವ ಪ್ರಕಾರ: ಅತೀ ಕಡುಬಡತನದಿಂದ ಬದುಕನ್ನು ಸಾಗಿಸುತ್ತಿದ್ದ ನಾವು ಹೊಟ್ಟೆ ಪಾಡಿಗಾಗಿ ದುಡಿಯಲು ಇಲ್ಲಿಗೆ ಬಂದಾಗ ಬೇರೆಯವರೊಂದಿಗೆ ಸಂಬಂಧ ಬೆಳೆಸಿ ಬದುಕುವುದು ಅನಿವಾರ್ಯವಾಯಿತು. ಈ ಸಂಬಂಧ ನಮ್ಮ ಸಂಬಂಧಿಕರೆಲ್ಲರೂ ತಿಳಿದು ನನ್ನನ್ನೂ ಎಲ್ಲರೂ ತಿರಸ್ಕರಿಸಿದರು. ಇದರಿಂದ ನಾನು ಈ ವೃತ್ತಿ ಬಿಟ್ಟು ಹೊರಗಡೆ ಬರಲು ಸಾಧ್ಯವಾಗಲಿಲ್ಲ ಎಂದು ಹೇಳುತ್ತಾರೆ.

ಜಿಲ್ಲೆಯ ಚಿಂಚೋಳಿ, ಸೇಡಂ, ಚಿತ್ತಾಪೂರ ತಾಲ್ಲೂಕಿನಲ್ಲಿ ಬಡತನ ಕಾರಣದಿಂದ ಹೆಣ್ಣು ಮಕ್ಕಳು ಮಾರಾಟವಾಗಿರುವುದು ಮಾಧ್ಯಮಗಳು ವರದಿ ಮಾಡಿವೆ. ಬಡತನ ವೇಶ್ಯಾವೃತ್ತಿಗೆ ಅತ್ಯಂತ ಪ್ರಮುಖವಾದ ಕಾರಣವೆಂದು ಹೇಳಬಹುದು.

ಸುಖಮಯ ಬದುಕನ್ನು ಸಾಗಿಸಬೇಕೆನ್ನುವ ಆಸೆಯಿಂದ ಮತ್ತು ಹೆಚ್ಚು ಹಣ ಸಂಪಾದಿಸಬೇಕು. ಐಷಾರಾಮ ಜೀವನ ನಡೆಸಬೇಕು ಎಂದು ಕನಸುಗಳನ್ನು ಕಟ್ಟಿಕೊಂಡು

ಹಲವು ಜನ ಲೈಂಗಿಕ ವೃತ್ತಿಗೆ ಇಳಿದಿದ್ದಾರೆ. ಹೀಗೆ ಆರ್ಥಿಕ ಕಾರಣಗಳು ಸ್ತ್ರೀಯು ವೇಶ್ಯಾವೃತ್ತಿಯಲ್ಲಿ ತೊಡಗಲು ಪ್ರೇರಕವಾಗಿವೆ.

ಅನುವಂಶೀಯ ಅಂಶಗಳು

ಅನುವಂಶೀಯತೆಯು ಕೂಡ ವೇಶ್ಯಾವೃತ್ತಿಗೆ ಪ್ರೇರಕವಾದ ಅಂಶವಾಗಿದೆ. ವೇಶ್ಯಾವೃತ್ತಿಯನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಲಾಗುವುದೆಂದು ನಂಬಿಕೆಯಿದೆ. ಕ್ಷೇತ್ರಕಾರ್ಯ ಸಮಯದಲ್ಲಿ ಗಮನಿಸಿದಂತೆ ಅಲ್ಲಿನ ಲೈಂಗಿಕ ಕಾರ್ಯಕರ್ತೆಯರು ಹಲವಾರು ತಮ್ಮ ತಾಯಿಯ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಕಂಡುಬರುತ್ತದೆ. ಏಕೆಂದರೆ ವೇಶ್ಯೆ ಅಥವಾ ಲೈಂಗಿಕ ಕಾರ್ಯಕರ್ತೆಯರ ಮಕ್ಕಳಿಗೆ ಸಮಾಜದಲ್ಲಿ ಯಾವುದೇ ರೀತಿ ಗೌರವ, ಮರ್ಯಾದೆ ಮತ್ತು ಸ್ಥಾನಮಾನಗಳು ಇರದೇ ಇರುವುದರಿಂದ ಅನಿವಾರ್ಯವಾಗಿ ತನ್ನ ತಾಯಿಯ ವೃತ್ತಿಯಲ್ಲಿ ತೊಡಗಿರುವುದು ಹೆಚ್ಚು ಕಂಡುಬರುತ್ತದೆ. ಒಂದು ವೇಳೆ ಗಂಡು ಮಗು ಜನಿಸಿದರೆ ಬೇರೆಕಡೆಗೆ ಬಿಟ್ಟುಬರುತ್ತಾರೆ. ಕೆಲವು ವೇಶ್ಯೆಯರು ಬೇರೆ ಕಡೆಗೆ ಬಿಟ್ಟು ಶಾಲೆ ಓದಿಸುತ್ತಿದ್ದೇವೆ ಎಂದು ಹೇಳುತ್ತಾರೆ. ಗರ್ಭದಲ್ಲಿ ಗಂಡುಮಗು ಎಂದು ಗೊತ್ತಾದರೆ ಗರ್ಭಪಾತ ಕೂಡ ಮಾಡಿಸಿಕೊಳ್ಳುತ್ತಾರೆ. ಕೆಲವರು ಹೆಣ್ಣು ಮಗು ಕೂಡ ತಮ್ಮಂತೆಯೇ ಪಾಪಕೂಪಕ್ಕೆ ಬೀಳಬಾರದೆಂದು ಗರ್ಭಪಾತ ಮಾಡಿಸಿಕೊಳ್ಳುತ್ತಾರೆ ಎಂಬುದು ತಿಳಿದುಬಂದಿದೆ.

ವಂಶಪರಂಪರೆ ವೃತ್ತಿಯೆಂದು ಕೆಲವು ವೇಶ್ಯ ತಾಯಂದಿರು ಮಕ್ಕಳಿಗೆ ವರ್ಗಾಯಿಸುತ್ತಿದ್ದಾರೆ. ಪರಂಪರಾಗತ ಕಸುಬಿಗೆ ಕಟ್ಟುಬಿದ್ದ ಮಗಳು ಇದನ್ನೆ ಅನುಸರಿಸುತ್ತಾಳೆ. ವೇಶ್ಯಾವೃತ್ತಿಯನ್ನು ಪರಂಪರಾಗತ ಕಸುಬು ಎಂದು ತಿಳಿದಿರುವವರು ಮಗಳಿಗೆ 'ಗೆಜ್ಜೆ ಪೂಜೆ' ಮಾಡಿಸುವ ಸಂಪ್ರದಾಯ ಕೂಡ ಬೆಳೆದು ಬಂದಿದೆ. ಸತ್ಕುಲ ಕನ್ಯೆಗೆ ವಿವಾಹ ಎಷ್ಟು ಪ್ರಾಧಾನ್ಯವೋ ಹಾಗೇ ವೇಶ್ಯೆಯಾಗುತ್ತಿರುವ ಕನ್ಯೆಗೆ ಸಾಂಪ್ರದಾಯಿಕವಾಗಿ ಗೆಜ್ಜೆಪೂಜೆಯೂ ಅಷ್ಟೇ ಮುಖ್ಯವಾದುದು.

ಸಾಮಾಜಿಕ ಕಾರಣಗಳು

ಬಾಲ್ಯ ವಿವಾಹ, ಬಹುಪತ್ನಿತ್ವ, ಕೌಟುಂಬಿಕ ವಿಘಟನೆ. ದ್ವಿಮುಖ ನೈತಿಕತೆಯ ದುಷ್ಪರಿಣಾಮಗಳು, ವಿಧವಾ ವಿವಾಹದ ಮೇಲಿನ ನಿರ್ಬಂಧಗಳು, ವರದಕ್ಷಿಣೆ ಮುಂತಾದ ಸಾಮಾಜಿಕ ಅಂಶಗಳು ವೇಶ್ಯಾವೃತ್ತಿಗೆ ಪ್ರೇರಕವಾಗಿವೆ.

ಭಾರತೀಯ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಬಾಲ್ಯವಿವಾಹ ಪದ್ಧತಿ ಹೆಚ್ಚು ಕಂಡು ಬರುತ್ತವೆ. ಚಿಕ್ಕ ವಯಸ್ಸಿನಲ್ಲಿ ವಿವಾಹ ಮಾಡಿಕೊಂಡ ಹಲವಾರು ಸ್ತ್ರೀಯರು ಗಂಡ ತೀರಿಕೊಂಡು ವಿಧವೆಯರಾಗಿದ್ದಾರೆ. ಆದರೆ ವಿಧವಾ ಪುನರ್‌ವಿವಾಹ ನಿಷೇಧ ಇರುವುದರಿಂದ ಸಮಾಜದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಂತಹ ವಿಧವೆಯರನ್ನು ಆತ್ಮ ಸಂತೋಷದಿಂದ ಕೈಹಿಡಿದು ವಿವಾಹವಾಗಲಿಚ್ಛಿಸುವವರ ಸಂಖ್ಯೆ ಕಡಿಮೆಯೇ ಇದೆ ಎಂದರೆ ಅತಿಶಯೋಕ್ತಿಯಾಗಲಾರದು.

ಬಾಲ್ಯ ವಿವಾಹ ಕಾನೂನುಬಾಹಿರವಾಗಿದ್ದರೂ ಸಹ ಸಂಪ್ರದಾಯಿಕ ಹಿಂದೂ ಸಮಾಜದಲ್ಲಿ ಇದು ಹೆಚ್ಚು ಆಚರಣೆಯಲ್ಲಿದೆ. ದುರದೃಷ್ಟದಿಂದ ಪ್ರಾಪ್ತ ವಯಸ್ಕರಿರುವಾಗಲೇ ಕೆಲವು ಜನ ವಿಧವೆಯರಾಗಬಹುದು. ಅವರಿಗೆ ಕಾಮ ಬಯಕೆಯಿದ್ದರೂ ಅದನ್ನು ವ್ಯಕ್ತಪಡಿಸುವ ಹಾಗಿಲ್ಲ. ಆಕೆಯು ಶೀಲವಂತಳಾಗಿ ಜೀವನ ಪರ್ಯಂತ ವಿಧವೆಯಳಾಗಿರಬೇಕೆಂದು ಸಮಾಜ ಬಯಸುತ್ತದೆ. ಇಂತಹವರು ಕಾಲಕ್ರಮೇಣ ಕಾಮುಕರ ಕಾಟ ತಡೆಯಲಾರದೆ ವೇಶ್ಯೆಯರಾಗುತ್ತಾರೆ.

ವಕ್ತೃ ಪ್ರಕಾರ: ನನಗೆ ತಂದೆ-ತಾಯಿಗಳು ಚಿಕ್ಕವರಿರುವಾಗಲೇ ಮದುವೆ ಮಾಡಿದರು. ೨೩ ವರ್ಷ ತುಂಬುವಷ್ಟರಲ್ಲಿ ಗಂಡನನ್ನು ಕಳೆದುಕೊಂಡೇನು. ನಂತರ ನಮಗೆ ತಂದೆ-ತಾಯಿಗಳು ಕಣ್ಮುಚ್ಚಿದರು. ಬಂಧುಗಳು ಸರಿಯಾಗಿ ನೋಡಿಕೊಳ್ಳಲಿಲ್ಲ. ೨ ವರ್ಷದ ಹೆಣ್ಣು ಮಗುವಿನೊಂದಿಗೆ ನಗರಕ್ಕೆ ಬಂದು ಕೂಲಿ, ನಾಲಿ ಮಾಡಿ ಬದುಕಲು ಪ್ರಾರಂಭಿಸಿದೆ. ಕೆಲಸಕ್ಕೆ ಹೋದಂತಹ ಸ್ಥಳಗಳಲ್ಲಿ ಜನ ನನ್ನನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದರು. ಒಮ್ಮೆ ನನಗೆ ಮಲೇರಿಯಾ ಜ್ವರ ಬಂದು ತಿಂಗಳವರೆಗೆ ಮಲಗಿ ಬಿಟ್ಟೆ. ಬೇರೆ ದವಾಖಾನೆಗೆ ತೋರಿಸಲು ಹಣ ಕೂಡ ಇರಲಿಲ್ಲ. ಒಂದೊತ್ತಿನ ಊಟಕ್ಕೂ ಕೂಡ ಗತಿ ಇಲ್ಲದಂತಾಯಿತು. ಇಂತಹ ಸ್ಥಿತಿಯಲ್ಲಿ ಕೆಲಸ ಕೊಟ್ಟವನ ಹತ್ತಿರ ಹಣ ಕೇಳಲು ಹೋದಾಗ ನನ್ನ ಜೊತೆ ದೇಹ ಹಂಚಿಕೊಂಡರೆ ಹಣ ಕೊಡುತ್ತೇನೆ ಎಂದು ಹೇಳಿದ. ನನ್ನ ಅಂತಹ ಸ್ಥಿತಿಯಲ್ಲಿ ಅನಿವಾರ್ಯವಾಗಿ ದೇಹ ಒಪ್ಪಿಸಬೇಕಾಯಿತು. ಅಲ್ಲಿಂದ ನನ್ನ ಈ ವೃತ್ತ ಪ್ರಾರಂಭವಾಯಿತು ಎಂದು ಬಹಳಷ್ಟು ನೋವಿನಿಂದ ಹೇಳುತ್ತಾಳೆ. ಮಗಳು ಕೂಡ ಇದೇ ವೃತ್ತಿ ಮಾಡುತ್ತಿದ್ದಾಳೆ. ಹೀಗೆ ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಲೈಂಗಿಕ ವೃತ್ತಿಯಲ್ಲಿ ತೊಡಗಬೇಕಾದ ಸಂದರ್ಭಗಳು ಬಂದೊದಗುತ್ತವೆ.

ಬಹುಪತ್ನಿತ್ವ ಕೂಡ ಲೈಂಗಿಕ ವೃತ್ತಿಯಲ್ಲಿ ತೊಡಗಲು ಪೂರಕವಾದ ಅಂಶವಾಗಿದೆ. ಬಹುಪತ್ನಿಯರಲ್ಲಿ ಪರಸ್ಪರ ದ್ವೇಷ, ಅಸೂಯೆ, ವೈಮನಸ್ಸುಗಳು, ಭಿನ್ನಾಭಿಪ್ರಾಯಗಳು ಹೆಚ್ಚು ಕಂಡು ಬರುತ್ತವೆ. ಯಾವ ಹೆಣ್ಣು ಕೂಡ ತನ್ನ ಗಂಡು ಮತ್ತೊಬ್ಬಳೊಡನೆ ಪ್ರೇಮ

ಹಂಚಿಕೊಳ್ಳುವುದನ್ನು ಸಹಿಸುವುದಿಲ್ಲ. ಇದರಿಂದ ವೈವಾಹಿಕ ಬದುಕು ಸುಖಕರದಿಂದ ಕೂಡಿರಲು ಸಾಧ್ಯವಿಲ್ಲ. ಗಂಡನ ಪ್ರೇಮದಿಂದ ವಂಚಿಸಲ್ಪಟ್ಟ ಹೆಂಡಂದಿರು ಲೈಂಗಿಕತೆಯಲ್ಲಿ ಸಂತೃಪ್ತಿ ಕಾಣದೆ ಬೇರೆಯವರೊಂದಿಗೆ ಸಂಬಂಧ ಬೆಳೆಸಲು ಪ್ರಾರಂಭಿಸುತ್ತಾರೆ. ಮುಂದೆ ಕಾಲಕ್ರಮೇಣ ಇವರು ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಪಿತೃಪ್ರಧಾನ ಸಮಾಜ ಬಹುಮುಖ್ಯ ಅಂಶಗಳಲ್ಲಿ ಒಂದು. ಅದು ಸ್ತ್ರೀಯನ್ನು ಉಪಭೋಗದ ವಸ್ತುವಾಗಿ ಪರಿಗಣಿಸುವುದು. ನಿಸರ್ಗದ ಎಲ್ಲಾ ಜೀವಿಗಳಲ್ಲಿ ಲೈಂಗಿಕತೆಯು ಸರ್ವಸಾಧಾರಣ ಲಕ್ಷಣವಾಗಿರುವಂತೆ ಮಾನವನಲ್ಲಿ ಲೈಂಗಿಕ ಭಾವನೆಗಳು ಸಹಜವಾಗಿದ್ದರೂ ಪಿತೃಪ್ರಧಾನ ಸಮಾಜವು ಅದರಲ್ಲಿ ಲಿಂಗಭೇದವನ್ನು ಅಳವಡಿಸಿ ದ್ವಿಮುಖ ಮೌಲ್ಯ ವ್ಯವಸ್ಥೆಯನ್ನು ರೂಪಿಸಿದೆ. ಪಿತೃಪ್ರಧಾನತೆಯು ತನ್ನ ಅನುಕೂಲಕ್ಕಾಗಿ ಸ್ತ್ರೀ-ಪುರುಷರ ಲೈಂಗಿಕ ಚಟುವಟಿಕೆಯ ಬಗ್ಗೆ ಹಲವಾರು 'ಮಿಥ್'ಗಳನ್ನು ರೂಪಿಸಿ, ಅವುಗಳನ್ನು ಸಾಮಾಜೀಕರಣಗೊಳಿಸುವ ಮೂಲಕ ಸ್ತ್ರೀ ದೇಹದ ಮೇಲೆ ತನ್ನ ಹತೋಟಿಯನ್ನು ನಿರಂತರವಾಗಿ ಉಳಿಸಿಕೊಳ್ಳಲು ಪ್ರಯತ್ನಿಸಿದೆ. ಪುರುಷನಂತೆಯೂ ಸ್ತ್ರೀಗೂ ಇರುವ ಲೈಂಗಿಕ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಸಲುವಾಗಿ ಅವಳ ಮೇಲೆ ಅತಿಯಾದ ಪಾವಿತ್ರ್ಯದ ನಿರ್ಬಂಧಗಳನ್ನು ಹೇರುತ್ತಿದ್ದಂತೆಯೇ ಪುರುಷರ ಲೈಂಗಿಕಾಸಕ್ತಿಗಳನ್ನು ತಣಿಸುವ, ಪ್ರೋತ್ಸಾಹಿಸುವ ಧಾರಿಗಳಾಗಿ ವೇಶ್ಯಾ ಪದ್ಧತಿಗಳನ್ನು ರೂಪಿಸಿಕೊಂಡಿದೆ. ಪುರುಷನ ಲೈಂಗಿಕಾಸಕ್ತಿಯನ್ನು ತೃಪ್ತಿಪಡಿಸುವ ಸಾಧನವಾಗಿ ಸಮಾಜದ ಕೆಲವು ಸ್ತ್ರೀಯರನ್ನು ಬಳಸಿಕೊಳ್ಳುತ್ತಲೇ ಅವರನ್ನು ಸಮಾಜ ಬಾಹಿರವಾಗಿ ಪರಿಗಣಿಸಲಾಗಿದೆ. ಪರಿಣಾಮವಾಗಿ ಈ ಸಮಾಜದಲ್ಲಿ ಒಂದೆಡೆ ಸ್ತ್ರೀ ಪಾವಿತ್ರ್ಯದಲ್ಲಿ ಬಂಧಿತಳಾಗಿ ನರಳುತ್ತಿದ್ದರೆ ಇನ್ನೊಂದೆಡೆ ಅತಿಯಾದ ಲೈಂಗಿಕ ಆಕ್ರಮಣಕ್ಕೆ ಒಳಗಾಗಿ ನರಳುತ್ತಿದ್ದಾಳೆ. ಹೀಗೆ ಸ್ತ್ರೀ ಎರಡು ಅಲೆಗಳಲ್ಲಿ ಇಡುವ ಮೂಲಕವೇ ಪುರುಷ ತನ್ನ ಸುಖವನ್ನು, ಕ್ಷೇಮವನ್ನು, ಅಧಿಕಾರವನ್ನು ಯಶಸ್ವಿಯಾಗಿ ಸಾಧಿಸಿಕೊಳ್ಳುತ್ತಿದ್ದಾನೆ. ಆ ಕಾರಣಕ್ಕಾಗಿಯೇ ಸಾಮಾಜಿಕ ಮಾನವಶಾಸ್ತ್ರಜ್ಞರು ಎಲ್ಲಿಯವರೆಗೆ ಕುಟುಂಬ ಹಾಗೂ ಮದುವೆಗಳಂತಹ ಸಾಮಾಜಿಕ ಸಂಸ್ಥೆಗಳು ಲಿಂಗ ತಾರತಮ್ಯಕ್ಕೆ ಒಳಗಾಗುತ್ತವೆಯೋ ಅಲ್ಲಿಯವರೆಗೆ ವೇಶ್ಯಾ ಸಮಸ್ಯೆಯಂತಹವು ಜೀವಂತವಾಗಿರುತ್ತವೆ ಎನ್ನುತ್ತಾರೆ.

ಹೀಗೆ ಮಹಿಳೆ ಬಹುಮುಖಿ ಶೋಷಣೆಗೆ ಗುರಿಯಾಗುತ್ತ ಬಂದಿದ್ದಾಳೆ. ಲೈಂಗಿಕತೆಯು ಸಮಾಜ ಮನ್ನಿತ, ಸಮಾಜ ಬಾಹಿರ ಎಂದು ಎರಡು ತೆರನಾಗಿವೆ. ಸಮಾಜ ಬಾಹಿರವು ಅತ್ಯಾಚಾರ, ಬಲತ್ಕಾರ, ವ್ಯಭಿಚಾರ, ಇವುಗಳನ್ನು ಅಪರಾಧಗಳೆಂದು ಪರಿಗಣಿಸಲಾಗುತ್ತದೆ. ಸಮಾಜ ಮನ್ನಿತವು ಪತ್ನಿ ಪತ್ನಿಯೇತರವೆಂದು ಎರಡು ತೆರನಾಗಿವೆ. ಪತ್ನಿ ಸಂಬಂಧದಲ್ಲಿ

ಪುರುಷ ಒಬ್ಬಳಿಗೆ ಮಾತ್ರ ಸೀಮಿತನಾಗದೆ ಬಹುಪತ್ನಿ ಸವಲತ್ತು ಪಡೆದಿದ್ದಾನೆ. ಇಷ್ಟಕ್ಕೆ ನಿಲ್ಲದೇ ಹಲವು ಪತ್ನಿಯೇತರ ಲೈಂಗಿಕ ಸವಲತ್ತುಗಳನ್ನು ಕೂಡ ಪಡೆದಿದ್ದಾನೆ.

ಆದರೆ ಸ್ತ್ರೀ ಇನ್ನೊಬ್ಬನ ಪುರುಷನ ಜೊತೆ ಲೈಂಗಿಕ ಸಂಬಂಧ ಹೊಂದಿದರೆ ಸಮಾಜದಲ್ಲಿ ಹಲವು ನಿಂದನೆ, ಅಪವಾದ, ಬಹಿಷ್ಕಾರ ಹೆದುರಿಸಬೇಕಾಗುತ್ತದೆ. ಸ್ತ್ರೀಯ ಅನೈತಿಕ ಸಂಬಂಧ ಸಮಾಜ ಸಹಿಸುವುದಿಲ್ಲ. ಆಕೆಗೆ ಕಠೋರವಾಗಿ ದಂಡಿಸುತ್ತದೆ. ಹೀಗೆ ದ್ವಿಮುಖ ನೀತಿಯ ನೈತಿಕತೆಯ ಪರಿಣಾಮವಾಗಿ ಸ್ತ್ರೀ ಹಲವಾರು ಮಾನಸಿಕ ಒತ್ತಡಗಳಿಗೆ ಒಳಗಾಗಿ ವೇಶ್ಯಾವೃತ್ತಿಗೆ ಬೀಳುವ ಸಂದರ್ಭಗಳು ಬಂದೊದುಗುತ್ತವೆ.

ಹೀಗೆ ಲೈಂಗಿಕ ವೃತ್ತಿಗೆ ಹಲವು ನೆಲೆಗಳಿವೆ. ಪರಿಸ್ಥಿತಿ ಮತ್ತು ಪದ್ಧತಿಗಳು ಪುರುಷ ಪ್ರಧಾನ ಸಂಪ್ರದಾಯಗಳು ಉಳಿದುಕೊಂಡಿರುವ ನಮ್ಮ ನಾಗರಿಕತೆಯಲ್ಲಿ ಮದುವೆಯಾಗಿ ನಂಬಿಕೆ ದ್ರೋಹ ಮಾಡಿದರೆ, ಹಾಗೆ ಮಾಡುವ ಗಂಡಸಿಗಿಂತ ಹಾಗೆ ಮಾಡುವ ಹೆಂಗಸಿಗೆ ಹೀನಾಯವಾಗುತ್ತದೆ.

ಇಂದಿನ ಅವಿಭಕ್ತ ಕುಟುಂಬಗಳ ಶಿಥಿಲತೆ ಅಥವಾ ಕೌಟುಂಬಿಕ ವಿಘಟನೆಗಳಿಂದ ಮನೆಯಲ್ಲಿನ ವಿಧವೆಯರು ಅವಿವಾಹಿತರು, ತರುಣಿಯರು ದಾರಿ ತಪ್ಪುತ್ತಿದ್ದಾರೆ. ಹೆಣ್ಣು ಮಕ್ಕಳ ಮೇಲೆ ತಂದೆ-ತಾಯಿಗಳ, ಬಂಧುಗಳ ಹಿಡಿತವಿಲ್ಲದಿರುವಿಕೆ, ತಂದೆ-ತಾಯಿಗಳು ಅನೈತಿಕ ಸಂಬಂಧಗಳನ್ನು ಹೊಂದಿರುವುದು ಮುಂತಾದವುಗಳಿಂದ ಅನೇಕ ಸ್ತ್ರೀಯರು ತಮ್ಮ ಬಂಧುಗಳಿಂದ, ಹೊರಗಿನವರಿಂದ ಅನೈತಿಕ ಸಂಬಂಧ ಹೊಂದಿರುವುದನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ವಕ್ತೃಗಳು ಹೇಳಿದ ಅನುಭವಗಳಿಂದ ತಿಳಿದು ಬರುತ್ತದೆ.

ನಗರದ ಕ್ಷೇತ್ರಕಾರ್ಯದಲ್ಲಿ ವಕ್ತೃಗಳು ಹೇಳುವ ಪ್ರಕಾರ ರವಿವಾರ ಮತ್ತು ಹಲವಾರು ಕಾಲೇಜು ರಜಾದಿನಗಳು ಬಂದರೆ ಮೆಡಿಕಲ್, ಇಂಜಿನಿಯರ್, ವಿವಿಧ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳು ಅವರಲ್ಲಿನ ಹೆಚ್ಚಿನ ಕಾಮ ತೀರಿಸಿಕೊಳ್ಳಲು ಬರುತ್ತಾರೆಂಬುದು ಗಮನಿಸಬೇಕಾದ ಅಂಶವಾಗಿದೆ. ನಾವು ಅವರಿಗೆ (ವಿದ್ಯಾರ್ಥಿಗಳಿಗೆ) ಈ ಹೊಲಸಿನಲ್ಲಿ ಬೀಳಬಾರದು ನೀವು ಓದುವವರೂ ಎಂದು ಎಷ್ಟೋ ಬುದ್ಧಿವಾದ ಹೇಳಿದರೂ ಸಹ ಅವರು ಕೇಳುವ ಸ್ಥಿತಿಯಲ್ಲಿರುವುದಿಲ್ಲ. ಏಕೆಂದರೆ ಅವರು ಕುಡಿದ ನಿಶೆಯಲ್ಲಿ ಬಂದಿರುತ್ತಾರೆ. ನಾವು ಹಣ ಕೊಡುತ್ತೇವೆ. ನೀವು ಸುಖ ಕೊಡಬೇಕು. ಬೇರೆ ಉಪದೇಶ ಮಾಡಬೇಡ ಎಂದು ಹೇಳುತ್ತಾರೆ ಎಂದು ವಕ್ತೃಗಳು ವಿವರಿಸಿದರು. ಈ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಹೊರರಾಜ್ಯದವರಾಗಿದ್ದಾರೆ. ಇದು ವಿದ್ಯಾರ್ಥಿಗಳ ನೈತಿಕ ಅದಃಪತನವನ್ನು ಸೂಚಿಸುತ್ತದೆ.

ಧಾರ್ಮಿಕ ಅಂಶಗಳು

ಹಿಂದೂ ಸಮಾಜದ ಹೃದಯ ಸತ್ಯಂ ಶಿವಂ ಸುಂದರಂ ಅಮೃತ ವಿದ್ಯೆಯನ್ನು ನೀಡುವ ಧರ್ಮ ಹೊಂದಿರುವಂಥದ್ದು, ಜಗದಗಲ, ಮುಗಿಲಗಲದ ನಿಮ್ಮಗಲದ ತತ್ವಸಿದ್ಧಾಂತಗಳನ್ನು, ಆಧ್ಯಾತ್ಮ ಅನುಭವದ ಗಂಗೆಯನ್ನು ಹರಿಸಿದ ಸಮಾಜದಲ್ಲಿ ಹಿಂದೂಳಿದ, ಕೆಳವರ್ಗದ ಮುಗ್ಧ ಸ್ತ್ರೀಯರಿಗೆ ದೇವರ ಹೆಸರಿನಲ್ಲಿ ದೇವದಾಸಿಯರನ್ನಾಗಿ, ರಾಜರ ಹೆಸರಿನಲ್ಲಿ ರಾಜದಾಸಿಯನ್ನಾಗಿ, ಸಾಹುಕಾರನ ಹೆಸರಿನಲ್ಲಿ ಪಾತ್ರದವರನ್ನಾಗಿ, ಯಲ್ಲಮ್ಮನ ಹೆಸರಿನಲ್ಲಿ ಜೋಗತಿಯರನ್ನಾಗಿ, ಗಂಡು ದೇವರ ಹೆಸರಿನಲ್ಲಿ ಬಸವಿಯನ್ನಾಗಿ ಮಾಡಿ ಕೆಳವರ್ಗದ ಹೆಣ್ಣುಗಳನ್ನು ಸರ್ವರ ಭೋಗದ ವಸ್ತುವನ್ನಾಗಿ ಮಾಡಲಾಗಿದೆ. ಒಂದು ಕಡೆಗೆ ಹೆಣ್ಣಿಗೆ ದೀರ್ಘ ಸುಮಂಗಲಿಭವಯರನ್ನಾಗಿ ಮಾಡಿದ್ದು, ಒಂದು ಕಡೆಗೆ ಹೆಣ್ಣಿಗೆ ದೇವರು ಮಾಡಿ ಪೂಜಿಸುವುದು ಇನ್ನೊಂದು ಕಡೆಗೆ ಅವಳ ದೇಹ ಮಾರಾಟಕ್ಕಿಟ್ಟಿರುವುದು ನಮ್ಮ ಸಾಮಾಜಿಕ ವ್ಯವಸ್ಥೆ ಎಂಥ ಕೆಳಮಟ್ಟದ್ದು, ಅಸಮಾನತೆಯಿಂದ ಕೂಡಿದೆ ಎಂದು ಗೊತ್ತಾಗುತ್ತದೆ.

ಈ ಸಮಾಜದಲ್ಲಿ ವೇಶ್ಯಾಪದ್ಧತಿಯು ಧಾರ್ಮಿಕಾಸಕ್ತಿಯ ಜೊತೆಗೆ ತಳಕು ಹಾಕಿಕೊಂಡಿರುವುದು ಈ ಸಮಸ್ಯೆಯನ್ನು ಮತ್ತಷ್ಟು ಜಟಿಲವಾಗಿದೆ. ದೇವರ ಹೆಸರಿನಲ್ಲಿ ತಾಳಿ ಕಟ್ಟಿಸಿಕೊಂಡು ಲೈಂಗಿಕ ವ್ಯಾಪಾರಕ್ಕಿಳಿಯುವ ಅವಿವಾಹಿತ ಹೆಣ್ಣುಮಕ್ಕಳು ಕರ್ನಾಟಕ ಹಲವಾರು ಜಿಲ್ಲೆಗಳಲ್ಲಿ ಕಂಡು ಬರುತ್ತಾರೆ. ಇವರು ಬಸಲು, ಜೋಗತಿ, ಮುರುಳ, ಲೇಸಿ ಹೆಸರುಗಳಿಂದ ಕರೆಸಿಕೊಳ್ಳುತ್ತಾರೆ. ಬೆಳಗಾವಿ ಜಿಲ್ಲೆಯ ಸವದತ್ತಿ ಯಲ್ಲಮ್ಮನ ಗುಲ್ಬರ್ಗಾ ಜಿಲ್ಲೆಯ ಶಹಾಪೂರ ತಾಲೂಕಿನ ಸಗರ ಯಲ್ಲಮ್ಮನ ಹಾಗೂ ಸಿಂಗನಹಳ್ಳಿ ಯಲ್ಲಮ್ಮನ ಸಂಪ್ರದಾಯದಲ್ಲಿ ಜೋಗತಿ ಎಂದು, ಮೈಲಾರನ ಸಂಪ್ರದಾಯದಲ್ಲಿ ಲೇಸಿಯೆಂದು, ಮಂಗ ಸೂಳಿ ಮಲ್ಲಯ್ಯನ ಸಂಪ್ರದಾಯದಲ್ಲಿ ಮರುಳೆ ಎಂದು ಕರೆಯುತ್ತಾರೆ. ದೇಶಿ ನೆಲೆಯ ದೇವರ ಸೂಳೆಗೆ ಸಮಾನಂತರವಾಗಿ ಪುರುಷರು ದೇವರ ಸೂಳೆಯನ್ನು ಹುಟ್ಟು ಹಾಕಿದರೆ, ಪುರೋಹಿತರು ಈ ದೇವಾಲಯ ಸೂಳೆಯರನ್ನು ಹುಟ್ಟು ಹಾಕಿದರು. ಧಾರ್ಮಿಕ ಆಚರಣೆಗಳಲ್ಲಿ ಬ್ರಾಹ್ಮಣರಿಗೆ, ಅತಿಥಿಗಳಿಗೆ, ಪುರೋಹಿತ ಮತ್ತು ಅಳಿಯಂದಿರಿಗೆ ಕಾಣಿಕೆಯಾಗಿ ಹೆಣ್ಣುಮಗಳನ್ನು ಕೊಡುತ್ತಿದ್ದುದು. ವೇದಕಾಲದ ಕಡೆಯಲ್ಲಿ ಹೆಣ್ಣುಮಗಳನ್ನು ಕೊಂಡುಕೊಂಡು ದೇವಾಲಯಗಳಿಗೆ ದತ್ತಿ ಕೊಡುವ ಮಹಾದಾನಿಗೆ ಸುಖ, ಸಮೃದ್ಧಿ, ಸಂಪತ್ತುಗಳು ದೊರೆಯುವುದಲ್ಲದೆ ಸ್ವರ್ಗದಲ್ಲಿ ಒಂದು ಸ್ಥಾನವನ್ನು ಕಾದರಿಸಲಾಗುವುದಂತೆ, ಸೂರ್ಯದೇವನಿಗೆ ವೇಶ್ಯೆಯರ ಸಮೂಹವನ್ನೇ ದಾನವಾಗಿ ಕೊಟ್ಟ ಒಬ್ಬ ಮಹಾದಾನಿಯು ಸತ್ತ ನಂತರ ಸೂರ್ಯನಿದ್ದ ಬಳಿಗೆ ಹೋದ ಸಂಗತಿಯನ್ನು

ನಾವು ಕಾಣುತ್ತೇವೆ. ಹೀಗೆ ಬಸವಿ, ಜೋಗತಿ ಹಾಗೂ ಸೂಳೆ ಸಂತಾನ ಮುಂತಾದ ಆಚರಣೆಗಳಿಂದ ವೇಶ್ಯಾ ಚಟುವಟಿಕೆಗಳಿಗೆ ಪೂರಕವಾದವು ಎಂದು ಹೇಳಬಹುದು.

ದೇವದಾಸಿ ಪದ್ಧತಿ

ದೇವದಾಸಿ ಪದ್ಧತಿ ಸೂಳೆಗಾರಿಕೆಗೆ ಅಥವಾ ವೇಶ್ಯಾವೃತ್ತಿಗೆ ಧರ್ಮದ ಮಾನ್ಯತೆಯನ್ನು ಹೊಂದಿಸಿರುವಂಥದ್ದು. ದೇವದಾಸಿ ಪದ್ಧತಿ ಸಂಪೂರ್ಣವಾಗಿ ದ್ರಾವಿಡ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿದ್ದು. ಮಾತೃಪೂಜೆ ಅಥವಾ ತಂತ್ರವಿದ್ಯೆ ಜನಪ್ರಿಯವಾಗಿ ದೇವದಾಸಿ ಪದ್ಧತಿ ಬೆಳೆದು ಬಂದಿರಬಹುದು. 'ದೇವದಾಸಿ' ಪದವು ಇತ್ತೀಚಿನ ಪದವಾಗಿದ್ದು ಇದು ಪಾತರದವರು, ಬಸವಿಯರು, ಸೂಳೆಯರು - ಹೀಗೆ ವಿಭಿನ್ನ ರೀತಿಯ ಲೈಂಗಿಕ ದಾಸಿಯರನ್ನು ಒಂದೇ ಎನ್ನುವ ಅರ್ಥದಲ್ಲಿ 'ದೇವದಾಸಿ' ಪದ ಚಲಾವಣೆಗೊಳ್ಳುತ್ತಿದೆ. ಈ ಪದ್ಧತಿಗೆ ಒಂದು ದೊಡ್ಡ ಪರಂಪರೆಯೇ ಇದೆ. ವೈದಿಕರ ಹಳೆಯ ಧರ್ಮಶಾಸ್ತ್ರಗಳು ಮಾತ್ರವಲ್ಲದೆ, ಸಾಹಿತ್ಯ-ಸಂಗೀತ, ನೃತ್ಯ-ಊಳಿಗಮಾನ್ಯ ವ್ಯವಸ್ಥೆ ಮತ್ತು ಪುರೋಹಿತಶಾಹಿ ಶಕ್ತಿಗಳೇ ಮುಂತಾದುವೆಲ್ಲ ಸೇರಿ ದೇವದಾಸಿ ಪದ್ಧತಿಯ ಹೆಸರಿನಲ್ಲಿ ಕೆಳಜಾತಿಗಳ ಹೆಣ್ಣುಗಳನ್ನು ಲೈಂಗಿಕ ಶೋಷಣೆಗೆ ಒಳಪಡಿಸುತ್ತಾ ಬಂದಿದ್ದಾರೆ. ದೇವದಾಸಿಯರು ಯಲ್ಲಮ್ಮನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಾಳೆ. ಆದಿಶಕ್ತಿಯ ಸ್ವರೂಪವಾದ ಯಲ್ಲಮ್ಮನ ದೇವಾಲಯಗಳು ಉತ್ತರ ಕರ್ನಾಟಕದ್ಯಾಂತ ಹಾಗೂ ಮಹಾರಾಷ್ಟ್ರದ ಸೆರಗಿನಲ್ಲಿದ್ದ ಪ್ರದೇಶಗಳಲ್ಲಿ ತಲೆಯೆತ್ತಿದ್ದವು. ಸವದತ್ತಿಯಲ್ಲಿರುವ ಯಲ್ಲಮ್ಮನ ದೇವಾಲಯವು ಹಲವು ಶಕ್ತಿ ಸ್ಥಾನಗಳಲ್ಲಿ ಒಂದಾಗಿದೆ. ಅದೇ ರೀತಿಯಾಗಿ ಕೊಕಟೂರ ಯಲ್ಲಮ್ಮ, ನೀರಮಾನ್ವಿ ಯಲ್ಲಮ್ಮ, ಹುಲಿಗೆಮ್ಮ, ದುರಿಗೆಮ್ಮ, ದ್ಯಾವಮ್ಮ, ಮರೆಯಮ್ಮ, ಗಾಳೆಮ್ಮ, ಚಂದ್ರಗುತ್ತಿ ಗುತ್ತೇವ್ವ, ಗುಲ್ಬರ್ಗಾ ಜಿಲ್ಲೆಯ ಶಹಾಪೂರ ತಾಲೂಕಿನ ಸಗರ ಯಲ್ಲಮ್ಮ, ಸಿಂಗನಹಳ್ಳಿ ಯಲ್ಲಮ್ಮ, ಮುಂತಾದ ಶಕ್ತಿ ದೇವತೆಗಳಿಗೆ ಬಸವಿ, ಜೋಗತಿ ಮತ್ತು ಜೋಗಪ್ಪಗಳನ್ನು ಈ ಭಾಗಗಳಲ್ಲಿ ಸಮರ್ಪಿಸುವ ಪದ್ಧತಿಯಿದೆ. ಈಗಲೂ ಈ ಎಲ್ಲಾ ಯಲ್ಲಮ್ಮ ದೇವತೆಯ ಜಾತ್ರೆಗಳಲ್ಲಿ ಬಸವಿ, ಜೋಗತಿ ಮತ್ತು ಜೋಪ್ಪನವರು ಕಾಣುತ್ತಾರೆ. ಇದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಜನರಲ್ಲಿ ಹೆಚ್ಚು ಆಚರಣೆಯಲ್ಲಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ೩,೦೦೦ಕ್ಕೂ ಹೆಚ್ಚು ದೇವದಾಸಿಯರು ಇದ್ದರು ಎಂದು ೧೯೯೫ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಮೀಕ್ಷೆ ತಿಳಿಸಿದೆ. ಬೆಳಗಾವಿ ೩,೬೦೦, ಬಾಗಲಕೋಟೆ ೪,೦೦೦, ರಾಯಚೂರು ೨,೫೦೦, ಕೊಪ್ಪಳ ೩,೦೦೦, ಧಾರವಾಡ, ಗದಗ ೨,೦೦೦, ಬಳ್ಳಾರಿ ೩,೦೦೦ ದೇವದಾಸಿಯರಿದ್ದಾರೆ. ಈ ದೇವತೆಗಳ ದೇವಾಲಯಗಳು, ದೇವದಾಸಿಯರು

ಹೆಚ್ಚಾದಂತೆ ಧರ್ಮ ಹಾಗೂ ವೇಶ್ಯಾವೃತ್ತಿಯ ಮಧ್ಯೆ ಸಂಪರ್ಕ ಬೆಳೆದು ದೇವದಾಸಿಯರು ಗಣನೀಯ ಸಂಖ್ಯೆಯಲ್ಲಿ ದೇವಾಲಯವನ್ನು ಆಕ್ರಮಿಸಿಕೊಂಡರು. ದೇವಾಲಯದಲ್ಲಿ ಪ್ರಚಲಿತವಾಗಿದ್ದ ಪದ್ಧತಿಯನ್ವಯ ಯಲ್ಲಮ್ಮ ದೇವಾಲಯಗಳು ದೇವದಾಸಿಯರನ್ನು ಪೂರ್ಣ ಪ್ರಮಾಣದ ಸಂಖ್ಯೆಯಲ್ಲಿ ಹೊಂದಿದ್ದವು. ಅನೇಕ ಯುವತಿಯರ ಬಾಲಕಿಯರನ್ನು ಹಲವಾರು ಕಾರಣಗಳಿಗಾಗಿ ಯಲ್ಲಮ್ಮನಿಗಾಗಿ ಮೀಸಲಿಟ್ಟರು. ತಾಂತ್ರಿಕರು ಅನುಸರಿಸಿದ ಪಂಚತಂತ್ರ ಪೂಜಾ ಪದ್ಧತಿಯಲ್ಲಿ ಲೈಂಗಿಕ ಸಂಪರ್ಕ ಹೊಂದುವುದು. ಪೂಜಾವಿಧಿಯ ಒಂದು ಭಾಗವಾಗಿ ಪರಿಣಮಿಸಿದ್ದರಿಂದ ಶಕ್ತಿ ಪೂಜೆಯ ಕೇಂದ್ರಗಳಲ್ಲಿ ದೇವ-ದಾಸಿಯರ ಸಂಖ್ಯೆ ದ್ವಿಗುಣಗೊಂಡಿತು. ಬ್ರಿಟಿಷರ ಆಳ್ವಿಕೆಯಲ್ಲಿ ದೇವದಾಸಿ ಪದ್ಧಥಿ ಹೆಚ್ಚು ಬೆಂಬಲ ಪಡೆಯಿತು. ಈ ಪದ್ಧತಿ ಗ್ರಾಮಗಳಿಂದ ನಗರಕ್ಕೆ ವಲಸೆ ಹೋಗಿ ಬ್ರಿಟಿಷರ ಮಿಲಿಟರಿ ಸಿಬ್ಬಂದಿಗಳ ಕಾಮ ಪೂರೈಕೆಯ ವ್ಯವಸ್ಥೆಯಾಯಿತು. ಅವರು ವಾಸಿಸುತ್ತಿದ್ದ ಕಂಟೋನ್‌ಮೆಂಟ್‌ಗಳ ಜೊತೆಯಲ್ಲಿಯೇ ವೇಶ್ಯೆಯರ ಕಾಲೋನಿಗಳನ್ನು ನಿರ್ಮಿಸಿಕೊಂಡರು. ಪುನಾ ಹಾಗೂ ಬೆಳಗಾಂ ಕಂಟೋನ್‌ಮೆಂಟ್‌ಗಳಲ್ಲಿ ಈ ತರಹದ ಕಾಲೋನಿಗಳು ನಿರ್ಮಾಣವಾಗಿ ದೇವದಾಸಿಯರು ನಗರದ ವೇಶ್ಯ ಅಥವಾ ಲೈಂಗಿಕ ಕಾರ್ಯಕರ್ತೆಯರಾದರು.

ಮಹಾರಾಷ್ಟ್ರದ ಕಾಮಾಟಿಪೂರು ಎಂಬ ಕೆಂಪು ದ್ವೀಪದಲ್ಲಿ ಉತ್ತರ ಕರ್ನಾಟಕದಿಂದ ಬಂದ ಎಷ್ಟೋ ದೇವದಾಸಿಯರು ಬದುಕುವ ಮಾರ್ಗವನ್ನು ವೇಶ್ಯಾವೃತ್ತಿ ಆಯ್ಕೆ ಮಾಡಿಕೊಂಡು ಅದರಲ್ಲಿ ಯಶಸ್ವಿಯಾಗಿ ಕಂಡುಕೊಂಡು ಲಕ್ಷಾಂತರ ರೂಪಾಯಿ ಸಂಪಾದಿಸುವ ಹೆಣ್ಣುಗಳನ್ನು ತರಕಾರಿಗಳಂತೆ ಖರೀದಿಸುವ ಘರವಾಲಿಗಳಾಗಿರುವುದು ಕಂಡುಬರುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿ ನಡೆಸಿದ ಸಮೀಕ್ಷೆಯೊಂದರಲ್ಲಿ ೩೪೦೮ ಜನ ದೇವದಾಸಿಯರಲ್ಲಿ ೨೧೧೮ ದೇವದೇಸಿಯರು ಒಬ್ಬ ವ್ಯಕ್ತಿಯ ಜತೆ ಸಂಬಂಧ ಹೊಂದಿದ್ದರೆ ೧೫೦ ಜನ ಇಬ್ಬರು ಗಂಡಸರ ಜತೆ ಸಂಬಂಧ ಹೊಂದಿದ್ದಾರೆ. ಇನ್ನೂ ಕೆಲವರು ೩-೪ ಜನರೊಂದಿಗೆ ಸಂಬಂಧ ಹೊಂದಿದ್ದಾರೆ. ಸುಮಾರು ೧,೦೦೦ಕ್ಕೂ ಹೆಚ್ಚು ದೇವದಾಸಿಯರು ವೇಶ್ಯಾವೃತ್ತಿಯಲ್ಲಿ ನಿರತರಾಗಿದ್ದಾರೆ. ಅಷ್ಟೇ ಅಲ್ಲದೇ ದೇವದಾಸಿಯರ ಮಕ್ಕಳನ್ನು ವೇಶ್ಯಾವೃತ್ತಿಗೆ ಆಕರ್ಷಿಸುವ ಒಂದು ಬೃಹತ್ ಜಾಲವೇ ಕೆಲಸ ಮಾಡುತ್ತದೆ. ಕೊಲ್ಲಾಪುರ, ಗೋವಾ, ಮೀರಜ್, ಮುಂಬೈ, ಆಂಧ್ರಪ್ರದೇಶ ಹಲವು ಕಡೆಗಳಲ್ಲಿರುವ 'ಕೆಂಪು ದೀಪ'ದ ಬಡಾವಣೆಗಳಲ್ಲಿ ವಾಸಿಸುತ್ತಿರುವ ಬಹುತೇಕರು ದೇವದಾಸಿಯರು ಎಂಬುದು ಅಧ್ಯಯನವೊಂದರಿಂದ ದೃಢಪಟ್ಟಿದೆ.

ಲೈಂಗಿಕ ವೃತ್ತಿನಿರತರ ಮೇಲೆ ನಡೆಸಿದ ಕೆಲವು ಪೋಲಿಸರ ದಾಳಿಗಳಲ್ಲಿ ದೇವದಾಸಿಯರೇ ಗಣನೀಯ ಪ್ರಮಾಣದಲ್ಲಿದ್ದುದು ಕಂಡುಬಂದಿದೆ. ಸವದತ್ತಿ ಯಲ್ಲಮ್ಮನ ಮಹಾಭಕ್ತೆಯಾಗಿ ಕಡೆಗೆ ಕಾಮಾಟಿಪುರ ಸೇರಿ ಮೈ ಮಾರಿಕೊಂಡ ಹೆಣ್ಣೊಬ್ಬಳು ತನ್ನೂರಿಗೆ ಹೋಗಿ, ಊರೊಳಗೆ ಮರಳಿ ಬಂದುದನ್ನು ದಾರುಣವಾಗಿ ವಿವರಿಸುತ್ತಾಳೆ. ಊರಿನ ಒಳಪ್ರವೇಶ ಮಾಡುತ್ತಿದ್ದಂತೆ ಹಳ್ಳಿಗರು ಆಕೆಯನ್ನು ತಡೆಹಿಡಿದರಲ್ಲದೆ, ಮೈಮೇಲೆ ಸೀಮೆ ಎಣ್ಣೆ ಸುರಿದು ಬೆಂಕಿ ಇಟ್ಟು ಸುಡಲು ಯತ್ನಿಸಿದ ಘಟನೆಯೂ ನಡೆಯಿತು. ಈ ಅನಾಹುತದಿಂದ ದೂರಾಗಿ ಬಂದ ಈ ಹೆಣ್ಣು ಇನ್ನು ಮುಂದೆ ಊರಿನತ್ತ ತಲೆ ಹಾಕುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದಾಳೆ.

ಗುಲ್ಬರ್ಗಾ ಜಿಲ್ಲೆಯ ನಗರ ಪ್ರದೇಶದಲ್ಲಿ ಸುಮಾರು ೮೫೦ಕ್ಕೂ ಹೆಚ್ಚು ದೇವದಾಸಿಯರು ವೇಶ್ಯಾವೃತ್ತಿಯಲ್ಲಿ ನಿರತರಾಗಿದ್ದಾರೆ.

ಮುಗ್ಧತೆ

ಮುಗ್ಧತೆ ಇಲ್ಲವೇ ಅನಕ್ಷರಸ್ಥ. ಸ್ತ್ರೀಯರೂ ಸಹ ವೇಶ್ಯಾವೃತ್ತಿಗೆ ತೊಡಗಿಸಿಕೊಳ್ಳಲು ಕಾರಣವಾಗುತ್ತದೆ. ನಗರ ಸಮುದಾಯಗಳಲ್ಲಿನ ವಿಷ ವರ್ತುಲಗಳೋಪಾದಿಯ ಕೆಲವು ಸಮೂಹಗಳು ಸುತ್ತಮುತ್ತಲಿನ ಗ್ರಾಮೀಣ ಸಮುದಾಯಗಳಲ್ಲಿನ ಹುಡುಗಿಯರಿಗೆ ಉದ್ಯೋಗ ಕೊಡಿಸುವ ಆಸೆ ಹುಟ್ಟಿಸಿ ಕರೆದುಕೊಂಡು ಹೋಗಿ ಕೆಲವು ಸಣ್ಣಪುಟ್ಟ ಕೆಲಸ ಕೊಡಿಸಿ ಕಾಲಕ್ರಮೇಣ ವೇಶ್ಯೆಯರಾಗಿ ವ್ಯವಹರಿಸುವಂತೆ ಮಾಡಬಹುದಾದ ಸಾಧ್ಯತೆಗಳು ಹೆಚ್ಚು ತಮ್ಮ ಮುಗ್ಧತೆ ಇಲ್ಲವೇ ಅಜ್ಞಾನದಿಂದಾಗಿ ಮೋಸ ಹೋದ ಹುಡುಗಿಯರು, ಸ್ತ್ರೀಯರು ಮಮ್ಮಲ ಮರಗುತ್ತಾ ಇನ್ನೂ ಮೇಲೆ ಸಮಾಜದಲ್ಲಿ ನಮಗೆ ಯಾವುದೇ ರೀತಿಯ ಬೆಲೆಯಿಲ್ಲ ಎಂದು ಭಾವಿಸಿ ವೇಶ್ಯಾವೃತ್ತಿಯಲ್ಲಿಯೇ ತೊಡಗಿಸಿಕೊಂಡ ಉದಾಹರಣೆಗಳು ಬಹಳಷ್ಟು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಮುಗ್ಧ ಹುಡುಗಿ ಗುಲ್ಬರ್ಗಾದಲ್ಲಿ ವೇಶ್ಯಾವಾಟಿಕೆ ರೂಪಕ್ಕೆ ಬೀಳುತ್ತಿದ್ದ ಯುವತಿಯನ್ನು ರಕ್ಷಿಸಿ, ಮದುವೆಯಾದ ಆದರ್ಶ ಮೆರೆದ ಪ್ರಸಂಗ ನಡೆದಿದೆ. ನಾನು ಮುಗ್ಧೆ ಅದನ್ನು ದುರುಪಯೋಗ ಮಾಡಿಕೊಂಡರು. ಆದರೆ ನನ್ನನ್ನು ಮಾನವೀಯತೆಯಿಂದ ನೋಡುವವರು ಯಾರು ಇರಲಿಲ್ಲ. ಆದ್ದರಿಂದ ನಾನು ಈ ವೇಶ್ಯಾವೃತ್ತಿ ಬರಬೇಕಾಯಿತು ಎಂದು ವಕ್ತಾರರೊಬ್ಬರು ಹೇಳುತ್ತಾರೆ.

ಅಸಂತೋಷ ವೈವಾಹಿಕ ಸಂಬಂಧಗಳು

ವಿವಾಹವೆಂಬುದು ಎಲ್ಲರ ಬದುಕಿನಲ್ಲಿ ಒಂದು ಮಹತ್ತರ ಘಟ್ಟ, ಅದೂ ಹೆಣ್ಣಿನ

'ವ್ಯಕ್ತಿಸೂಳೆ (ಉಪಪತ್ನಿ) ಪ್ರತಿಷ್ಠಿತ ಪುರುಷರು ರೂಪಿಸಿದ ವ್ಯವಸ್ಥೆಯಾಗಿ ಸಾಮಾನ್ಯವಾಗಿ ಇವಳು ಅವಿವಾಹಿತೆ, ಪತಿತ್ಯಕ್ತೆ ಇಲ್ಲವೆ ವಿಧವೆಯಾಗಿರಬಹುದು. ಈ ಕೆಲವು ಸಮಾಜಗಳಲ್ಲಿ ತವರು ಮನೆಯವರು ತಮ್ಮೊಂದಿಗೆ ವಾಸಿಸಲು ಅವಕಾಶ ಮಾಡಿಕೊಡುವ ಮೂಲಕ ಅವಿವಾಹಿತೆಯಾದ ವ್ಯಕ್ತಿ ಸೂಳೆಯನ್ನು ಆದಾಯದ ಮಾಧ್ಯಮವಾದ ಮಾಡಿಕೊಂಡಿರುತ್ತಿದ್ದರು. ಇಂದು ಈ ಪದ್ಧತಿ ಒಂದಿಲ್ಲ ಒಂದು ರೀತಿಯಲ್ಲಿ ಅಸ್ತಿತ್ವದಲ್ಲಿದೆ. ಇದು ಶೋಷಿತೆ-ಶೋಷಕ ಸ್ತರದಿಂದ ಪ್ರಿಯತಮೆ ಪ್ರಿಯತಮರೆಂಬ ಆರೋಗ್ಯಕರವೆನ್ನಬಹುದಾದ ಸ್ತರದಲ್ಲಿ ಮುಂದುವರಿಯುತ್ತಲೇ ಇದೆ. ಪಸ್ತುತವಾಗಿ ಹಳ್ಳಿಗಳಲ್ಲಿ ಇಂತಹ ವೇಶ್ಯೆಯರನ್ನು ಕಾಣಬಹುದಾಗಿದೆ.

ಧಾರ್ಮಿಕ ಅಥವಾ ದೇವರ ವೇಶ್ಯೆಯರು ಅಲ್ಲಲ್ಲಿಯ ದೇವರ ಹೆಸರಿನಲ್ಲಿ ತಾಳಿ ಕಟ್ಟಿಸಿಕೊಂಡು ಲೈಂಗಿಕ ವ್ಯಾಪಾರಕ್ಕಿಳಿಯುವ ಅವಿವಾಹಿತ ಹೆಣ್ಣುಗಳಾಗಿದ್ದಾರೆ. ಇವರನ್ನು ದೇವದಾಸಿಯರು, ಮಂಗಳಮುಖಿಯರು ಇಲ್ಲವೇ ಜೋಗತಿಯರೆಂದು ಕರೆಯುತ್ತಾರೆ. ಹಿಂದೂಳಿದವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಈ ಪದ್ಧತಿ ಹೆಚ್ಚು ಆಚರಣೆಯಲ್ಲಿರುವುದು ಕಂಡುಬರುತ್ತದೆ.

ಸಾಂಪ್ರದಾಯಿಕ ವೇಶ್ಯೆಯರು ಅಥವಾ ರಾಜಾಲಯ ಸೂಳೆಯರು ರಾಜರು, ಜಹಗೀರದಾರರು, ಜಮೀನ್ದಾರರು ಹಾಗೂ ಶ್ರೀಮಂತರಿಗೆ ವಿಶೇಷ ಸೇವೆ ಸಲ್ಲಿಸುತ್ತಿದ್ದ ಹೆಣ್ಣುಗಳೇ ಸಾಂಪ್ರದಾಯಿಕ ವೇಶ್ಯೆಯರಾಗಿದ್ದಾರೆ. ರಾಜನ ಅರಮನೆಯಲ್ಲಿ ದಾಸಿಯರಾಗಿ ಅಂಗಭೋಗದವರಂತೆ, ಆಸ್ಥಾನದಲ್ಲಿ ಕಲಾವಿದೆಯಾಗಿ ರಂಗಭೋಗದವರಂತೆ ಕಾರ್ಯ ನಿರ್ವಹಿಸುತ್ತಿದ್ದರು.

ಹಬ್ಬ ಹರಿದಿನ ಮತ್ತು ವಿಶೇಷ ಸಮಾರಂಭಗಳಲ್ಲಿ ಅತಿಥಿಗಳಿಗೆ ಮನರಂಜನೆ ನೀಡುತ್ತಿದ್ದರು. ಹಲವು ಕಾರಣಗಳಿಂದ ಅರಮನೆ ಆಸ್ಥಾನಗಳು ನಾಶವಾಗುತ್ತಲೇ ಅವಿವಾಹಿತೆಯರಾದ ಇವರು ಸಮಾಜದ ಪಾಲಾದರು. ವಿಜಯನಗರ, ಕೆಳದಿ, ಮೈಸೂರು, ಸುರಪೂರದ ರಾಜಾವೆಂಕಟಪ್ಪ ನಾಯಕನ ಆಸ್ಥಾನದ ಪರಿಸರದಲ್ಲಿ ಈ ವರ್ಗದವರು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತಿದ್ದರು ಎಂದು ಹೇಳಬಹುದು.

ಸಮಾಜ ಸೂಳೆ ಅಥವಾ ವೇಶ್ಯೆ ಅಥವಾ ಲೈಂಗಿಕ ಕಾರ್ಯಕರ್ತೆ ಇವಳೂ ಲೈಂಗಿಕತೆಯನ್ನು ನೇರವಾಗಿ ಮುಕ್ತ ವ್ಯಾಪಾರ ಸ್ಥಿತಿಗೆ ಇಳಿಸಿಕೊಂಡವಳಾಗಿದ್ದು, ಪ್ರಾಚೀನ ಕಾಲದಲ್ಲಿ ಇವರಲ್ಲಿ ಪ್ರತಿಷ್ಠಿತರಾದವರು ನಗರಗಳಲ್ಲಿ ಶಾಶ್ವತ ವಾಸಿಸುತ್ತಿದ್ದರೆ, ಅಪ್ರತಿಷ್ಠಿತರಾದವರು

ಹೊರಸು, ಹಾಸಿಗೆ ಹೊತ್ತುಕೊಂಡು ಸಂತೆಯಿಂದ ಸಂತೆಗೆ, ಜಾತ್ರೆಯಿಂದ ಜಾತ್ರೆಗೆ ಸಂಚರಿಸುತ್ತಿದ್ದರು. ಈಗ ದೊಡ್ಡ ದೊಡ್ಡ ನಗರಗಳಲ್ಲಿ ಈ ವೃತ್ತಿ ನಡೆಯುತ್ತಿದೆ. ಈಗ ದೊಡ್ಡ ದೊಡ್ಡ ನಗರಗಳಲ್ಲಿ ಈ ವೃತ್ತಿ ನಡೆಯುತ್ತಿದೆ. ಇಂದು ದೇವಾಲಯ ಸೂಳೆ, ರಾಜಾಲಯ ಸೂಳೆ ಅಥವಾ ವೇಶ್ಯೆ ಪದ್ಧತಿ ಅವನತಿ ಹೊಂದಿರುವುದರಿಂದ ಅವರು ಸಮಾಜ ಸೂಳೆ ಅಥವಾ ಲೈಂಗಿಕ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಂದು ಲೈಂಗಿಕ ಕಾರ್ಯಕರ್ತೆಯರು ಸಮಾಜದ ಸ್ವಾಸ್ಥ್ಯಕ್ಕೆ ಅನಿವಾರ್ಯವಾಗಿ ಕಂಡುಬರುತ್ತಿದ್ದಾರೆ.

ಪ್ರಸ್ತುತ ಆಧುನಿಕ ಸಾಮಾಜಿಕ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಲೈಂಗಿಕ ವೃತ್ತಿಯಲ್ಲಿ ಹಲವಾರು ವಿಧಗಳನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಸ್ಥೂಲವಾಗಿ ಕೆಲವು ಪ್ರಮುಖವಾದವುಗಳನ್ನು ಇಲ್ಲಿ ವಿವರಿಸಲಾಗಿದೆ.

ಮನೆಯಲ್ಲಿಯೇ ಲೈಂಗಿಕ ವೃತ್ತಿಪರರು

ಪಟ್ಟಣಗಳಲ್ಲಿ ಹಾದಿ ಬೀದಿಯಲ್ಲಿ ತಮ್ಮ ಮನೆಯಲ್ಲಿಯೇ ನಡೆಸುವ ಲೈಂಗಿಕ ಕಾರ್ಯಕರ್ತೆಯರು ಗುಲ್ಬರ್ಗಾ ನಗರದ ಹಲವು ಸ್ಥಳಗಳಲ್ಲಿ ಕಾಣಬಹುದಾಗಿದೆ. ಇವರು ಗಿರಾಕಿಗಳನ್ನು ಹುಡುಕಲು ಹೊರಗಡೆ ಹೋಗದೆ ಸಾಧರವಾಗಿ ಅವರು ವಾಸಿಸುವ ಮನೆಯಲ್ಲಿಯೋ ಗಿರಾಕಿಗಳು ಬರುತ್ತಾರೆ. ಗಿರಾಕಿಗಳನ್ನು ಪಡೆದುಕೊಳ್ಳಬೇಕಾದ ಕಷ್ಟ ಅವರದೇಯಾಗಿರುತ್ತದೆ ಹಾಗೂ ಅವರ ಸಂಪಾದನೆಯ ಮೇಲೆ ಪೂರ್ಣ ಹಿಡಿತವಿರುತ್ತದೆ ಮತ್ತು ಪೊಲೀಸರಿಂದ ಬಂದ ಸಮಸ್ಯೆಗಳು ಲೈಂಗಿಕ ಕಾರ್ಯಕರ್ತೆಯರೇ ಎದುರಿಸುತ್ತಾರೆ. ೭೫%ರಷ್ಟು ಮನೆಯಲ್ಲಿ ಲೈಂಗಿಕ ವೃತ್ತಿಯನ್ನು ನಡೆಸುತ್ತಾರೆ. ಇಂತಹವರಿಗೆ ಗಿರಾಕಿಗಳು ನಡೆಸುವ ದೌರ್ಜನ್ಯದಿಂದ ರಕ್ಷಣೆ ಇರುವುದಿಲ್ಲ. ಬ್ರೋಕರ್‌ಗಳ ನೆರವಿನಿಂದ ಮೈ ಮಾರಿಕೊಳ್ಳುವ ವೇಶೆಯರಿಗೆ ಗಿರಾಕಿಗಳ ದೌರ್ಜನ್ಯದಿಂದ ರಕ್ಷಣೆ ಇದ್ದರೂ ಅವರು ಗಳಿಸುವ ಬಹುಪಾಲು ಹಣವನ್ನು ತಲೆಹಿಡುಕರಿಗೆ ಅಥವಾ ಬ್ರೋಕರಿಗಳಿಗೆ ಒಪ್ಪಿಸಬೇಕಾಗುತ್ತದೆ.

ಬ್ರಾಥೆಲ್‌ಗಳಲ್ಲಿ ಲೈಂಗಿಕ ಕಾರ್ಯಕರ್ತೆಯರು

ಈ ಲೈಂಗಿಕ ಕಾರ್ಯಕರ್ತೆಯರು ನಡೆಸುವ ಸುವ್ಯವಸ್ಥಿತವಾದ ವೇಶ್ಯಾವಾಟಿಕೆ ಅಥವಾ ಲೈಂಗಿಕ ಚಟುವಟಿಕೆಯಾಗಿದೆ. ಬ್ರಾಥೆಲ್ ಲೈಂಗಿಕ ಕಾರ್ಯಕರ್ತೆಯರೆಂದರೆ ತಮ್ಮ ಮನೆಗೆ ಹೊರಗೆ ಘರವಾಲಿ ಅಥವಾ ದಲ್ಲಾಲಿಗಳ ನೆರವಿನಂದ ಅವರ ಮುಖಾಂತರ ಗಿರಾಕಿಗಳನ್ನು ಪಡೆದುಕೊಂಡು ನಡೆಸುವ ಲೈಂಗಿಕ ವೃತ್ತಿಯಾಗಿದೆ. ಈ ವೇಶ್ಯಾವಾಟಿಕೆಯ ಭದ್ರ ಕೋಟೆಗಳಿಂದ

ಯಾರೂ ತಪ್ಪಿಸಿಕೊಂಡು ಹೋಗದಂತೆ ವ್ಯವಸ್ಥೆ ಮಾಡಿರುತ್ತಾರೆ. ಗುಲ್ಬರ್ಗಾ ನಗರದಲ್ಲಿ ಇಂತಹ ಬ್ರಾಥೆಲ್‌ಗಳನ್ನು ಕಾಣಬಹುದಾಗಿದೆ. ತಮ್ಮ ಲೈಂಗಿಕ ವೃತ್ತಿಯಿಂದ ಬಂದ ಆದಾಯದ ಒಂದು ಭಾಗವನ್ನು ಘರವಾಲಿ ಅಥವಾ ದಲ್ಲಾಳಿಗೆ ಕೊಡುತ್ತಾರೆ. ಇಂತಹ ಬ್ರಾಥೆಲ್‌ಗಳಲ್ಲಿ ಹಲವಾರು ಜನ ಅಂದರೆ ೪% ರಷ್ಟು ಲೈಂಗಿಕ ಕಾರ್ಯಕರ್ತೆಯರು ತಮ್ಮ ವೃತ್ತಿಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಇಲ್ಲಿ ಕೂಡ ಗಿರಾಕಿಗಳು ತಾವೇ ಬ್ರಾಥೆಲ್‌ಗಳಿಗೆ ಬರುತ್ತಾರೆ ಅಥವಾ ದಲ್ಲಾಳಿಗಳು ಗಿರಾಕಿಗಳನ್ನು ಕರೆದುಕೊಂಡು ಬರುತ್ತಾರೆ. ಬ್ರಾಥೆಲ್‌ನಲ್ಲಿ ಘರವಾಲಿಗಳ ಅಪ್ಪಣೆ ಇಲ್ಲದೆ ನೇರವಾಗಿ ಯಾವ ಗಿರಾಕಿಯೂ ಲೈಂಗಿಕ ಕಾರ್ಯಕರ್ತೆಯಲ್ಲಿ ಹೋಗುವಂತಿಲ್ಲ. ಸಾರ್ವಜನಿಕ ಪ್ರದೇಶಗಳಿಂದ ಗಿರಾಕಿಗಳನ್ನು ಬ್ರಾಥೆಲ್‌ಗೆ ಕರೆತರುವ ದಲ್ಲಾಳಿಗೂ ಲೈಂಗಿಕ ಕಾರ್ಯಕರ್ತೆಯರ ಗುಂಪಿಗೆ ಸೇರುವುದಿಲ್ಲ.

ಹೊಟೇಲ್/ಬಾರ್/ಲಾಡ್ಜ್‌ಗಳಲ್ಲಿ ಲೈಂಗಿಕ ವೃತ್ತಿಪರರು

ಹಲವಾರು ಜನ ಲೈಂಗಿಕ ಕಾರ್ಯಕರ್ತೆಯರು ಹೊಟೇಲ್, ಬಾರ್, ಲಾಡ್ಜ್‌ಗಳ ಮಾಲೀಕನಿಂದ ನೇಮಕಗೊಂಡು ಕಾರ್ಯನಿರ್ವಹಿಸುತ್ತಾರೆ. ದಲ್ಲಾಳಿ ಅಥವಾ ಬ್ರೋಕರ್ ಮತ್ತು ಆಟೋ ಚಾಲಕರ ಮೂಲಕ ಗಿರಾಕಿಗಳು ಈ ಲೈಂಗಿಕ ವೃತ್ತಿಪರರಲ್ಲಿ ಬರುತ್ತಾರೆ. ಹಲವಾರು ಬಾರಿ ಗುಲ್ಬರ್ಗಾ ನಗರದ ಲಾಡ್ಜ್‌ಗಳಲ್ಲಿ ಲೈಂಗಿಕ ವೃತ್ತಿಯಲ್ಲಿ ತೊಡಗಿರುವ ಕಾರ್ಯಕರ್ತೆಯರನ್ನು ಪೊಲೀಸರು ಬಂಧಿಸಿದ್ದಾರೆ. ಆದರೂ ತೆರೆಮರೆಯಲ್ಲಿ ಈ ಕಾರ್ಯ ನಡೆಯುತ್ತಲೇ ಇರುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ೨೪% ಲಾಡ್ಜ್‌ಗಳಲ್ಲಿ ಲೈಂಗಿಕ ಕಾರ್ಯಕರ್ತೆಯರು ಕಂಡು ಬರುತ್ತಾರೆ. ಅಲ್ಲದೆ ನಗರದ ಹಲವು ಜನ ಬೀಡ ಪ್ರದೇಶ ಹೊಂದಿರುವ ರಸ್ತೆ ಬೀದಿಗಳಲ್ಲಿ, ಪಾರ್ಕ್‌ಗಳಲ್ಲಿ, ರೈಲ್ವೆ ಸ್ಟೇಷನ್‌ಗಳಲ್ಲಿ, ಬಸ್‌ನಿಲ್ದಾಣಗಳಲ್ಲಿ ಸಿನಿಮಾ ಕೇಂದ್ರದ ಸುತ್ತಮುತ್ತಲಿನಲ್ಲಿ ಮುಂತಾದವು ಕಡೆ ಲೈಂಗಿಕ ಕಾರ್ಯಕರ್ತೆಯರು ತಮ್ಮ ವೃತ್ತಿಯಲ್ಲಿ ತೊಡಗಿಸಿಕೊಂಡಿರುವುದು ಕಾಣಬಹುದಾಗಿದೆ. ೪% ರಷ್ಟು ಸಾರ್ವಜನಿಕ ಸ್ಥಳಗಳಲ್ಲಿ ಲೈಂಗಿಕ ವೃತ್ತಿ ನಡೆಸುತ್ತಾರೆಂದು ತಿಳಿದುಬಂದಿದೆ.

ಕಾಲ್‌ಗರ್ಲ್ ಅಥವಾ ಕರೆ ಹುಡುಗಿಯರು

ಮಧ್ಯಮ ವರ್ಗದ ಹುಡುಗಿಯರು ಅಲ್ಲದೆ ಮದುವೆಯಾದ ಸ್ತ್ರೀಯರು ಸಹ ಕಾಲ್‌ಗರ್ಲ್‌ಗಳಾಗಿ ದೇಹ ಮಾರಾಟ ಮಾಡಿಕೊಳ್ಳುವ ಇನ್ನೊಂದು ಬಗೆಯನ್ನು ನೋಡಬಹುದಾಗಿದೆ. ಪೋಷಕರ ಸಾವಿನಿಂದ ಅನಾಥರಾದವರು, ಒಡಹುಟ್ಟಿದವರಿಂದ

ತಿರಸ್ಕರಿಸಲ್ಪಟ್ಟವರು. ಪ್ರೀತಿ ಪ್ರೇಮದ ಸುಳಿಯಲ್ಲಿ ಸಿಕ್ಕಿ ಮೋಸ ಹೋದ ಯುವತಿಯರು, ಮುಂತಾದವರು ಸುಲಭವಾಗಿ ಹಣ ಸಂಪಾದಿಸುವ ಮಾರ್ಗವೆಂದು ತಿಳಿದವರು. ಕಾಲ್‌ಗರ್ಲ್‌ಗಳಾಗಿ ವೇಶ್ಯಾವೃತ್ತಿಗೆ ಇಳಿಯುತ್ತಾರೆ. ದೂರವಾಣಿ, ಮೊಬೈಲ್‌ಗಳ ಮೂಲಕ ಇಲ್ಲವೆ ಮಧ್ಯವರ್ತಿ ವ್ಯಕ್ತಿಯ ಮೂಲಕ ಇವರಿಗೆ ಕರೆ ಕಳುಹಿಸಿದರೆ ಗಿರಾಕಿ ತಿಳಿಸಿದ ಸ್ಥಳದಲ್ಲಿ ಹೇಳಿದ ಸಮಯಕ್ಕೆ ಹಾಜರಿರುತ್ತಾರೆ. ಇವರ ಸೌಂದರ್ಯ, ಆಕರ್ಷಕ ಮೈಮಾಟ, ವಯಸ್ಸಿನ ಆಧಾರದ ಮೇಲೆ ಒಂದು ರಾತ್ರಿ, ಒಂದು ದಿನ, ಒಂದು ಸಲಕ್ಕೆ ದರ ನಿರ್ಧರಿಸಲ್ಪಡುತ್ತದೆ. ಇತ್ತೀಚೆಗೆ ಕೆಲವು ತಿಂಗಳುಗಳ ಹಿಂದೆ ಇಂತಹ ವೃತ್ತಿಯಲ್ಲಿ ತೊಡಗಿದ ಗುಲ್ಬರ್ಗಾ ಲಾಡ್ಜ್‌ವೊಂದರಲ್ಲಿ ೧೯ ವರ್ಷದ ಹುಡುಗಿಯನ್ನು ಹಾಗೂ ಗಿರಾಕಿ ಒಪ್ಪಿಸುತ್ತಿದ್ದ ೪ ಜನರನ್ನು ಬಂಧಿಸಿದ್ದಾರೆ.

ಸಾಮಾನ್ಯ ಲೈಂಗಿಕ ಕಾರ್ಯಕರ್ತೆಯರು

ಈ ಲೈಂಗಿಕ ಕಾರ್ಯಕರ್ತೆಯರು ದೊಡ್ಡ ದೊಡ್ಡ ನಗರಗಳ 'ಕೆಂಪು ದ್ವೀಪ" ಎಂದು ಕರೆಯಲ್ಪಡುವ ಪ್ರದೇಶಗಳಲ್ಲಿ ವೃತ್ತಿ ಮಾಡುತ್ತಾರೆ. ಹಲವಾರು ವರ್ಷಗಳಿಂದ ಲೈಂಗಿಕ ವೃತ್ತಿ ಮಾಡುತ್ತ ಬಂದಿರುವ ಇವರಿಗೆ ಖಾಯಂ ಗಿರಾಕಿಗಳು ಇರುತ್ತಾರೆ. ಅಲ್ಲದೆ ಹೊರ ಗಿರಾಕಿಗಳು ಕೂಡ ಬರುತ್ತಾರೆ. ಇಂತಹ ಸಾಮಾನ್ಯ ಲೈಂಗಿಕ ಕಾರ್ಯಕರ್ತೆಯರು ಗುಲ್ಬರ್ಗಾ ನಗರದಲ್ಲಿ ಹಲವು ಕಡೆ ಕಂಡು ಬರುತ್ತಾರೆ. ಈ ಲೈಂಗಿಕ ವೃತ್ತಿ ಮಹಿಳೆಯರು ಸ್ವತಃ ತಾವೇ ವೇಶ್ಯಾವಾಟಿಕೆಗಳ ಬಾಗಿಲ ಬಳಿ ವಿವಿಧ ಭಂಗಿಗಳಲ್ಲಿ ನಿಂತು ನಿರ್ಲಜ್ಜೆಯಿಂದ ಬೀದಿಯಲ್ಲಿ ಹಾದು ಹೋಗುವ ಜನರನ್ನು ಆಕರ್ಷಿಸಿ ಕೈ ಮಾಡಿ ಕರೆಯುತ್ತಾರೆ.

ಈ ರೀತಿಯಾಗಿ ವಿವಿಧ ಪ್ರಕಾರಗಳಲ್ಲಿ ಲೈಂಗಿಕ ಕಾರ್ಯಕರ್ತೆಯರು ಕಾರ್ಯನಿರ್ವಹಿಸುವುದನ್ನು ಕಾಣಬಹುದಾಗಿದೆ. ದೇಹ ವ್ಯಾಪಾರದ ನಂತರವಾದರೂ ಈ ಲೈಂಗಿಕ ಕಾರ್ಯಕರ್ತೆಯರಿಗ ಬದುಕು ಸುಧಾರಿಸುತ್ತದೆಯೇ? ಎಂದರೆ ಅದೂ ಇಲ್ಲ ಎಂದು ಹೇಳಬಹುದು. ಗಿರಾಕಿಗಳ ಕೈಗೆ ಸಿಕ್ಕಿ ಜರ್ಝರಿತಗೊಂಡ ಈ ಯಂತ್ರದೇಹಿಗಳು ಒಂದೆಡೆ ಪೋಲಿಸರಿಂದ, ಮತ್ತೊಂದೆಡೆ ಭಯಾನಕ ಏಡ್ಸ್ ರೋಗದಿಂದ ನರಳಿ ಭವಿಷ್ಯವೇ ಇಲ್ಲದಂತೆ ತತ್ತರಿಸುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಕ್ತೃಗಳು ನೀಡಿದ ಮಾಹಿತಿಯ ಮುಖಾಂತರ ತಿಳಿದುಬಂದಿದೆ. ಇವರು ಇಂದು ಕತ್ತಲ ಕೂಪದಲ್ಲಿ ಕಾಲ ತಳ್ಳುತ್ತಿದ್ದಾರೆ. ರಾಜ್ಯದಲ್ಲಿ ೪೦ ಸಾವಿರ ವೇಶ್ಯೆಯರಿದ್ದಾರೆ. ಇವರಲ್ಲಿ ೩ನೇ ಒಂದು ಭಾಗ ಹೆಚ್.ಐ.ವಿ ಸೋಂಕು ಹಾಗೂ ಏಡ್ಸ್‌ನಿಂದ ಬಳಲುತ್ತಿದ್ದಾರೆ. ಅದೇ ರೀತಿಯಾಗಿ ಗುಲಬರ್ಗಾದಲ್ಲಿ ಸುಮಾರು

೧೮ ಜನರಿಗೆ ಹೆಚ್.ಐ.ವಿ./ಏಡ್ಸ್‌ದಿಂದ ಬಳಲುತ್ತಿರುವುದು ಕಂಡುಬಂದಿದೆ. ಈ ಲೈಂಗಿಕ ಕಾರ್ಯಕರ್ತೆಯರ ನೋವಿನ ಆಳದಿಂದ ಹೊರ ಎತ್ತುವ ಸರ್ಕಾರ ಹಾಗೂ ಸಾರ್ವಜನಿಕ ಸಂಘ ಸಂಸ್ಥೆಗಳು ಮತ್ತೆ ಮತ್ತೆ ಮುಜುಗರ, ಬಿಕ್ಕಟ್ಟನ್ನು ಸೃಷ್ಟಿಸುತ್ತವೆಯೇ ಹೊರತು ಸುಧಾರಣೆಯಂತೂ ಅಲ್ಲ ಎಂದು ಹೇಳಬಹುದು.

ಬಾಲ್ಯ ವೇಶ್ಯೆಯರು

ಓದಿ -ಆಡಿ ನಲಿಯಬೇಕಾದ ಕಂದಮ್ಮಗಳು ಇಂದು ವೇಶ್ಯಾವೃತ್ತಿಗೆ ಎಳೆದುಕೊಳ್ಳುತ್ತಿದ್ದಾರೆ. ಸ್ವಾರ್ಥ ಪುರುಷರ ಮೋಜಿನ ವಸ್ತುವಾಗಿ ಬಾಲೆಯರು ಬದುಕಬೇಕಾಗಿ ಬಂದಿದೆ. ಅವುಗಳ ಪೂರ್ವಜನ್ಮದ ಕರ್ಮದ ಫಲವಾಗಿರಬಹುದು ಇಲ್ಲವೆ ಬದುಕುವ ದಾರಿ ಕಂಡುಕೊಳ್ಳಲು ತಂದೆ-ತಾಯಿಯ ಬಲವಂತಕ್ಕೆ ಮುಗ್ಧ ಜೀವಿಗಳು ಅರಳುವ ಮುನ್ನವೆ ಕಮರುತ್ತಿರುವುದಂತೂ ಕಟುಸತ್ಯ, ಕರ್ನಾಟಕ, ಗೋವಾ ಮತ್ತು ತಮಿಳುನಾಡು, ಕರಾವರಿ ಪ್ರದೇಶದಲ್ಲಿ ಬಾಲ್ಯ ವೇಶ್ಯೆಯರ ಸಂಖ್ಯೆ ಜಾಸ್ತಿಯಾಗುತ್ತಿದೆ ಎಂದು ತಿಳಿದು ಬಂದಿದ್ದು ಬೀದಿಯಲ್ಲಿಯೇ ಹುಟ್ಟಿ ಬೀದಿಯಲ್ಲಿಯೇ ಬೆಳೆದ ಅನಾಥರಿಗಂತೂ ಜೀವಿಸಲು ಅದೊಂದೇ ಮಾರ್ಗವಾಗಿದ್ದರೆ ಆಚ್ಚರಿಪಡಬೇಕಿಲ್ಲ.

ಒಟ್ಟು ವೇಶ್ಯೆಯರ ಇನೇ ಒಂದು ಭಾಗ ಚಿಕ್ಕ ಮಕ್ಕಳೇ ಇರುತ್ತಾರೆ. ಅಪ್ರಾಪ್ತರಾದ ಹೆಣ್ಣು ಮಕ್ಕಳೊಂದಿಗೆ ಸಂಭೋಗಿಸುವುದರಿಂದ ಲೈಂಗಿಕ ಕಾಯಿಲೆಗಳು ವಾಸಿಯಾಗುತ್ತವೆ ಎಂಬ ಮೌಢ್ಯತೆಯಿಂದಾಗಿ ಬಾಲ ವೇಶ್ಯೆಯರಿಗೆ ಬೇಡಿಕೆ ಹೆಚ್ಚಾಗಿದೆ.

೧೯೯೮-೯೯ರಲ್ಲಿ ಮುಂಬೈ ಹೈಕೋರ್ಟ್ ಬಾಲ್ಯವೇಶ್ಯೆಯರನ್ನು ಕತ್ತಲ ಕೂಪದಿಂದ ಹೊರಗೆಳೆದು ಅವರಿಗೆ ಭವಿಷ್ಯ ರೂಪಿಸುವಂತೆ ಸರ್ಕಾರ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ಆದೇಶ ಜಾರಿ ಮಾಡಲು ಈ ಆದೇಶದಂತೆ ಪೊಲೀಸರು ಅನೇಕ ವೇಶ್ಯಾವಾಟಿಕೆಗಳ ಕೇಂದ್ರಗಳ ಮೇಲೆ ನಡೆಸಿದರು. ಈ ದಾಳಿಯ ಸಂದರ್ಭದಲ್ಲಿ ದಿಗ್ಭ್ರಮೆ ತರಿಸುವಂತಹ, ಮನುಕುಲಕ್ಕೆ ಅಪಮಾನವಾಗು ವಂತಹ ಸಂಗತಿಗಳು ಹೊರಬಿದ್ದವು. ಕರ್ನಾಟಕ, ಕೇರಳ, ನೇಪಾಳದ ಸಾವಿರಕ್ಕೂ ಹೆಚ್ಚು ಪುಟ್ಟ ಪುಟ್ಟ ಕನಸುಗಳ ಬಾಲಕಿಯರು ವೇಶ್ಯಾವಾಟಿಕೆಯಲ್ಲಿ ಪ್ರತಿನಿತ್ಯವೂ ಮೈಮಾರುವ ಯಂತ್ರಗಳಾಗಿ ಬಿದ್ದುಕೊಂಡಿರುವುದನ್ನು ಬೆಳಕಿಗೆ ಬಂತು. ಇಂತಹ ಒಂದು ಬಾಲ್ಯೆಯರು ಹಲವಾರು ನಗರ ಪ್ರದೇಶಗಳಲ್ಲಿ ನರಕ ಕೂಪದಲ್ಲಿ ತೆಲೆಮರೆಯಲ್ಲಿ ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಸಮೀಕ್ಷೆಯೊಂದರ ಪ್ರಕಾರ ಭಾರತದಲ್ಲಿ ೫ ರಿಂದ ೧೦ ಲಕ್ಷದಷ್ಟು ಬಾಲ ವೇಶ್ಯೆಯರಿದ್ದಾರೆ.

ಹಲವು ವರ್ಷಗಳಿಂದ ಗುಲ್ಬರ್ಗಾ ಜಿಲ್ಲೆಯ ಆಳಂದ, ಚಿಂಚೋಳಿ, ಸೇಡಂ ಮುಂತಾದ ಗಡಿ ಪ್ರದೇಶಗಳಲ್ಲಿ ನಡೆಯುತ್ತಿದ್ದ ಹೆಣ್ಮು ಶಿಶುಗಳ ಮಾರಾಟದ ಹಿಂದೆ ಇರುವ ಉದ್ದೇಶ ಬಾಲ ವೇಶ್ಯಾವೃತ್ತಿಗೆ ಒಂದು ಜ್ವಲಂತ ಉದಾಹರಣೆಯಾಗಿದೆ.

ರಾಷ್ಟ್ರೀಯ ಮಾನಾವಾಧಿಕಾರ ಆಯೋಗದ ಪ್ರಕಾರ ಸ್ತ್ರೀಯರಲ್ಲಿ ಪ್ರತಿಶತ ೨೫ರಷ್ಟು ಹೆಣ್ಣುಗಳು ೧೫ ವರ್ಷ ಪ್ರಾಯಕ್ಕೆ ಮೊದಲೇ ವೇಶ್ಯಾವಾಟಿಕೆ ಸೇರಿದ್ದಾರೆ ಎಂದು ಹೇಳಿದೆ. ಭಾರತ ಮತ್ತು ಪೌರ್ವಾತ್ಯ ದೇಶಗಳಲ್ಲಿ ಎಳೆಯ ಪ್ರಾಯದ ಹೆಣ್ಣುಗಳಿಗೆ ಬೇಡಿಕೆ ಹೆಚ್ಚಾಗಿರುವುದು ತಿಳಿದುಬಂದಿದೆ. ಬಾಲ್ಯ ವೇಶ್ಯೆಯರಲ್ಲಿ ಕಾಯಿಲೆ ಇರುವುದಿಲ್ಲ ಎಂಬ ನಂಬಿಕೆ. ಅಪ್ರಾಪ್ತ ವಯಸ್ಸಿನ ಹುಡುಗಿಯರನ್ನು ಕೂಡಿದರೆ ಸ್ತ್ರೀರೋಗಗಳು ಗುಣವಾಗುತ್ತವೆ ಎಂಬ ಮೂಢನಂಬಿಕೆಯೂ ನಮ್ಮ ದೇಶದಲ್ಲಿದೆ. ಇಂತಹವರ ಕಾಮದ ಹಸಿವು ತುಂಬಿಸಲು ಸಾವಿರಾರು ಪಶುಗಳಾಗುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಗುಲಬರ್ಗಾದ ಗಡಿಪ್ರದೇಶದ ತಾಲ್ಲೂಕುಗಳಲ್ಲಿ ಹುಡುಗಿಯರು ಮಾರಾಟವಾಗಿರುವುದು ಪತ್ರಿಕೆಗಳು ವರದಿ ಮಾಡಿವೆ. ಮಾನಾವಧಿಕಾರ ತನಿಖೆಯ ಪ್ರಕಾರ ೬೮% ರಷ್ಟು ಹುಡುಗಿಯರನ್ನು ಕೆಲಸ ಕೊಡಿಸುವ ಆಮಿಷದ ಮೇಲೆ ವೇಶ್ಯಾವಾಟಿಕೆಗೆ ಕರೆತರಲಾಗಿತ್ತು ಮತ್ತು ೧೭%ರಷ್ಟು ಹುಡುಗಿಯರನ್ನು ಮದುವೆ ಮಾಡಿಕೊಳ್ಳುವ ಭರವಸೆ ಕೊಟ್ಟು ಮುಂಬಯಿ, ಪುನಾ ಮುಂತಾದ ನಗರಗಳಿಗೆ ತಂದು ಮಾರಾಟ ಮಾಡಲಾಗಿದೆ ಎಂದು ವರದಿ ತಿಳಿಸಿದೆ. ಬಡತನದ ಬವಣೆಯ ಬಸವಳಿಯುತ್ತಿರುವ ಹೆತ್ತವರೇ ಹಸಿದ ಒಡಲು ತುಂಬಿಕೊಳ್ಳಲು ತಮ್ಮ ಕರುಳು ಕುಡಿಗಳನ್ನು ವೇಶ್ಯಾವಾಟಿಕೆಗಳಿಗೆ ಮಾರುತ್ತಿರುವುದು ಬಹು ದುಃಖಕರ ಸಂಗತಿಯಾಗಿದೆ.

ಒಬ್ಬ ವ್ಯಕ್ತಿಯನ್ನು ಮಾರಾಟ ಮಾಡುವುದಾಗಲೀ, ಒತ್ತೆಯಾಳಾಗಿರಿಕೊಳ್ಳುವುದಾಗಲಿ ಅಪರಾಧವಾಗಿದ್ದು ಇದು ಮಾನವ ಹಕ್ಕುಗಳ ಉಲ್ಲಂಘನೆಯೂ ಹೌದು. ಆದರೂ ಅನಾಗರಿಕ ಅಮಾನವೀಯ ಮಹಿಳಾ ಮಾರಾಟ ನಿರ್ಮೂಲನವಾಗದೆ ಮುಂದುವರಿದಿದೆ. ಮಾರಲ್ಪಟ್ಟ ಯುವತಿಯರನ್ನು ವೇಶ್ಯಾವಾಟಿಕೆಗೆ ತಳ್ಳಲಾಗುತ್ತದೆ. ಹುಡುಗಿಯರನ್ನು ಮಾರಾಟ ಮಾಡಿ ಅವರನ್ನು ಲೈಂಗಿಕ ದಾಸ್ಯತ್ವಕ್ಕೆ ತಳ್ಳುವುದು ಮಾನವತೆಗೊಂದು ಮಹಾ ಕಳಂಕ. ಅಲ್ಲದೆ ಮಹಿಳಾ ಬದುಕಿನ ದೊಡ್ಡ ದುರಂತವೂ ಹೌದು. ಈ ಹುಡುಗಿಯರನ್ನು ಪ್ರಾಣಿಗಿಂತಲೂ ಕೀಳಾಗಿ ನಡೆಸಿಕೊಳ್ಳುತ್ತಾರೆ. ಅವರಿಗೆ ಯಾವುದೇ ಮಾನವೀಯ ಸೌಲಭ್ಯಗಳಿರುವುದಿಲ್ಲ. ಇಂದಿನ ನಾಗರಿಕತೆ ಮಹಿಳೆಯ ವ್ಯಕ್ತಿತ್ವವನ್ನು ಗೌರವಿಸುತ್ತಿಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ.

ಅಡಿಟಿಪ್ಪಣಿಗಳು

೧. ಸಿಮೊನ್ ದ ಭೋವಾ ದ ಸೆಕೆಂಡ್ ಸೆಕ್ಸ್, ಡಾ. ಎಚ್.ಎಸ್. ಶ್ರೀಮತಿ, ಪು. ೪೪, ೪೭, ೧೨೭, ೧೩೦.

೨. ಹರಕೆಯ ಹೆಣ್ಣು , ಡಾ. ಕೆ.ಜಿ. ಗುರುಮೂರ್ತಿ, ಪು. ೧೫, ೧೬, ೧೮.

೩. ಪ್ರಜಾವಾಣಿ ಪತ್ರಿಕೆ ಏಪ್ರಿಲ್ ೪, ೨೦೦೪, ದೇವದಾಸಿ ಇಲ್ಲವೇ ಮುಕ್ತಿ, ಡಾ. ಓಂಕಾರ ಕಾಕಡೆ.

೪. ನಗರ ಸಮಾಜ, ಭೈರಪ್ಪ, ಪು. ೫೯೫.

೫. ಎಂ.ಎಂ. ಕಲ್ಬುರ್ಗಿ, ಡಾ. ಚೆನ್ನಣ್ಣ ವಾಲೀಕಾರರವರ ಕರ್ನಾಟಕ ದೇವದಾಸಿಯರ ಸಮಾಜೋ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ ಕೃತಿಯಲ್ಲಿನ ಆರಂಭದ ಮಾತುಗಳಿಂದ.

೬. ಪಾತರದವರು, ಡಾ. ಶೈಲಜ ಹಿರೇಮಠ, ಪು. ೧೩, ೧೭, ೧೮.

೭. ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಡಾ. ಎಂ. ಉಷಾ, ಪು. ೧೧೬, ೧೧೭, ೧೧೮, ೧೧೯, ೧೨೪.

೮. ಮಹಿಳೆ ಬಿಡುಗಡೆಯ ಹಾದಿಯಲ್ಲಿ, ಎನ್. ಗಾಯತ್ರಿ, ಪು. ೧೧೫, ೧೧೯.

೯. ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು, ಪು. ೧೨೭-೧೩೦.

೧೦. ಕರ್ಮವೀರ : ಮಹಿಳಾ ದೌರ್ಜನ್ಯ ನಾಗರಿಕತೆಯ ಅಸಹ್ಯ ರೂಪ; ಎನ್.ಆರ್.ಪಾಟೀಲ್, ಪುಟ ೨೪–೨೫, ೧೫.೧೦.೨೦೦೬.

೧೧. ಎಂ.ಎಂ.ಕಲಬುರ್ಗಿ ಡಾ. ಚೆನ್ನಣ್ಣ ವಾಲೀಕಾರರವರ ಕರ್ನಾಟಕದ ದೇವದಾಸಿಯರ ಸಮಸ್ಯೆಗಳ ಸಮಗ್ರ ಅಧ್ಯಯನ ಕೃತಿಯ ಆರಂಭದ ಮಾತುಗಳಿಂದ, ಪುಟ–೮.

೧೨. ಚೆನ್ನಣ್ಣ ವಾಲೀಕಾರ; ಕರ್ನಾಟಕದ ದೇವದಾಸಿಯರ ಸಮಾಜೋ ಧಾರ್ಮಿಕ ಆರ್ಥಿಕ ಶೈಕ್ಷಣಿಕ ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ, ಪುಟ–೨೨೧, ೨೨೨.

ಅಧ್ಯಾಯ ೩

ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳು

೩.೧. ಲೈಂಗಿಕ ಕಾರ್ಯಕರ್ತೆಯರ ಸಮಸ್ಯೆಗಳು

೩.೨. ಲೈಂಗಿಕ ಕಾರ್ಯಕರ್ತೆಯರ ಸಮಸ್ಯೆಗಳಿಗೆ ಪರಿಹಾರ ಕ್ರಮಗಳು

೩.೩. ಲೈಂಗಿಕ ಕಾರ್ಯಕರ್ತೆಯರ ಸಮಸ್ಯೆಗಳಿಗೆ ಮೈರಾಡ ಮತ್ತು
ಕೆ.ಎಚ್.ಪಿ.ಟಿ. ಸಂಸ್ಥೆಗಳು ತೆಗೆದುಕೊಂಡ ಕ್ರಮಗಳು

೩.೪. ಅಧ್ಯಯನದ ಫಲಿತಾಂಶಗಳು

ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳು

ವೇಶ್ಯಾವೃತ್ತಿಯಲ್ಲಿ ತೊಡಗಿಸಿಕೊಂಡು ನರಳುವ ಅಸಹಾಯಕ ಸ್ತ್ರೀಯರ ದಯನೀಯ ಬದುಕು ಗಂಭೀರವಾಗಿದೆ. ಇವರ ಬದುಕಿನ ಬಂಡಿ ಸಮಾಜದ ಇತರರಿಗಿಂತ ಭಿನ್ನ ಎಂಬುದು ಹೊಸದಲ್ಲವಾದರೂ, ನಾಗರಿಕತೆ ಬೆಳೆದಂತೆಲ್ಲ ಇಂತಹ ಹೀನ ಬದುಕನ್ನು ಆಶ್ರಯಿಸಿ ನಂತರ ದಿನದಿನವೂ ನರಳಿ ಸಾಯುವರ ಸಂಖ್ಯೆ ಹೆಚ್ಚುತ್ತಲೇ ಹೋಗಿರುವುದು ದುರದೃಷ್ಟಕರ ಗಿರಾಕಿಗಳ ಕೈಗೆ ಸಿಕ್ಕಿ ಜರ್ಝರಿತಗೊಂಡ ಈ ಯಂತ್ರದೇಹಿಗಳು ಒಂದೆಡೆ ಘರವಾಲಿಗಳಿಂದ, ಪೊಲೀಸರಿಂದ, ಮತ್ತೊಂದೆಡೆ ಭಯಂಕರ ಏಡ್ಸ್ ರೋಗದಿಂದ ನರಳಿ ಭವಿಷ್ಯವೇ ಇಲ್ಲದಂತೆ ತತ್ತರಿಸಿದ್ದಾರೆ. ಕತ್ತಲ ರೂಪದಲ್ಲಿ ಕಾಲ ತಳ್ಳುತ್ತಿದ್ದಾರೆ.

ಯಾವ ಮಹಿಳೆಯೂ ಸ್ವಸಂತೋಷದಿಂದ ಮೈಮಾರಿಕೊಳ್ಳುವ ಅವಹೇಳನಕಾರಿ ವೃತ್ತಿಗೆ ಇಳಿಯುವುದಿಲ್ಲ. ಆದರೆ ಹರಿದು ತಿನ್ನುವ ಬಡತನ ಅವರನ್ನು ಈ ಪಾಪದ ಕೆಲಸಕ್ಕೆ ತಳ್ಳುತ್ತದೆ. ಇನ್ನು ಕೆಲ ಸಂದರ್ಭದಲ್ಲಿ ಬಲವಂತಕ್ಕೆ ಒಳಗಾಗಿಯೋ ಇಲ್ಲವೆ ಅತ್ಯಾಚಾರದಿಂದಾಗಿಯೋ ಅವರು ಈ ನರಕ ರೂಪಕ್ಕೆ ಬೀಳುತ್ತಾರೆ. ಒಮ್ಮೆ ಈ ಹಳ್ಳಕ್ಕೆ ಬಿದ್ದ ಮೇಲೆ ಈ ನತದೃಷ್ಟ ಮಹಿಳೆಯರು ಸಮಾಜದ ದೃಷ್ಟಿಯಲ್ಲಿ ಕಳಂಕಿತರಾಗುತ್ತಾರೆ. ಗೌರವಾನ್ವಿತ ಎಂದು ಹೇಳಿಕೊಳ್ಳುವ ಸಮಾಜ ಅವರನ್ನು ನೋಡುವ ದೃಷ್ಟಿಯೇ ಬೇರೆಯಾಗಿದೆ.

ಹಲವು ವೇಶ್ಯೆಯರು ತಮ್ಮ ಜೀವನ ಕ್ರಮದ ನೈತಿಕತೆಗೆ ಒಗ್ಗಿ ಹೋಗಿರುತ್ತಾರೆ. ಅವರು ಸ್ವಭಾವತಃ ಅಥವಾ ಹುಟ್ಟಿನಿಂದ ಅನೀತಿವಂತರಾಗಿತ್ತಾರೆಂದಲ್ಲ. ಆದರೆ ಅವರು ತಮ್ಮ ಸೇವೆಗೆ ಬೇಡಿಕೆಯನ್ನು ಸೃಷ್ಟಿಸುವ ಸಮಾಜದ ರೀತಿನೀತಿಗಳಿಗೆ ತಮ್ಮನ್ನು ತಾವು ಒಗ್ಗಿಸಿಕೊಂಡು ಬಿಡುತ್ತಾರೆ. ಲೈಂಗಿಕ ವೃತ್ತಿ ನಿರತ ಮತ್ತು ಮಹಿಳೆಯರೊಡನೆ ದೇಹ ಸಂಬಂಧ ಪಡೆಯುವರು ಅವರಿಗೆ ಕಾಸು ಕೊಡಲಿ ಬಿಡಲಿ ಅವಳನ್ನು ಸೂಳೆ ಅಥವಾ ವೇಶ್ಯೆ ಅನ್ನುವುದಂತೂ ತಪ್ಪುವುದಿಲ್ಲ.

ಅಸಂಖ್ಯಾ ಹೆಣ್ಣುಮಕ್ಕಳ ಬದುಕಿನ ಕನಸುಗಳು ದಾಸ್ಯದ ಸಂಕೋಲೆಯಲ್ಲಿ ಕಮರುತ್ತಿವೆ. ನಮ್ಮ ದೇಶದಲ್ಲಿ ಬಡತನದ ಬೇಗೆಯಲ್ಲಿ ಬಳಲುತ್ತಿರುವ ಕುಟುಂಬಗಳನ್ನು ಗುರುತಿಸಿ ಅವರಿಗೆ ಆಸೆ–ಆಮಿಷ ತೋರಿಸಿ ಆ ಮನೆಯ ಹೆಣ್ಣುಮಕ್ಕಳನ್ನು ಕರೆದುಕೊಂಡು ಹೋಗಿರುವ ಅಮಾನುಷ ತಲೆಹಿಡುಕರು ಲಕ್ಷಾಂತರ ಯುವತಿಯರನ್ನು ಲೈಂಗಿಕ ದಾಸ್ಯತ್ವಕ್ಕೆ ತಳ್ಳಲ್ಪಟ್ಟಿದ್ದಾರೆ.

ಲೈಂಗಿಕ ಕಾರ್ಯಕರ್ತೆಯರು ಇರುವ ಪರಿಸರದ ಜೀವನಮಟ್ಟ ದುರ್ಭರವಾಗಿರುತ್ತದೆ. ತಲೆಹಿಡಕರು, ಘರವಾಲಿಗಳು ಕಿತ್ತು ತಿನ್ನುತ್ತಾರೆ. ಸದಾ ಏನಾಗುವುದೇ ಎಂಬ ಆತಂಕ ಅವರಲ್ಲಿ ಕಾಡುತ್ತಿರುತ್ತದೆ. ಮುಕ್ಕಾಲು ಪಾಲು ಜನರು ಹಲವು ಸಂದರ್ಭದಲ್ಲಿ ಬಿಡಿಕಾಸು ಇರುವುದಿಲ್ಲ. ಹಲವು ಮಾನಸಿಕ, ದೈಹಿಕ, ಆರೋಗ್ಯ ಸಮಸ್ಯೆಗಳು ಎದುರಿಸುತ್ತಿದ್ದಾರೆ.

ಸಾಮಾನ್ಯ ಬಡ ವೇಶ್ಯೆಯ ಬದುಕು ಅತ್ಯಂತ ದುರ್ದಮನೀಯವಾಗಿದೆ. ಆಕೆ ಲೈಂಗಿಕವಾಗಿ, ಆರ್ಥಿಕವಾಗಿ ಶೋಷಿತಗಳು, ಪೋಲಿಸರು ಬೇಕೆಂದಂತೆ ಹಿಂಸಿಸುತ್ತಾರೆ. ವೈದ್ಯಕೀಯ ಸವಲತ್ತುಗಳು ಹೀನಾಯವಾಗಿವೆ. ಗಿರಾಕಿಗಳು ಮನಬಂದಂತೆ ವರ್ತಿಸುತ್ತಾರೆ. ರೋಗಗಳು, ಸೊಂಕುಗಳು ಕಾಡಿಸುತ್ತವೆ.

ಈ ವೇಶ್ಯೆಯರಿಗೆ ವೈಯಕ್ತಿಕ ನೆಲೆಗಳಿಲ್ಲ. ಬದುಕು ಬಹಳಷ್ಟು ಅಸಹನೀಯದಿಂದ ಕೂಡಿದೆ. ಅಪೌಷ್ಟಿಕ ಆಹಾರ, ಗಾಳಿ ಬೆಳಕಿಲ್ಲದ ಕೊಠಡಿಗಳು, ದಾರಿದ್ರ್ಯ, ಬಹುಮಂದಿಯೊಂದಿಗೆ ಲೈಂಗಿಕ ಸಂಬಂಧ, ಗರ್ಭಪಾತಗಳು ಇವುಗಳಿಂದ ಲೈಂಗಿಕ ಕಾರ್ಯಕರ್ತೆಯರು ಜೀವಚಟಗಳಾಗಿ ಬಿಡುತ್ತಾರೆ. ಬಹುಪಾಲು ಈ ವೃತ್ತಿಯ ಜನ ಲೈಂಗಿಕ ರೋಗಗಳಿಂದ ನರಳುತ್ತಿದ್ದಾರೆ. ವೇಶ್ಯೆಯರು ಈಗ ಹೊಸದೊಂದು ಸಮಸ್ಯೆಯನ್ನು ಎದುರಿಸಬೇಕಾಗಿ ಬಂದಿದೆ. ಇಲ್ಲಿಯೂ ವೇಶ್ಯೆಯರೇ ಅಪರಾಧಿಗಳು. ವೈದ್ಯಕೀಯ ಜಗತ್ತು ಐ.ಎಸ್.ಡಿ.ಎಸ್. ರೋಗವನ್ನು ಹಬ್ಬಿಸುವ ಅಪರಾಧವನ್ನು ವೇಶ್ಯಾವೃತ್ತಿಯಿಂದ ತಲೆಗೆ ಕಟ್ಟಿದೆ.

ಹಲವಾರು ಶಾಸನಗಳು, ರಕ್ಷಣಾತ್ಮಕ ಕ್ರಮಗಳು ಜಾರಿಗೆ ತಂದರೂ ಸಹ ವೇಶ್ಯೆಯರನ್ನು ಅಥವಾ ಲೈಂಗಿಕ ಕಾರ್ಯಕರ್ತೆಯರನ್ನು ಕೀಳಾಗಿ ಕಾಣುವ ಅಪರಾಧಿಗಳನ್ನಾಗಿಸುವ ಜನರ ಮನೋಭಾವ ಬದಲಾಗಿಲ್ಲ. ಎಲ್ಲ ರೀತಿಯಿಂದಲೂ ದಮನಕ್ಕೆ ಒಳಗಾಗುವ ಲೈಂಗಿಕ ಕಾರ್ಯಕರ್ತೆಯರ ಸ್ಥಿತಿ ನಿಜಕ್ಕೂ ಶೋಚನೀಯವಾಗಿದೆ.

೩.೧. ಲೈಂಗಿಕ ಕಾರ್ಯಕರ್ತೆಯರ ಸಮಸ್ಯೆಗಳು

ವಾಸ್ತವವಾಗಿ ವೇಶ್ಯೆಯರಿಗೆ ಬದುಕಲು ಬೇರೆ ಇರಬಹುದು. ಆದರೆ ಈ ಅನೈತಿಕ

ದಾರಿ ವೇಶ್ಯೆ ತಾನು ಬದುಕಲು ಕೆಟ್ಟ ದಾರಿಯನ್ನು ಆಯ್ಕೆ ಮಾಡಿಕೊಂಡಿದ್ದಾಳೆ ಎಂಬ ಮಾತ್ರಕ್ಕೆ ಕೆಟ್ಟತನ ಅಥವಾ ವೃತ್ತಿ ರಕ್ತದಲ್ಲೇ ಇದೆಯೆಂದು ಸಾಬಿತಪಡಿಸಲಾಗುವುದಿಲ್ಲ. ಇಂದಿಗೂ ಹಲವು ಮಹಿಳೆಯರು ಲೈಂಗಿಕ ವೃತ್ತಿಯನ್ನು ಆಯ್ಕೆಮಾಡಿಕೊಳ್ಳಲು ಹಿಂಜರಿಯುತ್ತಿಲ್ಲವೆಂದರೆ ಅದು ನಮ್ಮ ಸಮಾಜದ ದುರವಸ್ಥೆಯನ್ನು ಅಸಮಾನತೆಯನ್ನು ಸೂಚಿಸುತ್ತದೆ.

ಲೈಂಗಿಕ ವೃತ್ತಿನಿರತ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ, ಮಾನಸಿಕವಾಗಿ ಮತ್ತು ದೈಹಿಕ, ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡು ಬರುತ್ತವೆ. ಹಲವು ಚಿರಾಟ, ಹೊಡೆದಾಟ ಆ ಕತ್ತಲು ಸಂದಿಯಲ್ಲಿ, ಕೆಂಪು ಕೇರಿಗಳಲ್ಲಿ ಹಲವು ಹೆಣ್ಣು ಜೀವಗಳು ನರಳುತ್ತಿವೆ.

ನಾಳೆಯ ಕೂಳಿಗಾಗಿ ಅಮ್ಮನಿಗೆ ಗಿರಾಕಿ ಬರಲೆಂದು ಮಗಳು,

ನಾಳೆಯ ಕೂಳಿಗಾಗಿ ಮಗಳಿಗೆ ಗಿರಾಕಿ ಬರಲೆಂದು ತಾಯಿ

ನಾಳೆಯ ಕೂಳಿಗಾಗಿ ತನಗೆ ಗಿರಾಕಿ ಬರಲೆಂದು ಬಸವಿ

ಎಂಬ ಡಾ. ಚೆನ್ನವಣ್ಣ ವಾಲಿಕರರ ನುಡಿಗಳು ಲೈಂಗಿಕ ಕಾರ್ಯಕರ್ತೆಯರ ದಾರುಣ ಲೋಕವನ್ನು ಹೇಳುತ್ತವೆ. ವೇಶ್ಯಾ ಸ್ತ್ರೀಯರನ್ನು ಕಿತ್ತು ತಿನ್ನುವ ಬಡತನವೇ ಕಾಣುತ್ತದೆ. ಅವರ ಕರುಳರಿಯುವ ರೋದನವೇ ಕೇಳುತ್ತದೆ.

ಬಡತನ

ಲೈಂಗಿಕ ಕಾರ್ಯಕರ್ತೆಯರು ಎದುರಿಸುತ್ತಿರುವ ಪ್ರಮುಖ ಸಮಸ್ಯೆ ಬಡತನ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹಲವಾರು ವಕ್ತೃಗಳು ನೀಡಿದ ವಿವರಗಳ ಪ್ರಕಾರ ಈ ವೃತ್ತಿಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಮೂಲಕಾರಣ ಬಡತನವಾಗಿರುವುದು ತಿಳಿದುಬರುತ್ತದೆ. ಈ ಬಡತನ ಅವರ ಬದುಕು ಮೂರಾಬಟ್ಟೆ ಮಾಡಿ ಬಿಟ್ಟಿದೆ. ಲೈಂಗಿಕ ವೃತ್ತಿಯಿಂದ ಅವರ ಬಡತನದ ಸ್ಥಿತಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಇದರಿಂದ ಅವರ ಬದುಕಿನ ಸ್ಥಿತಿ ಮತ್ತಷ್ಟು ಹದಗೆಡುತ್ತಿದೆ. ಬಡತನದಿಂದ ಬಳಲಿ ಈ ವೃತ್ತಿಗೆ ಬಂದವರು. ಮತ್ತೆ ಬಡತನದಲ್ಲಿಯೇ ಬಳಲಿ ಸಾಯುವ ಪರಿಸ್ಥಿತಿ ಬಂದೊದಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಭಾರತದಲ್ಲಿ ವೇಶ್ಯಾವಾಟಿಕೆಗಳು ದಿನವೊಂದಕ್ಕೆ ೮.೫ ಕೋಟಿ ರೂಪಾಯಿಗಳು ಅಂದರೆ ವರ್ಷಕ್ಕೆ ೬,೭೫೦ ಕೋಟಿ ವ್ಯವಹಾರ ಮಾಡುತ್ತಿದೆ. ಆದರೆ ಈ ಉದ್ಯಮದ ಕೊನೆಯಲ್ಲಿ

ದೇಹವನ್ನೇ ಬಲಿಕೊಡುವ ಬಡಪಾಯಿ ಹೆಣ್ಣು ಎರಡು ಹೊತ್ತು ಊಟಕ್ಕೂ ಗತಿಯಿಲ್ಲದ ಪರಿಸ್ಥಿತಿ ಇದೆ.

ಗಿರಾಕಿಗಳಿಂದ ಘರವಾಲಿಗಳಿಂದ ದೌರ್ಜನ್ಯ

ಲೈಂಗಿಕ ಕಾರ್ಯಕರ್ತೆಯರು ಗಿರಾಕಿಗಳಿಂದ ಮತ್ತು ಘರವಾಲಿಗಳಿಂದ ಹಲವು ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ತಾವು ಲೈಂಗಿಕ ವೃತ್ತಿಯಿಂದ ಬಂದ ಬಹುಪಾಲು ಹಣವನ್ನು ಘರವಾಲಿಗಳು ತೆಗೆದುಕೊಳ್ಳುತ್ತಾರೆ. ಒಂದು ವೇಳೆ ಅವರು ಬೇಡಿದಷ್ಟು ಹಣ ಕೊಡದೆ ಇದ್ದರೆ ಹೊಡೆಯುವುದು, ಬಡಿಯುವುದು ಮಾಡುತ್ತಾರೆ. ದುಡಿದಷ್ಟು ಹಣ ಬಹುಭಾಗ ಘರವಾಲಿಗಳಿಗೆ ಕೊಡುವುದರಿಂದ ಅವರ ಭವಿಷ್ಯಕ್ಕಾಗಿ ನಾಳಿನ ಬದುಕಿಗಾಗಿ, ಅನ್ನಕ್ಕಾಗಿ ಏನೂ ಉಳಿಯಲು ಸಾಧ್ಯವಿಲ್ಲ.

ಗಿರಾಕಿಗಳು ಹಾಗೂ ಘರವಾಲಿಗಳು ಇವರಿಗೆ ಹಲವು ರೀತಿಯಲ್ಲಿ ಮೋಸ ಮಾಡುತ್ತಾರೆ. ಮೊದಮೊದಲು ವೇಶ್ಯೆಯರಿಗೆ ಹಣ ಕೊಡುತ್ತಾರೆ. ಆಮೇಲೆ ಸಾಲ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಕೆಲವು ಸಂದರ್ಭಗಳಲ್ಲಿ ಘರವಾಲಿಗಳು ಇವರಿಗೆ ಕೊಟ್ಟ ಸಾಲದಿಂದ ವೇಶ್ಯೆಯರ ಬಂದ ಗಳಕೆಯೆನ್ನಲ್ಲಾ ಕಸಿದುಕೊಳ್ಳುತ್ತಾರೆ. ಅವರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಘರವಾಲಿಗಳು ನಮಗೆ ಸಾಕಷ್ಟುಸಲ ಸುಳ್ಳು ಭರವಸೆ, ಆಶ್ವಾಸನೆಗಳಿಂದ ಮೋಸ ಮಾಡಿ ಹಿಂಸಿಸುತ್ತಾರೆ. ಅವರ ಗುಲಾಮಗಿರಿಯಾಗಿ ಕೆಲಸ ಮಾಡಬೇಕಾಗುತ್ತದೆ ಎಂದು ಹಲವು ವಕ್ತೃಗಳು ತಮ್ಮ ಅನುಭವಗಳನ್ನು ಹೇಳಿಕೊಂಡಿದ್ದಾರೆ.

ವಕ್ತೃ ಪ್ರಕಾರ: ತನ್ನ ಖಾಯಂ ಗಿರಾಕಿ ಒಂದು ಸಲ ಜೀಪಿನೊಳಗಡೆ ಕೂಡಿಸಿಕೊಂಡು ಸೊಲ್ಲಾಪುರಕ್ಕೆ ಕರೆದುಕೊಂಡು ಹೋಗಿದ್ದ ಆ ಗಿರಾಕಿಯ ಜೊತೆ ೫ ಜನ ಗಂಡಸರಿದ್ದರು. ರಾತ್ರಿ ಲಾಡ್ಜ್‌ನಲ್ಲಿ ಉಳಿಯಬೇಕಾಗಿ ಬಂತು. ಅವರು ಕುಡಿಯುವುದು, ತಿನ್ನುವುದು ಶುರು ಮಾಡಿದರು. ನನಗೂ ಕೂಡ ಕುಡಿಸಿ ತಿನ್ನಿಸಿದರು. ಆದರೆ ಆ ಖಾಯಂ ಗಿರಾಕಿ ಇಂದೂ ನಾವೆಲ್ಲರೂ ನಿನ್ನ ಜೊತೆ ಮಲಗುತ್ತೇವೆಂದು ಹೇಳಿದಾಗ ನನಗೆ ತಲೆ ತಿರುಗಿ ಬೀಳುವಂತಾಯಿತು. ಒಮ್ಮೆಲೆ ನಿಮ್ಮೆಲ್ಲರಿಗೆ ದೇಹ ಒಪ್ಪಿಸಲು ಸಾಧ್ಯವಿಲ್ಲ. ನನ್ನ ಸ್ಥಿತಿ ಏನಾಗಬೇಕೆಂದು ಕಳಿಕಳಿಯಿಂದ ವಿನಂತಿಸಿಕೊಂಡೆ. ಆದರೂ ನನ್ನ ಯಾವ ಮಾತಿಗೆ ಬೆಲೆ ಕೊಡದೆ ಎಲ್ಲರೂ ಅಂದು ರಾತ್ರಿ ನನ್ನ ಜೊತೆ ಮಲಗಿದರು. ನಾನು ಮೂರ್ಛೆ ಹೋಗಿ ಹೆಣವಾಗಿ ಬಿದ್ದಿದೆ. ಬೆಳಗ್ಗೆ ಎದ್ದು ನೋಡುವಷ್ಟರಲ್ಲಿ ಅಲ್ಲಿ ಯಾರು ಇರಲಿಲ್ಲ. ನನಗೆ ಎದ್ದು ನಿಲ್ಲಲಿಕ್ಕೆ ಆಗದೆ ೨ ಸಲ ತಲೆಗೆ

ಚಕ್ರ ಬಂದು ಬಿದ್ದೆ. ಆದರೂ ಬೀಳುತ್ತ, ಏಳುತ್ತಾ ಹೋಗಿ ಮುಖ ತೊಳೆದುಕೊಂಡೆ. ಸೊಲ್ಲಾಪುರದಿಂದ ಗುಲ್ಬರ್ಗಾಕ್ಕೆ ಬರಲು ನನ್ನಲ್ಲಿ ೫ ಪೈಸೆ ಕೂಡ ಇರಲಿಲ್ಲ. ಸಾವಕಾಶವಾಗಿ ಅಲ್ಲಲ್ಲಿ ಕುಳಿತುಕೊಂಡು ರೈಲ್ವೆಸ್ಟೇಷನ್ ಮಾರ್ಗ ಕೇಳುತ್ತಾ ಬಂದೆ. ಅಲ್ಲಿ ಬೇರೆ ಗಿರಾಕಿಯನ್ನು ಪಟಾಯಿಸಿ ಅವನಿಗೆ ಸಂತೃಪ್ತಿಪಡಿಸಿ ಆತ ಕೊಟ್ಟಂತಹ ೧೫೦ ರೂಪಾಯಿ ತೆಗೆದುಕೊಂಡು ಹೊಟೇಲಿನಲ್ಲಿ ಹೋಗಿ ೨ ಪ್ಲೇಟ್ ಪೂರಿ ತಿಂದು ರೈಲ್ವೆ ಹತ್ತಿ ಗುಲ್ಬರ್ಗಾ ಬಂದೆ ಎಂದು ಹೇಳುತ್ತಾಳೆ.

ಪೊಲೀಸರಿಂದ ದೌರ್ಜನ್ಯ

ಲೈಂಗಿಕ ಕಾರ್ಯಕರ್ತೆಯರು ಪೊಲೀಸರಿಂದ ಕೂಡ ಅನೇಕ ರೀತಿಯ ದೌರ್ಜನ್ಯಗಳನ್ನು ಅನುಭವಿಸಿದ್ದಾರೆ. ರಕ್ಷಕರೇ ಭಕ್ಷಕರಾಗಿದ್ದಾರೆ.

ವಕ್ತ ಪ್ರಕಾರ :- ರಾತ್ರಿ ೧೨ ಗಂಟೆಗೆ ನಾನು ಮನೆಗೆ ಹಿಂತಿರುಗುತ್ತಿದ್ದಾಗ ಪೊಲೀಸರೊಬ್ಬರು ನನ್ನನ್ನು ತಡೆದು ನಿಲ್ಲಿಸಿ ವಿಚಾರಿಸಿ ತಮ್ಮ ಬಾಯಿಗೆ ಬಂದ ಹಾಗೆ ಬಯ್ದರು. ಅಷ್ಟೇ ಅಲ್ಲದೆ ನಿನ್ನ ಜೊತೆ ಮಲಗುತ್ತೇನೆ. ಆ ಕಡೆಗೆ ಹೋಗೋಣ ಬಾ ಎಂದು ಕೈ ಹಿಡಿದು ಕರೆದೊಯ್ದರು. ನನಗೆ ಎಚ್.ಐ.ವಿ. ಪಾಸಿಟಿವ್ ಇದೆ. ಕಾಂಡೋಮ್ ಇಲ್ಲದೆ ನನ್ನ ಜೊತೆ ಸಂಬಂಧ ಹೊಂದುವುದು ಸರಿಯಲ್ಲ. ನಿಮಗೆ ಹೆಂಡಿರು ಮಕ್ಕಳಿದ್ದಾರೆ ಎಂದು ಬೇಡಿಕೊಂಡೆ. ಆದರೆ ಆ ದಿನ ಅವರು ನನ್ನ ಜೊತೆ ಲೈಂಗಿಕ ಸಂಬಂಧ ಹೊಂದಿದ್ದರು ಎಂದು ಆ ಪೊಲೀಸನ ವರ್ತನೆಯನ್ನು ಕಣ್ಣಿಗೆ ಕಟ್ಟುವಾಗೆ ಹೇಳುತ್ತಾಳೆ. ಮುಂದೆ ಅವನು ಸತ್ತುಹೋದ ಎಂದು ಕೂಡ ಹೇಳುತ್ತಾಳೆ.

ಆರೋಗ್ಯ ಸಮಸ್ಯೆಗಳು

ಲೈಂಗಿಕ ವೃತ್ತಿನಿರತ ಮಹಿಳೆಯರಲ್ಲಿ ಅನೇಕ ರೀತಿಯ ಆರೋಗ್ಯ ಸಮಸ್ಯೆಗಳು ಹೆಚ್ಚಿನ ಮಟ್ಟದಲ್ಲಿ ಕಂಡು ಬರುತ್ತವೆ. ಇದರಿಂದ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅವರಿಗೆ ಗುಪ್ತ ರೋಗಗಳ ಮಾಹಿತಿಯ ಕೊರತೆ, ಲೈಂಗಿಕ ಶಿಕ್ಷಣದ ಕೊರತೆ, ಪೌಷ್ಠಿಕ ಆಹಾರದ ಕೊರತೆ - ಹೀಗೆ ಹಲವು ಆರೋಗ್ಯ ಸಮಸ್ಯೆಗಳು ಅವರಲ್ಲಿ ಅನೇಕ ಲೈಂಗಿಕ ರೋಗಗಳಾದ ಗನೋರಿಯಾ, ಸೀಫಲಿಸ್, ಕಾಂತ್ರಾಯ್ಯ, ಹರ್ಪಿಸ್ ಮತ್ತು ಎಡ್ಸ್ ಹೀಗೆ ಹಲವು ರೋಗಗಳಿಂದ ಬಳಲುತ್ತಿದ್ದಾರೆ. ಲೈಂಗಿಕ ಶಿಕ್ಷಣದ ಕೊರತೆ, ಮೌಢ್ಯತೆ, ಅನಕ್ಷರತೆ ವಿಪರೀತ ಕುಡಿತ, ಸಿಗರೇಟು ಸೇದುವುದು, ಆರೋಗ್ಯದ ಕಡೆ ಅಲಕ್ಷತನ ಮುಂತಾದವುಗಳಿಂದ ಲೈಂಗಿಕ ಕಾರ್ಯಕರ್ತೆಯರು ಆರೋಗ್ಯದ ಸಮಸ್ಯೆಗಳು ಎದುರಿಸುತ್ತಾರೆ.

ಲೈಂಗಿಕ ಕಾರ್ಯಕರ್ತೆಯರು ಎಷ್ಟೇ ಮುನ್ನೆಚ್ಚರಿಕೆ ವಹಿಸಿದರೂ ಕೆಲವರು ಆಗೀಗ ಬಸುರಾಗಿ ಬಿಡುತ್ತಾರೆ. ಅದನ್ನು ಹಲವಾರು ಸಲ ತಾವೇ ತೆಗೆದುಹಾಕಿದ್ದೇವೆ ಎಂದು ವಕ್ತೃಗಳು ಹೇಳುತ್ತಾರೆ. ಇಂತಹ ಅನಾರೋಗ್ಯದ ಪರಿಸ್ಥಿತಿಯಲ್ಲೂ ಅವರು ಬದುಕು ಸಾಗಿಸುತ್ತಾರೆ.

ಇಂದು ಲೈಂಗಿಕ ವೃತ್ತಿನಿರತ ಮಹಿಳೆಯರಲ್ಲಿ ಆರೋಗ್ಯದ ಸಮಸ್ಯೆಯಾಗಿ ಪರಿಣಮಿಸಿದೆ. ಅವರಿಗೆ ಆರೋಗ್ಯದ ಬಗ್ಗೆ ತಿಳುವಳಿಕೆ ನೀಡುವುದು ಬಹಳಷ್ಟು ಅಗತ್ಯವಾಗಿದೆ. ಈ ಲೈಂಗಿಕ ವೃತ್ತಿ ನಿರತರಲ್ಲಿ ಅನೇಕ ಆರೋಗ್ಯ ಸಮಸ್ಯೆಗಳಿದ್ದರೂ ಅವರು ಬೇರೊಬ್ಬರ ಬಳಿ ಹೇಳಲು ಆತಂಕ, ಮುಜುಗರ, ನಾಚಿಕೆ, ಜಿಗುಪ್ಸೆ ವ್ಯಕ್ತವಾಗುವುದನ್ನು ಕಾಣುತ್ತೇವೆ. ಹಾಗೆಯೇ ವೈದ್ಯರೊಡನೆಯೂ ಚರ್ಚಿಸಲು ತಮ್ಮ ಸಮಸ್ಯೆಗಳನ್ನು ಹೇಳುಲು ಮುಜುಗರ, ಭಯಪಡುತ್ತಿರುವುದು ಕ್ಷೇತ್ರಕಾರ್ಯದಲ್ಲಿ ಅವರು ನೀಡಿದ ವಿವರಗಳಿಂದ ತಿಳಿದುಬರುತ್ತದೆ. ತಮ್ಮ ಆರೋಗ್ಯ ಸಮಸ್ಯೆಗಳು ತಮ್ಮೊಳಗೆ ಇಟ್ಟುಕೊಂಡು ಕೊರಗುತ್ತಿದ್ದಾರೆ. ಇದರಿಂದ ಕೆಲವೊಂದು ವಿಧವಾದ ಗುಪ್ತ ರೋಗಗಳು ಭಯಾನಕವಾದ ಏಡ್ಸ್ ರೋಗವು ಹೆಚ್ಚಿನ ಮಟ್ಟದಲ್ಲಿ ಬೆಳೆಯುತ್ತಿರುವುದು ತಿಳಿದುಬರುತ್ತದೆ. ಹಲವು ಆರೋಗ್ಯ ಸಮಸ್ಯೆಗಳಿಂದ ದೈಹಿಕ ಶಕ್ತಿ, ಬುದ್ಧಿಶಕ್ತಿ, ಆತ್ಮಬಲ ಮುಂತಾದವುಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲವಾಗಿರುವ ಲೈಂಗಿಕ ವೃತ್ತಿ ಮಹಿಳೆಯರಿಗೆ ಮೂಲಭೂತ ಅವಶ್ಯಕತೆಗಳನ್ನು ಒದಗಿಸುವುದು. ಹಾಗೆಯೇ ಲೈಂಗಿಕ ಶಿಕ್ಷಣ ನೀಡುವುದು. ಉಚಿತ ವೈದ್ಯಕೀಯ ಸೌಲಭ್ಯ ಪೂರೈಸುವುದು, ಉತ್ತಮ ಗುಣಮಟ್ಟದ ಆರೋಗ್ಯದ ಬಗ್ಗೆ ಜಾಗೃತಿಯನ್ನು ಮೂಡಿಸುವುದು ಇಂದು ಬಹಳ ಅಗತ್ಯವಾಗಿದೆ ಎಂದು ಹೇಳಬಹುದಾಗಿದೆ.

ಹೀಗೆ ಪುರುಷರ ವಿಕೃತ ಕಾಮನೆಗಳಿಗೆ ಬಲಪಶುವಾಗುತ್ತಿರುವ ಲೈಂಗಿಕ ಕಾರ್ಯಕರ್ತೆಯರು ಬಲತ್ಕಾರ, ದೌರ್ಜನ್ಯ, ಮಾನಸಿಕ ಆಘಾತಗಳು, ಆರೋಗ್ಯ ಸಮಸ್ಯೆಗಳು ಎದುರಿಸುತ್ತಿದ್ದಾರೆ.

ಡಾ. ಚೆನ್ನಣ್ಣ ವಾಲೀಕರವರು ಬರೆದ ಕಾವ್ಯದ ಸಾಲುಗಳು ಇಡೀ ಲೈಂಗಿಕ ಕಾರ್ಯಕರ್ತೆಯರ ಬದುಕಿನ ಚಿತ್ರಣವನ್ನು ನೀಡುತ್ತದೆ.

ಷಂಡ ಗಂಡನಿಗೆ ಮಾಡಿಕೊಟ್ಟಿದ್ದಕ್ಕೆ, ಊರಮಿಂಡರ ಕೈಯಲ್ಲಿ
ವ್ಯರ್ಥ ಹಕನಾಕ ಆಗಬಾರದೆಂದು, ಮರ್ಯಾದೆ ರೀತಿಯಿಂದ
ಇತರ ಅಂಗಡಿಯವಂತೆ ರೇಟು ಹಚ್ಚಿಕೊಂಡು

ಇಲ್ಲಿ ಕುಳಿತಿದ್ದೇನೆ. ಉಳಿದ ಹೆಣ್ಣುಗಳ ಮೇಲೆ
ನನ್ನಂಥ ಅನ್ಯಾಯ ಮಾಡಿದರಲೆಂದು ಊರನಿರತರ ಹೆಣ್ಣು
ಮಗಳ ಮರ್ಯಾದೆ ಉಳಿಯಲೆಂದು ಇಲ್ಲಿ ಸೇರಿದ್ದೇನೆ
ತಾರಾ, ದ್ರೌಪದಿ, ಸೀತಾ, ಮಂಡೋದರಿ, ಅಹಲ್ಯಾ
ರಂಥ ಪ್ರಾತಃ ಸ್ಮರಣೆಯರೆ ಉಚ್ಚಬಿದ್ದಿರೋ
ಈ ಭೂಮಿಯ ಮೇಲೆ ಯಾವುದೇ ಹೆಣ್ಣು ತನ್ನ ಕೆಚ್ಚೆ
ದೆಯೆಂದೆ ಬಿಗಿಯಿರಲು ಸಾಧ್ಯವಿಲ್ಲದಕ್ಕೆ, ಈ ಕೊಳಕು
ಸಂಸ್ಕೃತಿಯ ನಾತದಲ್ಲಿ ಸುಮ್ಮನೆ ಸಾಯುವುದ
ಕ್ಕಿಂತ ಇಲ್ಲಿ ಕೆಲದಿನವಾದರೂ ಸುಖದಿಂದ
ಜೀವಿಸಲು ಬಂದಿದ್ದೇವೆ ಕಾರಣ ಜೀವನವೇ
ಕ್ಷಣಿಕ ಇರುವಾಗ ಇಲ್ಲಿ ಬದುಕಿನಲ್ಲಿ ಸುಖದ
ಕ್ಷಣಗಳು ಇಲ್ಲಿ ಕುಳಿತಿದ್ದೇನೆ ಬೆಳದಿಂಗಳಾಗಿ
ಬುದ್ಧನಂತೆ ರೋಗಗ್ರಸ್ತ ವೇಶ್ಯೆ
ಯರ ಮನೆಗೆ ಹೋಗುವವರೆಲ್ಲಿದ್ದಾರೆ
ಜ್ವರದಿಂದ ಬಳಲುವವರಿಗೆ ಉಳಿಸುವ
ವರೆಲ್ಲಿದ್ದಾರೆ. ಅವರ ಒಳಗಿನ
ಕೊಳೆ ಭಾವವಿರೇಚನ ಮಾಡಿ
ಅದರ ಭುವಿಬಾನು ಬಯಲುಗಳಿಂದ
ಜೇನು ಸುರಿಸುವವರು ಎಲ್ಲಿದ್ದಾರೆ?
ಈಗ ಎಲ್ಲಿದ್ದಾರೆ?
ದೇವರು ಸಾಯಬೇಕು ಧರ್ಮವು ಅಳಿಯಬೇಕು

ದೇವಾಲಯಗಳು ಕೊಳೆಯಬೇಕು ಉಳಿಯುವೆಯ ನಾವು
ಪುರೋಹಿತರು ಮಡಿಯಬೇಕು ಪುಡಾರಿಗಲಿಗೆ
ಕಡಿಯಬೇಕು ಬೆಳೆಯವು ನಾವು
ಆಗ ಹಾವಾಗುವವು ಹೂವು
ಮಲಗಿದರೂ ಬಿಡುವುದಿಲ್ಲ ಅತ್ತರೂ ಸತ್ತರೂ
ಮುದುಕಿಯರೆಂದರೂ ಕೇಳುವುದಿಲ್ಲ
ಬೆದಿಗೆ ಬಂದ ನಾಯಿಯಂತೆ ಹಗಲು ರಾತ್ರಿ
ಹಗಲು ರಾತ್ರಿ ಬಿಟ್ಟು ಬಿಡಲಾರದೆ

ಬೆನ್ನಹತ್ತಿ ಬಿಡುವರು ಸಿರಿವಂತರ
ಹುಡುಗರು ನಮ್ಮ ಬಾಳು ಭಸ್ಮ ಮಾಡಿ
ಬೂದಿಮಾಡಿದಂಥ ಜನಕೆ ಕರಿನಾಗರ ಕಚ್ಚಲು
ಗಳಿಗಳಿಗೆಗೆ ಜಗತ್ತು ಬದಲಾವಣೆ ಪಡುವಾಗ, ಬಸ್ಸಿನ ಬಾಜಾರಿನ
ರೈಲ್ವೆಯ ರೇಟುಗಳು ಮುಗಿಲ ಮುಟ್ಟಿರುವಾಗ ನಮ್ಮದು
ಮೊದಲಿನಷ್ಟೇ ಇರಲಿ ಎನ್ನುವುದು ಯಾವನ್ಯಾಯ ಹೇಳಿ!
ಇದರ ವಿರುದ್ಧ ಹರತಾಳ ಹೂಡಬೇಕೆಂದರೆ ರಾತ್ರಿಯಲ್ಲಿ ಗಿರಾಕಿ
ಗಳಿಗಾಗಿ ಎಚ್ಚರವಿದ್ದು ಹಗಲೆಲ್ಲ ಮಲಗುವ ಡ್ಯೂಟಿ
ಇಟ್ಟುಕೊಂಡಿರುವ ನಮ್ಮ ಸದಸ್ಯರಿಗೆ ಒಕ್ಕಟ್ಟು ಮಾಡುವ
ದಕ್ಕಾಗಿ ಸಮಯವೆಲ್ಲಿದೆ ಹೇಳಿ. ನಮ್ಮೆಲ್ಲರನ್ನು ಹತ್ತಿಕ್ಕಿದ್ದ
ಬಡತನ, ಹೊಟ್ಟೆಯುರಿ, ರಾಕ್ಷಸನಿಗಿಂತ ಅಕರಾಳ
ವಿಕರಾಳ ರೂಪಹೊಂದಿ ಕಾಡಿಸುತ್ತಿರುವಾಗ ಬಡವರೆಲ್ಲ
ಒಂದಾಗುವ ಮಾತು ಝುಳದ ನೀರಿಗಾಗಿ ಓಡಿ ಓಡಿ

ಹೋಗಿ ರಕ್ತಕಾರಿ ಬಿದ್ದು ಸತ್ತು ಹೋಗುವ ಸೊತ್ತು
ಎಲ್ಲರೂ ತಮ್ಮ ತಮ್ಮ ಸುಖವನ್ನು ನೋಡಿಕೊಳ್ಳುವಾಗ
ಯಾರು ಪರಿಹರಿಸುವರು ಬಂದ ನಮ್ಮ ಕುತ್ತು
ಎಲ್ಲರಂತೆ ಇವರೂ ಹುಟ್ಟುತ್ತಾರೆ ಉಸಿರುಬಿಡುತ್ತಾರೆ
ಆದರೆ ಬೆಳೆಯಬೇಕೆಂದರೆ ಬೆಳೆಯಲಾಗುವುದಿಲ್ಲ. ಸುಖದ
ಜೀವನ ಕಳೆಯಬೇಕೆಂದರೆ ಕಳೆಯುಲಾಗುವುದಿಲ್ಲ ಉಳಿದವರಿ
ಗಿರುವ ಆಸ್ತಿ, ಅಂತಸ್ತು, ಅವಕಾಶಗಳು ಇವರಿಗೆ
ಇರುವುದಿಲ್ಲ ಇದ್ದರದು ಕಣ್ಣಿರು ಹೊಳೆಯಲ್ಲಿ ಈಜುತ್ತ
ಬಾಳುವುದು, ಸಾಯುತ್ತ ಹಾಡುವುದಾಗಿರುವಾಗ ನೀರು
ಗೊಬ್ಬರವಿಲ್ಲದೆ, ಹವೆಬೆಳಕಿನ ಆಶ್ರಯವಿಲ್ಲದೆ ಬರೀ ನೆಲ
ದಲ್ಲಿ ಊರಿದ ಬೀಜ ಹೇಗಾದರೂ ಮೊಳಕೆಯೊಡೆಯುವುದು
ಮೊಳಕೆಯೊಡೆದರೂ ಹೇಗೆ ಸಸಿಯಾಗಿ ಮರವಾಗಿ ಬೆಳೆ
ನೀಡುವುದು ಈಗಿದ್ದುದು ಬರೀ ತನ್ನ ಶರೀರದೊಳಗಡೆ
ಹುಟ್ಟಿಕೊಂಡ ನಾನಾಗಹ್ಯಾತ್ ಗುಹ್ಯ ರೋಗಗಳನ್ನು
ದುರ್ಗಂಧವನ್ನು ವಿಕೃತ ರೂಪವನ್ನು
ನೋಡುತ್ತಾ ನಾರುತ್ತಾ ಸಾಯುವುದು ಇಲ್ಲಿ ತಪ್ಪುವುದಿಲ್ಲ
ಇಲ್ಲಿ ಇದೆಲ್ಲ ಏನೆಂದು ಕೇಳುವವರು ಹೇಳುವವರು
ಒಬ್ಬರೂ ಹುಟ್ಟುವುದಿಲ್ಲ
ನಮ್ಮ ಕೇರಿಗಳಲ್ಲಿ ಬರುವವರು ವಿಚಾರವುಳ್ಳವರು, ಮತಿಯುಳ್ಳವರು
ಮಾನವಂತರು ಆಗುವತನಕ ಸೂಳೆಯರ ಸಂತಾನ ಮುಗಿಯುವುದಿಲ್ಲ
ಸಂದಿಗೊಂದಿಗಳಲ್ಲಿ ಕತ್ತಲು ಸಂಧಿಯಲ್ಲಿ, ಕೆಂಪು ಕೇರಿಗಳಲ್ಲಿ ನರಳುವ

ಜೀವಿಗಳ ದುಃಖ ಹೋಗುವುದಿಲ್ಲ.

ಜಗತ್ತಿನಾದ್ಯಂತ ನಮ್ಮ ಕುರಿತಿರುವ ಕಾನೂನು ಕಥೆ

ರೀತಿ-ನೀತಿ ದೃಷ್ಟಿಗಳು ನೋಡಿದರೆ ಅವು ನಮ್ಮ ವಂಶ

ಮುಂದುವರೆದುಕೊಂಡು ಬರುವುದನ್ನೇ ತಿಳಿಸುವವು

ಹೊರತು ನಾನು ಇದರಿಂದ ಉಳಿಯುವುದನ್ನು ಬೆಳೆಯುವುದನ್ನು

ಹೇಳುವುದಿಲ್ಲ, ಬಾಳಿಸುವುದಿಲ್ಲ, ಎಳೆಸುವುದಿಲ್ಲ.

೩.೨. ಲೈಂಗಿಕ ಕಾರ್ಯಕರ್ತೆಯರ ಸಮಸ್ಯೆಗಳಿಗೆ ಪರಿಹಾರ ಕ್ರಮಗಳು

ಕಾನೂನು ಕ್ರಮಗಳು

ಲೈಂಗಿಕ ಕಾರ್ಯಕರ್ತೆಯರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅವರ ರಕ್ಷಣೆಗಾಗಿ ಹಾಗೂ ವೇಶ್ಯಾವೃತ್ತಿಯನ್ನು ತಡೆಯಲು ಮೊಟ್ಟಮೊದಲ ಬಾರಿಗೆ ೧೯೨೩ರಲ್ಲಿಯೋ ಬಾಂಬೆ ಪ್ರಿವೆನ್ಷನ್ ಆಫ್ ಪ್ರಿಸ್ಟಿಟ್ಯೂಷನ್ ಆ್ಯಕ್ಟ್‌ನ್ನು ಜಾರಿಗೆ ತಂದಿತು. ಮೈಸೂರು ಸಂಸ್ಥಾನದಲ್ಲಿ ವೇಶ್ಯಾವೃತ್ತಿಗೆ ಪೂರಕವಾಗಿದ್ದ ಧಾರ್ಮಿಕ ಪದ್ಧತಿಗಳಾದ ದೇವದಾಸಿ ಮತ್ತು ಗೆಜ್ಜೆ ಪೂಜೆ ಪದ್ಧತಿಗಳನ್ನು ೧೯೦೯-೧೦ರಲ್ಲಿಯೂ ನಿಷೇಧಿಸಲಾಯಿತು. ಧರ್ಮದ ಹೆಸರಿನಲ್ಲಿ ವೇಶ್ಯಾವೃತ್ತಿಗೆ ಬಲಿಯಾಗುವ ಮಹಿಳೆಯರನ್ನು ರಕ್ಷಿಸುವ ಸಲುವಾಗಿ 'ದಿ ಬಾಂಬೆ ದೇವದಾಸಿ ಪ್ರೊಟೆಕ್ಷನ್ ಆಕ್ಟ್ (೧೯೩೪)' ಮತ್ತು ಯು.ಪಿ. ನಾಯಕ ಗರ್ಲ್ಸ್ ಪ್ರೊಟೆಕ್ಷನ್ ಆ್ಯಕ್ಟ್‌ನಂತಹ ಕಾನೂನುಗಳು ಜಾರಿಗೊಂಡವು.

೧೯೫೬ರಲ್ಲಿ ಸಪ್ರೆಷನ್ ಆಫ್ ಇಮ್ಮಾರಲ್ ಟ್ರ್ಯಾಫಿಕ್ ಆ್ಯಕ್ಟ್ ರೂಪುಗೊಂಡಿತು. ಇದು ವೇಶ್ಯಾವೃತ್ತಿಯಲ್ಲಿ ವರಮಾನದಿಂದ ಬೇರೆಯವರು ಆದಾಯ ಗಳಿಸುವುದು ಶಿಕ್ಷಾರ್ಹ ಅಪರಾಧವೆಂದು ಹೇಳಿದೆ. ಈ ಕಾಯ್ದೆಗೆ ೧೯೭೮ ಹಾಗೂ ೧೯೮೬ರಲ್ಲಿ Pita (ಪೀಠ) ತಿದ್ದುಪಡಿಗಳನ್ನು ತಂದು ವೇಶ್ಯೆಯರೊಂದಿಗೆ ಅದರಲ್ಲಿ ತೊಡಗುವ ಪುರುಷರು ಕಾನೂನು ಕ್ರಮ ಎದುರಿಸಬೇಕು ಎಂದು ಹೇಳಿದ.

ITPPA (Immoral Traffic in Persons and Prevention Act) ಕಾಯ್ದೆಯ ಪ್ರಕಾರ ಕನಿಷ್ಠ ೭ ವರ್ಷದಿಂದ ೧೪ ವರ್ಷದವರೆಗೆ ಇಲ್ಲವೆ ಜೀವಾವಧಿ ಶಿಕ್ಷೆ ಕೊಡಬಹುದು. ಮನುಷ್ಯ ಮಾರಾಟ ಹಾಗೂ ಲೈಂಗಿಕ ಶೋಷಣೆಯನ್ನು ಹತ್ತಿಕ್ಕುವುದು, ಇತರ ಶೋಷಣೆ ಹಾಗೂ

ನಿಂದನೆಗಳು ಈ ಕಾಯ್ದೆಯ ಪ್ರಕಾರ ಅಪರಾಧ. ಲೈಂಗಿಕ ವೃತ್ತಿಯಲ್ಲಿ ಮಹಿಳೆಯರನ್ನು ಮಾಡುವುದನ್ನು ಮತ್ತು ಲೈಂಗಿಕ ದುರ್ಬಳಕೆಯನ್ನು ತಡೆಯುವುದು ITPPA ಕಾಯ್ದೆಯ ಉದ್ದೇಶಗಳಾಗಿವೆ.

೧೯೫೮ರಲ್ಲಿ ಅನುಷ್ಠಾನಕ್ಕೆ ಬಂದ ಸೀತಾ ಕಾಯ್ದೆಯ ಒತ್ತಾಯದಿಂದ ಭಾಗಿಯಾದ ಮಹಿಳಾ ವೇಶ್ಯೆಯರ ನೀರ್ಮೂಲನೆಗೆ ಸಾಕಷ್ಟು ಪ್ರಯತ್ನಿಸಿತು. ಆದರೆ ಹಣಕ್ಕಾಗಿ ಅಥವಾ ಖಾಸಗಿಯಾಗಿ ಭಾಗಿಯಾಗಿರುವ ವೃತ್ತಿನಿರತ ಮಹಿಳೆಯರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ವಿಫಲವಾಯಿತು. ಈ ಕಾಯ್ದೆ ಮಹಿಳೆಯ ಮೇಲೆ ದಂಡ ವಿಧಿಸುತ್ತದೆ. ವಿನಃ ಪುರುಷ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಆದ್ದರಿಂದ ಈ ಸೀತಾ ಕಾಯ್ದೆಯು ಲೈಂಗಿಕ ವೃತ್ತಿಯಲ್ಲಿ ತೊಡಗಿದ ಮಹಿಳೆಯರನ್ನು ನಿರ್ಮೂಲನೆ ಮಾಡಲು ವಿಫಲವಾಯಿತು. ಆದ್ದರಿಂದ ೧೯೮೬ರಲ್ಲಿ ITPPA ಕಾಯ್ದೆ ಜಾರಿಗೆ ಬಂದಿತು. ಅಲ್ಲದೆ ೧೯೫೬ ಮತ್ತು ೧೯೮೬ರ ಕಾಯ್ದೆಗೆ ತಿದ್ದುಪಡೆಗಳನ್ನು ತರುವುದರ ಮೂಲಕ ಕಾನೂನನ್ನು ಮಹಿಳೆ ಮತ್ತು ಪುರುಷ ಇಬ್ಬರಿಗೂ ಸಾಮಾನ್ಯವಾಗಿ ಶಿಕ್ಷೆಯನ್ನು ಉಗ್ರಗೊಳಿಸಲಾಗಿದೆ.

ಕರ್ನಾಟಕ ಪೋಲಿಸ್ ಇಲಾಖೆ ೨೦೦೧ರಿಂದ ಇಮ್ಮೋರಲ್ ಟ್ರಾಫಿರೆಂಗ್ (ಪ್ರಿವನ್ಷನ್) ಆಕ್ಟ್ ೧೯೬೫ ಐ.ಟಿ.ಪಿ. ಕಾಯ್ದೆಯ ಸೆಕ್ಸ್‌ನ್ ಲನ್ನು ಸ್ತ್ರೀಯರವನ್ನು ಕಳ್ಳಸಾಗಣೆ ಮಾಡುವವರ, ದಲ್ಲಾಳಿಗಳ, ವೇಶ್ಯಾವಾಟಿಕೆಯ ಒಡೆಯ ಒಡತಿಯರ, ಹೆಣ್ಣುಗಳ ದುಡಿತದಿಂದ ಹಣಗಳಿಸುತ್ತಿರುವವರ ವಿರುದ್ಧ ಉಪಯೋಗಿಸಬೇಕು ಎಂದು ಪೋಲಿಸ್ ಇಲಾಖೆ ಆದೇಶ ಹೊರಡಿಸಿದೆ.

ವೇಶ್ಯಾವೃತ್ತಿ ೧೯೮೬ರಲ್ಲಿ ಅನೈತಿಕ ವ್ಯಾಪಾರ ನಿರ್ಬಂಧಕ ಕಾನೂನೆಂದು ಅಂಗೀಕರಿಸ ಲಾಯಿತು. ಇದು ವೇಶ್ಯಾವ್ಯಾಪರವನ್ನು ನಿಷೇಧಿಸಿದೆ. ವ್ಯಭಿಚಾರಕ್ಕೆ ಒಡ್ಡುವ ಜನರನ್ನು ಕಠಿಣ ಕ್ರಮಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದೆ ಮತ್ತು ಅಂತಹವರಿಗೆ ೭ ವರ್ಷಗಳ ಘೋರವಾದ ಕಾರವಾಸ ಶಿಕ್ಷೆಯನ್ನು ನೀಡಲು ಸೂಚಿಸಿದೆ.

ಭಾರತದ ದಂಡ ಸಂಹಿತೆಯ ೩೭೨ ಮತ್ತು ೩೭೩ನೇ ವಿಧಿಗಳು ಅಪರಾಧ ಪ್ರಕ್ರಿಯೆ ಸಂಹಿತೆಯ ೫೫೨ನೆಯ ವಿಧಿ ಹಾಗೂ ಅನೇಕ ಆರಕ್ಷಕ ಮತ್ತು ಪುರಸಭಾ ಕಾಯ್ದೆಗಳು ವೇಶ್ಯಾವೃತ್ತಿಯ ನಿವಾರಣೆಗೆ ಪ್ರಯತ್ನಿಸುತ್ತಿವೆ. ಸ್ತ್ರೀಯರ ಮಾನವನ್ನು ಕಾಪಾಡುವ ಹಾಗೂ ಅವರನ್ನು ಅನೈತಿಕ ಲೈಂಗಿಕ ಕ್ರಿಯೆಗಳಲ್ಲಿ ತೊಡಗಿಸುವುದನ್ನು ತಡೆಯುವ ಉದ್ದೇಶವನ್ನು ಹೊಂದಿದೆ.

೩೬೬ನೇ ವಿಧಿ ಪ್ರಕಾರ ಹುಡುಗಿಯರನ್ನು ಅಪಹರಿಸಿ ಅನೈತಿಕ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿರುವುದಕ್ಕೆ ೧೦ ವರ್ಷ ಸಜೆ ಅಥವಾ ದಂಡ ಎರಡನ್ನು ವಿಧಿಸಲಾಗುವುದು. ೪೯೮ನೇ ಸೆಕ್ಸನ್ ಪ್ರಕಾರ ಯಾವುದೇ ಸ್ತ್ರೀ ಅನೈತಿಕ ವ್ಯವಹಾರಗಳಿಗೆ ಭಾಗಿಯಾಗಿದ್ದರೆ ೨ ವರ್ಷಗಳ ಸೆರೆಮನೆವಾಸ ಇಲ್ಲವೆ ದಂಡ ಅಥವಾ ಎರಡನ್ನು ವಿಧಿಸಬಹುದಾಗಿದೆ.

೧೯೫೬ರ ಸ್ತ್ರೀಯರ ಹಾಗು ಹುಡುಗಿಯರ ಅನೈತಿಕ ವ್ಯವಹಾರ ನಿಗ್ರಹಣ ವೇಶ್ಯಾವೃತ್ತಿಗಾಗಿ ಕೊಳ್ಳುವುದು, ಮಾರುವುದನ್ನು ಶಿಕ್ಷಾರ್ಹ ಅಪರಾಧಗಳೆಂದು ಪರಿಗಣಿಸಿದೆ. ನ್ಯಾಯಾಧೀಶರು ವೇಶ್ಯೆಯರನ್ನು, ವೇಶ್ಯಾಗೃಹ ನಿರ್ವಾಹಕರನ್ನು ವೇಶ್ಯೆಯರನ್ನು ಇಟ್ಟುಕೊಂಡಿರುವವರನ್ನು, ತಲೆಹಿಡುಕರನ್ನು ಶಿಕ್ಷಿಸಬಹುದು.

ಪುನರ್ವಸತೀಕರಣ ಹಾಗೂ ರಕ್ಷಣಾತ್ಮಕ ಕ್ರಮಗಳು

ಕೇವಲ ಕಾನೂನಿಂದಲೇ ವೇಶ್ಯಾವೃತ್ತಿಯನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಕಾನೂನಿಂದ ನುಸುಳಿಕೊಳ್ಳುವವರನ್ನು ಪುನರ್ವಸತಿ ಹಾಗೂ ರಕ್ಷಣಾ ಕ್ರಮಗಳಿಂದ ಸುಧಾರಿಸಬಹುದು. ಸಾಮಾಜಿಕ ಹಾಗೂ ನೈತಿಕ ನೆರ್ಮಲ್ಯದ ಸಲಹಾಸಮಿತಿ, ಯೋಜನಾ ಸಲಹಾಸಮಿತಿ, ಕೇಂದ್ರ ಸಮಾಜ ಕಲ್ಯಾಣ ಮಂಡಳಿ, ಈ ಸಮಿತಿಗಳ ಶಿಫಾರಸುಗಳನ್ನಾಧರಿಸಿ ರಕ್ಷಣಾ ಗೃಹಗಳು, ರಾಜ್ಯದ ಮಹಿಳೆಯರ ಗೃಹಗಳು, ಪ್ರತಿಪ್ರೇಕ್ಷಣ ಗೃಹಗಳು, ಜಾಗರೂಕ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅಷ್ಟೇ ಅಲ್ಲದೆ ರಾಜ್ಯದ ಮೇಲ್ವಿಚಾರಣೆಯಲ್ಲಿ ಖಾಸಗಿ ಸಂಸ್ಥೆಗಳು ನಡೆಸುತ್ತಿವೆ. ಇವುಗಳು ಹಲವು ಒತ್ತಡಗಳಿಗೆ ಬಲಿಯಾಗಿ ಲೈಂಗಿಕ ವೃತ್ತಿನಿರತ ಮಹಿಳೆಯರಿಗೆ ರಕ್ಷಣೆ ನೀಡುತ್ತವೆ.

"ಪುನರ್ವಸತಿ ಮತ್ತು ನೈತಿಕ ಆರೋಗ್ಯ ಸಲಹಾ ಸಮಿತಿ" ಶ್ರೀಮತಿ ಧನ್ವಂತರಿ ರಾಮರಾವ್ ಅವರ ಅಧ್ಯಕ್ಷತೆಯಲ್ಲಿ ೧೯೫೪ರಲ್ಲಿ ನೇಮಿಸಲ್ಪಟ್ಟಿತು. ಈ ಸಮಿತಿಯು ವೇಶ್ಯಾವಾಟಿಕೆಯಲ್ಲಿ ತೊಡಗಿರುವ ಸ್ತ್ರೀಯರು ಮತ್ತು ಹುಡುಗಿಯರು ರಕ್ಷಣೆಗೆ ಯಾರೆ ವ್ಯಕ್ತಿಯಾಗಲೀ, ಸಂಸ್ಥೆಯಾಗಲೀ ಮುಂದೆ ಬರಬಾರದು. ವೇಶ್ಯಾವಾಟಿಕೆಗೆ ಸಂಬಂಧಿಸಿದವರೆಲ್ಲರನ್ನು ನಿರ್ದಾಕ್ಷಣ್ಯವಾಗಿ ಕಾನೂನಿಗೊಪ್ಪಿಸಬೇಕು. ವೇಶ್ಯೆಯರು ಪುನರ್ವಸತಿಗಾಗಿ ನೈತಿಕ ಅಪಾಯಕ್ಕೊಳಗಾಗಿರುವ ಮಹಿಳೆಯರ "ಪ್ರಾದೇಶಿಕ ಮಹಿಳಾ ಸಂಸ್ಥೆಗಳು ಮತ್ತು ರಿಮಾಂಡ್ ಹೋಂ"ಗಳನ್ನು ಸ್ಥಾಪಿಸಬೇಕು. ಸಮಾಜ ಕಾರ್ಯಕರ್ತೆಯರು, ಸಮಾಜ ಸುಧಾರಕರು ಸ್ವಯಂ ಸೇವಾ ಕಾರ್ಯಕರ್ತರನ್ನೊಳಗೊಂಡ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕು.

ಮಾತ್ರವಲ್ಲದೆ ಮಾನವೀಯ ದೃಷ್ಟಿಯಿಂದ ಪರಿಗಣಿಸುವಂತಿರಬೇಕು ಎಂದು ಹಲವಾರು ವಿಚಾರಗಳನ್ನು ಶಿಫಾರಸ್ಸು ಮಾಡಿದೆ.

ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತ್ತಿ ಸಮಸ್ಯೆಯ ವಾಸ್ತವಿಕತೆಯನ್ನು ಮನಗಾಣಲಾಗಿದ್ದು, ಅದನ್ನು ಸುಧಾರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲು ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ದ್ವಿತಿಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಇಡೀ ರಾಷ್ಟ್ರಾದ್ಯಂತ ೮೦ ಸಂರಕ್ಷಣಾ ಗೃಹಗಳನ್ನು ೩೨೪ ಜಿಲ್ಲೆಗಳಲ್ಲಿ ರಕ್ಷಣಾ ಗೃಹಗಳನ್ನು ತೆರೆಯಲು ವಿಶೇಷ ರೀತಿಯಲ್ಲಿ ವ್ಯವಸ್ಥೆ ಮಾಡಲಾಯಿತು.

ವೇಶ್ಯೆಯರಿಗೆ ಹಲವಾರು ಉದ್ಯೋಗಗಳಲ್ಲಿ ತರಬೇತಿ ಕೊಟ್ಟು ಗೌರವಾನ್ವಿತ ರೀತಿಯಲ್ಲಿ ಜೀವನ ನಡೆಸಲು ಪ್ರೋತ್ಸಾಹಿಸಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ೨೦೦೮-೦೯ನೇ ವರ್ಷದಲ್ಲಿ ದೇವದಾಸಿಯರ ಅಭಿವೃದ್ಧಿಗಾಗಿ, ಪುನರ್ವಸತಿ ಕಾರ್ಯಗಳ ಹೆಸರಿನಲ್ಲಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ ದೇವದಾಸಿ ವೃತ್ತಿ ತೊರೆದವರಿಗೆ ರೂ. ೪೦೦.೦೦ ಗೌರವಧನ, ೧೯೩೨ ಮನೆಗಳು ಮಂಜೂರು ಮಾಡಿದೆ. ದೇವದಾಸಿಯರನ್ನು ವಿವಾಹವಾಗುವವರಿಗೆ ತಲಾ ರೂ.೧೦,೦೦೦.೦೦ಗಳನ್ನು ಜಿಲ್ಲಾ ಪಂಚಾಯಿತಿಯಿಂದ ಪ್ರೋತ್ಸಾಹ ಧನವಾಗಿ ನೀಡಲಾಗುತ್ತಿದೆ.

ಲೈಂಗಿಕ ವೃತ್ತಿ ನಿರತ ಮಹಿಳೆಯರ ಪುನರ್ವಸತೀಕರಣಕ್ಕಾಗಿ ಕರ್ನಾಟಕದಲ್ಲಿ ಹಲವಾರು ಸಂಸ್ಥೆಗಳು ಅಸ್ತಿತ್ವಕ್ಕೆ ಬಂದು ಅವರ ಏಳಿಗೆಗಾಗಿ ಮತ್ತು ಆರೋಗ್ಯ ಮಟ್ಟವನ್ನು ಕಾಪಾಡುವಲ್ಲಿ ಹಾಗೂ ಲೈಂಗಿಕ ಕಾರ್ಯಕರ್ತೆಯರಿಗೆ ಸಮುದಾಯದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿ ಇವರನ್ನು ಪುನರ್ವಸತೀಕರಣಗೊಳಿಸಲಾಗುತ್ತದೆ. ಹೀಗೆ ಹಲವಾರು ಕಾನೂನು ಕ್ರಮಗಳನ್ನು ಜಾರಿಗೆ ತರಲಾಗಿದೆ.

೧. ದೇವದಾಸಿ ಪುನರ್ವಸತಿ ಸಂಘವು ೧೯೨೮ರಲ್ಲಿ ಸ್ಥಾಪನೆಯಾಯಿತು. ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮತ್ತು ಅವರಲ್ಲಿನ ಮೌಢ್ಯತೆಯನ್ನು ಹೋಗಲಾಡಿಸುವುದು ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ.

೨. ಕರ್ನಾಟಕ ಆರೋಗ್ಯ ಸಂವರ್ಧನ ಪ್ರತಿಷ್ಠಾನ ಸಂಸ್ಥೆಯ ಸಹಭಾಗಿಯೊಂದಿಗೆ ಹಲವಾರು ಸ್ವಯಂ ಸಂಸ್ಥೆಗಳಾದ ಏಕ್ಷನ್, ಎಡ್ಸ್, ಬರ್ಡ್ಸ್ ಮೈರಾಡ್, ಸಂರಕ್ಷ ಸುರಕ್ಷ ಮತ್ತು ಇತ್ತೀಚೆಗೆ ಸ್ವಸ್ಥಿ ಮತ್ತು ಸ್ವಾತಿ, ಸೌಖ್ಯ ಮೈರಾಡ್ ಮುಂತಾದ ಸ್ವಯಂ ಸಂಘಸಂಸ್ಥೆಗಳು ಎಚ್.ಐ.ವಿ./ಏಡ್ಸ್ ನಿಯಂತ್ರಣಗೋಸ್ಕರ ಲೈಂಗಿಕ ಕಾರ್ಯಕರ್ತೆಯರನ್ನು ಪುನರ್ವಸತಿ ಕಾರ್ಯನಿರ್ವಹಿಸುತ್ತಿವೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಸೌಖ್ಯ ಮೈರಾಡ್ ಮತ್ತು ಕೆ.ಎಚ್.ಪಿ.ಟಿ.ವಿ. ಕರ್ನಾಟಕದಲ್ಲಿ ಸಂಕಲ್ಪ ಎಂಬ ಯೋಜನೆಯು ಲೈಂಗಿಕ ಕಾರ್ಯಕರ್ತೆಯರೊಂದಿಗೆ ಹಲವು ಯೋಜನೆಗಳ ಮೂಲಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಎಚ್.ಐ.ವಿ./ಏಡ್ಸ್ ಜಾಗೃತಿ ಮೂಡಿಸುವಲ್ಲಿ ಕಾಂಡೋಮ್ ವಿತರಣೆಯಲ್ಲಿ ವಿವಿಧ ಚಿಕಿತ್ಸೆ ನೀಡುವಲ್ಲಿ, ಅವರನ್ನು ಸಮುದಾಯದ ಭಾಗವಹಿಸುವಿಕೆಯ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಲೈಂಗಿಕ ಕಾರ್ಯಕರ್ತೆಯರಲ್ಲಿನ ಕಳಂಕ/ತಾರತಮ್ಯ ಭಾವನೆಯನ್ನು ಹೋಗಲಾಡಿಸಲು ಹಾಗೂ ಪುನರ್ವಸತಿಗೊಳಿಸುವಲ್ಲಿ ಈ ಯೋಜನೆಗಳು ಗುಲ್ಬರ್ಗಾ ಜಿಲ್ಲೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಕಾರ್ಯನಿರ್ವಹಿಸುತ್ತಿವೆ.

೩.೩. ಲೈಂಗಿಕ ಕಾರ್ಯಕರ್ತೆಯರ ಸಮಸ್ಯೆಗಳಿಗೆ ಮೈರಾಡ ಮತ್ತು ಕೆ.ಎಚ್.ಪಿ.ಟಿ. ಸಂಸ್ಥೆಗಳು ತೆಗೆದುಕೊಂಡ ಕ್ರಮಗಳು

ಗುಲ್ಬರ್ಗಾ ಜಿಲ್ಲೆಯಲ್ಲಿ ಲೈಂಗಿಕ ಕಾರ್ಯಕರ್ತೆಯರ ಸಮಸ್ಯೆ ಹಾಗೂ ಅವುಗಳಿಗೆ ಪರಿಹಾರ ಕುರಿತು ಅನೇಕ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಶ್ರಮಿಸುತ್ತಿರುವ ಎರಡು ಪ್ರಮುಖ ಸಂಸ್ಥೆಗಳೆಂದರೆ ಸೌಖ್ಯ ಮೈರಾಡ ಮತ್ತು ಕೆ.ಎಚ್.ಪಿ.ಟಿ. ಕರ್ನಾಟಕ ಆರೋಗ್ಯ ಸಂವರ್ಧನೆ ಪ್ರತಿಷ್ಠಾನ ಎಂದು ಹೇಳಬಹುದು.

ಸೌಖ್ಯ ಮೈರಾಡ ಸಂಸ್ಥೆಯು ಲೈಂಗಿಕ ವೃತ್ತಿನಿರತ ಮಹಿಳೆಯರ ಆರೋಗ್ಯ ಸಮಸ್ಯೆಗಳ ಕುರಿತು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಅವರಿಗೆ ಸೂಕ್ತ ರೀತಿಯಲ್ಲಿ ಸಲಹೆ, ಸೂಚನೆ, ಮಾರ್ಗದರ್ಶನಗಳೊಂದಿಗೆ ಅನೇಕ ಆರೋಗ್ಯಕರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

* ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಿದೆ ಮತ್ತು ಲೈಂಗಿಕ ಕಾರ್ಯಕರ್ತೆಯರ ಸಲುವಾಗಿ ಮಹಿಳಾ ವೈದ್ಯರನ್ನು ನೇಮಿಸಿದ್ದಾರೆ.
* ಲೈಂಗಿಕ ವೃತ್ತಿನಿರತ ಮಹಿಳೆಯರ ಆರೋಗ್ಯದ ಬಗ್ಗೆ ಅನುಮಾನ, ಸಂಕೋಚ, ಕಳಂಕ, ತಾರತಮ್ಯ ಭಾವವನ್ನು ಹೋಗಲಾಡಿಸಲು ಅವರಿಗೆ ಪುನರ್ವಸತಿ ಸಲುವಾಗಿ ಹಲವಾರು ಯೋಜನೆಗಳ ಸೌಲಭ್ಯಗಳನ್ನು ಒದಗಿಸುತ್ತಿದೆ.
* ಲೈಂಗಿಕ ಕಾರ್ಯಕರ್ತೆಯರ ಆರೋಗ್ಯವನ್ನು ಕಾಪಾಡುವಲ್ಲಿ ಎಚ್.ಐ.ವಿ./ಏಡ್ಸ್ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಚಿಕಿತ್ಸೆ ನೀಡುವುದು ಹಾಗೂ ಉಚಿತ ಕಾಂಡೋಮ ವಿತರಿಸುವುದು, ಲೈಂಗಿಕ ಕಾರ್ಯಕರ್ತರ ಸಲುವಾಗಿ ಮೈರಾಡ್ ಸಂಸ್ಥೆಯು ಜಾಗೃತ

ಶಿಬಿರಗಳು, ಉಪನ್ಯಾಸ ಕಾರ್ಯಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಪ್ರವಾಸ ಮಾಡುವುದು ಮುಂತಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ.

ಕೆ.ಎಚ್.ಪಿ.ಟಿ. ಸಂಸ್ಥೆಯು ಕೂಡ ಲೈಂಗಿಕ ಕಾರ್ಯಕರ್ತೆಯರ ಆರೋಗ್ಯವನ್ನು ಕಾಪಾಡುವುದು ಮತ್ತು ಅವರ ಸಮಸ್ಯೆಗಳ ಬಗ್ಗೆ ಜಾಗೃತಿ ಮಾಡಿಸುವುದು, ಹಲವಾರು ಉಚಿತ ಚಿಕಿತ್ಸೆ ನೀಡುವುದು, ಕಾಂಡೋಮಗಳನ್ನು ಒದಗಿಸುವುದು, ತಜ್ಞರಿಂದ ಉಪನ್ಯಾಸ ಕಾರ್ಯಗಳನ್ನು ಹಮ್ಮಿಕೊಳ್ಳುವುದು, ಹೀಗೆ ಹಲವು ಕಾರ್ಯಕ್ರಮಗಳ ಮೂಲಕ ಈ ಎರಡು ಸಂಸ್ಥೆಗಳು ಗುಲ್ಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯರ ಬದುಕಿನ ಹೊಸ ಆಶಾಕಿರಣವಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತವೆ ಎಂದು ಹೇಳಿದರೆ ತಪ್ಪಾಗಲಾರದು.

ವೇಶ್ಯಾವೃತ್ತಿ ನಿರ್ಮೂಲನೆ ಮಾಡಲು ಶಾಸನಗಳು ಹಾಗೂ ಸರ್ಕಾರ ಮತ್ತು ಸರ್ಕಾರೇತರ ಸಂಘ–ಸಂಸ್ಥೆಗಳು ಅನುಷ್ಠಾನಕ್ಕೆ ತಂದಿರುವ ಹಲವಾರು ಕಾರ್ಯಕ್ರಮಗಳು ಬಹಳಷ್ಟು ಉಪಯುಕ್ತವಾಗಿವೆ. ಆದರೂ ಕೂಡ ಲೈಂಗಿಕವೃತ್ತಿ ದೊಡ್ಡ ದೊಡ್ಡ ನಗರಗಳಲ್ಲಿ ಕೆಂಪು ದೀಪ ಪ್ರದೇಶಗಳಲ್ಲಿ ನಗ್ನ ನೃತ್ಯಗೈಯುತ್ತದೆ. ಇಡೀ ರಾಷ್ಟ್ರಾದ್ಯಂತ ಲೈಂಗಿಕ ವೃತ್ತಿ ಸಮಸ್ಯೆಯನ್ನು ನಿರ್ಮೂಲನೆ ಮಾಡಲು ಮತ್ತು ಆದಷ್ಟು ಕಡಿಮೆ ಮಾಡಲು ಇನ್ನೂ ಹೆಚ್ಚಿನ ಪ್ರಮಾಣದ ಕಟ್ಟುನಿಟ್ಟಿನ ಕ್ರಮಗಳು ಕೈಗೊಳ್ಳಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಲೈಂಗಿಕ ಕಾರ್ಯಕರ್ತೆಯರಿಗೆ ಅನೈತಿಕ ಲೈಂಗಿಕ ಸಂಪರ್ಕದಿಂದ ತಮ್ಮ ವ್ಯಕ್ತಿತ್ವ ಹಾಗೂ ಆರೋಗ್ಯ ಮತ್ತು ಸಮಾಜದ ಮೇಲೆ ಬೀರುವ ದುಷ್ಪರಿಣಾಮಗಳನ್ನು ಕುರಿತು ತಿಳುವಳಿಕೆ ನೀಡಲು ಅವರಿಗೆ ಲೈಂಗಿಕ ಶಿಕ್ಷಣವನ್ನು ಒದಗಿಸಬೇಕು. ಅಲ್ಲದೇ ಹೆಚ್ಚು ಉದ್ಯೋಗಾವಕಾಶಗಳನ್ನು ಒದಗಿಸಿಕೊಟ್ಟು ಅವರ ಬದುಕನ್ನು ಸುಧಾರಿಸಲು ಶ್ರಮಿಸಬೇಕು. ಲಿಂಗ ತಾರತಮ್ಯ, ಮೌಢ್ಯ ಸಂಪ್ರದಾಯಗಳು ಹೋಗಲಾಡಿಸಬೇಕು. ವೇಶ್ಯಾವೃತ್ತಿಯನ್ನು ನಿರ್ಮೂಲನೆ ಮಾಡಲು ಸರ್ಕಾರಗಳು ಜಾರಿಗೆ ತಂದ ಕಾನೂನುಗಳು, ಸೌಲಭ್ಯಗಳನ್ನು ಕುರಿತು ಜನಜಾಗೃತಿಯನ್ನು ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

೩.೪. ಅಧ್ಯಯನದ ಫಲಿತಾಂಶಗಳು

ಸಾಮಾಜಿಕ ಅವ್ಯವಸ್ಥೆಯ ಹಲವಾರು ಕಾರಣಗಳಿಂದ ಲೈಂಗಿಕ ವೃತ್ತಿ ಹೆಚ್ಚಾಗುತ್ತಿದೆ. ಕೌಟುಂಬಿಕ ವಿಘಟನೆ ಕಳೆದುಕೊಂಡವರು ಕಷ್ಟಪಟ್ಟು ದುಡಿಯಲು ಸಾಮರ್ಥ್ಯ ಇಲ್ಲದವರು, ಅಕ್ರಮ ಸಂತಾನವನ್ನು ಪಡೆದವರು, ವಿಧವೆಯರು, ಅವಿವಾಹಿತ ತಾಯಂದಿರು ಮಕ್ಕಳನ್ನು

ಸಾಕಲೆಂದು, ಹಣಕಾಸಿನ ಸನ್ನಿವೇಶ ಏರುಪೇರಾಗಿ ಕೂಡಲೇ ಹಣ ಸಂಪಾದಿಸುವ ದಾರಿ ಹುಡುಕುವ ಸಂದರ್ಭಗಳು ಮಹಿಳೆಯರನ್ನು ಲೈಂಗಿಕ ವೃತ್ತಿಗೆ ದೂಡಿವೆ ಎಂದು ಹೇಳಬಹುದು.

ಗುಲಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳು" (ಗುಲ್ಬರ್ಗಾ ನಗರ ಪ್ರದೇಶವನ್ನು ಅನುಲಕ್ಷಿಸಿ) ಎಂಬ ಎಂ.ಫಿಲ್. ಸಂಶೋಧನ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ೪೦ ಜನ ಲೈಂಗಿಕ ಕಾರ್ಯಕರ್ತೆಯರ ಮಹಿಳೆಯರ ಅಧ್ಯಯನದಿಂದ ಕಂಡು ಬಂದ ಫಲಿತಾಂಶಗಳು ಹೀಗಿವೆ.

* ಲೈಂಗಿಕ ವೃತ್ತಿಯಲ್ಲಿ ನಿರತರಾಗಿರುವ ಮಹಿಳೆಯರಲ್ಲಿ ೪೮% ರಷ್ಟು ೨೬ ರಿಂದ ೩೩ ವಯೋಮಾನದ ಮಹಿಳೆಯರಿದ್ದಾರೆ.

* ಪರಿಶಿಷ್ಟ ಜಾತಿ ಹಾಗೂ ಅಲ್ಪಸಂಖ್ಯಾತರ ಸಂಖ್ಯೆಯ ಮಹಿಳೆಯರು ೪೪% ರಷ್ಟು ಪರಿಶಿಷ್ಟ ಪಂಗಡ ಇದ್ದುದು ಕಂಡು ಬರುತ್ತದೆ.

* ಬಡತನ, ದೇವದಾಸಿ, ವಿಧವೆ ಮುಂತಾದ ಕಾರಣಗಳು ಹಾಗೂ ಗಂಡನಿಂದ ತೊರೆಯಲ್ಪಟ್ಟವರು. ಅವಿವಾಹಿತರು, ವಿವಾಹಿತರು ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಂಡಿರುವುದು ತಿಳಿದಿದೆ.

* ಹೆಚ್ಚಿನ ಲೈಂಗಿಕ ಕಾರ್ಯಕರ್ತೆಯರು ಮನೆಯಲ್ಲಿಯೇ ತಮ್ಮ ವೃತ್ತಿಯನ್ನು ನಡೆಸುವುದನ್ನು ಕಂಡು ಬಂದಿತು.

* ೫೦ ರೂಪಾಯಿಯಿಂದ ಹಿಡಿದು ೫೦೦ಕ್ಕೂ ಹೆಚ್ಚು ಲೈಂಗಿಕ ವೃತ್ತಿನಿಂದ ಹಣ ಸಂಪಾದಿಸುತ್ತಿರುವುದು ತಿಳಿದು ಬಂದಿದೆ.

* ಸೌಖ್ಯಮೈರಾಡ ಹಾಗೂ ಕೆ.ಎಚ್.ಪಿ.ಟಿ. ಪ್ರಭಾವದಿಂದ ಲೈಂಗಿಕ ಕಾರ್ಯಕರ್ತೆಯರು ತಮಗೆ ಬರುವ ಹಲವಾರು ರೋಗಗಳ ಬಗ್ಗೆ ಅರಿವು ಮೂಡಿದೆ.

* ಈ ಮಹಿಳೆಯರು ತಮ್ಮ ಲೈಂಗಿಕ ಸಮಸ್ಯೆಗಳಲ್ಲಿ ೧೦೦ರಲ್ಲಿ ೪೦%ರಷ್ಟು ಮೈರಾಡ್ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

* ೭೨%ರಷ್ಟು ಮಹಿಳೆಯರು ಹಿಂದೂ ಧರ್ಮದವರು ಹಾಗೂ ೨೮%ರಷ್ಟು ಮಹಿಳೆಯರು ಮುಸ್ಲಿಂ ಧರ್ಮದವರು ವೇಶ್ಯಾವೃತ್ತಿಯಲ್ಲಿ ತೊಡಗಿರುವುದು ಕಂಡು ಬರುತ್ತದೆ.

ಅಡಿಟಿಪ್ಪಣಿಗಳು

೧. ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಡಾ. ಎಂ. ಉಷಾ, ಪು. ೧೧೯.

೨. ಸಾಮಾಜಿಕ ಸಮಸ್ಯೆಗಳು, ಪ್ರೊ. ನಾರಾಯಣ , ಪು. ೩೯೪.

೩. ಮಹಿಳೆ ಬಿಡುಗಡೆಯ ಹಾದಿಯಲ್ಲಿ ಪು. ೧೨೪-೧೪೫.

೪. ಸಿಮೋನ್ ದ ಬೋವಾ ದ ಸೆಕೆಂಡ್ ಸೆಕ್ಸ್ ಒಂದು ಕನ್ನಡ ಓದು, ಡಾ.ಎಚ್.ಎಸ್.ಶ್ರೀಮತಿ, ಪುಟ, ೫೯೭–೫೯೮.

ಅಧ್ಯಾಯ ೪

ಲೈಂಗಿಕ ಕಾರ್ಯಕರ್ತೆಯರ ಜೀವನ ವೃತ್ತಾಂತಗಳು

ಲೈಂಗಿಕ ಕಾರ್ಯಕರ್ತೆಯರ ಜೀವನ ವೃತ್ತಾಂತಗಳು

ಎಂ.ಫಿಲ್. ಸಂಶೋಧನಾ ಅಧ್ಯಯನಕ್ಕೆ ಅಧ್ಯಯನ ಮಾಡಿದ ಲೈಂಗಿಕ ಕಾರ್ಯಕರ್ತೆಯರಲ್ಲಿ ೪ ಜನ ಮಹಿಳೆಯರ ಜೀವನ ವೃತ್ತಾಂತವನ್ನು ವಿವರಿಸಲಾಗಿದೆ. ಇವರು ಲೈಂಗಿಕ ವೃತ್ತಿಗೆ ಬರಲು ಕಾರಣವಾದ ಪರಿಸ್ಥಿತಿ ಮತ್ತು ಈಗಿನ ಪರಿಸ್ಥಿತಿ ಕುರಿತು ವೃತ್ತಾಂತಗಳಲ್ಲಿ ತಿಳಿಸಲಾಗಿದೆ.

೧. ನಾಗರತ್ನ (ಹೆಸರು ಬದಲಾಯಿಸಲಾಗಿದೆ)

ನಾಗರತ್ನ ೨೨ ವಯಸ್ಸಿನ ಯುವತಿ. ತಂದೆ ಕೂಲಿ-ನಾಲಿ ಮಾಡುತ್ತಾನೆ. ತಾಯಿ ಮನೆಗೆಲಸ ಇಬ್ಬರು ಅಕ್ಕಂದಿರು, ಇಬ್ಬರು ತಮ್ಮಂದಿರು ಇದ್ದಾರೆ. ಊರಲ್ಲಿ ೧೦ನೇ ತರಗತಿ ಪಾಸಾದ ನಂತರ ಕಾಲೇಜು ಮಾಡಲು ಇಲ್ಲಿಗೆ ಬಂದೆ. ಆದರೆ ನನಗೆ ದುಡ್ಡಿನ ಅಡಚಣೆ ಬಹಳಷ್ಟು ಕಾಡುತಿತ್ತು. ಮನೆಯಲ್ಲಿ ಕೇಳಿದರೆ ಕಾಲೇಜು ಓದುವುದು ಬೇಡ, ನಿನಗೆ ಕಲಿಸುವ ಶಕ್ತಿ ನಮಗಿಲ್ಲ ಎಂದು ಹೇಳುತ್ತಿದ್ದರು. ಮುಂದೆ ನನ್ನ ಬಾಡಿಗೆ ರೂಮಿನ ಹತ್ತಿರ ಇಬ್ಬರು ಸ್ನೇಹಿತರು ಪರಿಚಯವಾದರು. ತಿಳಿದೋ ತಿಳಿಯದೋ ಅವರ ಜೊತೆ ಲೈಂಗಿಕ ಸಂಬಂಧ ಹೊಂದಿದೆ. ಅವರು ಅದಕ್ಕೆ ರೂ ೫,೦೦೦ ಖರ್ಚಿಗಾಗಿ ಕೊಟ್ಟು ಹೋದರು. ಇಲ್ಲಿ ನನಗೆ ಹೇಳುವವರು, ಕೇಳುವವರು ಯಾರೂ ಇರಲಿಲ್ಲ. ಆರಾಮವಾಗಿ ವೇಶ್ಯಾವಾಟಿಕೆ ಮಾಡಿ ಹಣ ಗಳಿಸಬಹುದು ಎಂದು ಯೋಚಿಸಿದೆ. ಈ ಯೋಚನೆ ಆ ಸ್ನೇಹಿತರಿಗೆ ತಿಳಿಸಿದೆ ಮುಂದೆ ಅವರೆ ಗಿರಾಕಿಗಳನ್ನು ಕರೆದುಕೊಂಡು ಬರಲು ಪ್ರಾರಂಭಿಸಿದರು. ಅಲ್ಲದೆ ಗಿರಾಕಿಗಳು ಇದ್ದ ಹೊಟೇಲ್ ಮತ್ತು ಲಾಡ್ಜ್‌ಗಳಲ್ಲಿ ನಾನು ಹೋಗಿ ಬರಲು ಶುರು ಮಾಡಿದೆ. ಹೀಗೆ ನನ್ನ ವೃತ್ತಿ ಪ್ರಾರಂಭವಾಯಿತು ಎಂದು ಹೇಳುತ್ತಾಳೆ. ಲಾಡ್ಜ್‌ವೊಂದರಲ್ಲಿ ವೇಶ್ಯಾವಾಟಿಕೆಯಲ್ಲಿ ತೊಡಗಿದ ಯುವಕನೊಂದಿಗೆ ಪೊಲೀಸ್‌ರ ಕೈಗೆ ಸಿಕ್ಕಿ ಬಿದ್ದಿದ್ದಾಳೆ ಮತ್ತು ಆಕೆಗೆ ಸಹಕರಿಸುತ್ತಿದ್ದ ಇಬ್ಬರನ್ನು ಬಂಧಿಸಿದ್ದಾರೆ. ಬಡತನ, ಯೌವ್ವನ ಕುಟುಂಬದ ಅಲಕ್ಷತನ, ದೈಹಿಕ ಆಕರ್ಷಣೆ

ಹಣ, ಆಕೆಯನ್ನು ವೇಶ್ಯಾವೃತ್ತಿಗೆ ಅಥವಾ ಲೈಂಗಿಕ ವೃತ್ತಿಗೆ ತೊಡಗಲು ಪ್ರೇರಕವಾದ ಅಂಶಗಳಾದವು.

೨. ಮಲಕಮ್ಮ (ಹೆಸರು ಬದಲಾಯಿಸಲಾಗಿದೆ) ಜೀವನ ವೃತ್ತಾಂತ

ಮಲಕಮ್ಮ ೩೬ ವರ್ಷದ ಮಹಿಳೆ. ವಿವಾಹವಾದ ನಂತರ ಲೈಂಗಿಕ ವೃತ್ತಿಯಲ್ಲಿ ನಿರತಳಾಗಿದ್ದಾಲೆ. ಹೀಗೆ ಚಿಕ್ಕ ವಯಸ್ಸಿನಲ್ಲಿರುವಾಗಲೇ ತಂದೆ-ತಾಯಿಯನ್ನು ಕಳೆದುಕೊಂಡ ನತದೃಷ್ಟೆ. ಸೋದರತ್ತೆಯ ಮನೆಯಲ್ಲಿದ್ದುಕೊಂಡು ೭ನೇ ತರಗತಿಯವರೆಗೆ ಶಿಕ್ಷಣವನ್ನು ಪಡೆದುಕೊಂಡಳು. ಇವಳು ವಯಸ್ಸಿಗೆ ಬಂದ ನಂತರ ಅವರ ಸೋದರತ್ತೆ ಮತ್ತು ಮಾವ ಮದುವೆ ಮಾಡಿಕೊಟ್ಟರು. ಒಂದು ದಿನ ಆಕೆಯ ಗಂಡನು ಮುಂಬೈಯಲ್ಲಿಯ ದರ್ಗಾವನ್ನು ತೋರಿಸಲು ಮಗುವನ್ನು ಅತ್ತೆಯ ಮನೆಯಲ್ಲಿ ಬಿಟ್ಟು ಹೆಂಡತಿಯನ್ನು ಮಾತ್ರ ಕರೆದುಕೊಂಡು ಹೋದನು. ಇವಳ ಮುಗ್ಧತೆಯನ್ನು ದುರುಪಯೋಗ ಮಾಡಿಕೊಂಡು ಇವಳಿಗೆ ಗೊತ್ತಾಗದಂತೆ ೪೫,೦೦೦ ರೂಪಾಯಿಗಳಿಗೆ ಒಬ್ಬ ಘರವಾಲಿಗೆ ಮಾರಿದನು. ಆಗ ಅವಳಿಗೆ ಈ ವಿಷಯ ಗೊತ್ತಾಗಿ ಹೋಗುವುದಿಲ್ಲ ಎಂದು ವಿರೋಧಿಸಿದರೂ ಅವರು ಬಿಡಲಿಲ್ಲ, ಅವರು ಅವಳನ್ನು ಕರೆದುಕೊಂಡು ಹೋದರು. ಅಲ್ಲಿನ ಸುತ್ತಮುತ್ತಲಿನ ವಾತಾವರಣವನ್ನು ಹಾಗೂ ಅಲ್ಲಿಗೆ ಬರುವ ಹೆಣ್ಣುಮಕ್ಕಳ ವರ್ತನೆ, ನಡುವಳಿಕೆಗಳನ್ನು ನೋಡಿ ಆಕೆ ಎಲ್ಲಿ ಬಂದಿದ್ದೇನೆ ಎನ್ನುವುದು ಕೂಡ ತಿಳಿಯದಂತಾಯಿತು. ಆಮೆಲೆ ಗೊತ್ತಾಯಿತು. ಅದು ಸೂಳೆಗಾರಿಕೆ ಮನೆಯೆಂದು. ಆ ವೃತ್ತಿಯಲ್ಲಿ ತೊಡಗಲು ಇಷ್ಟವರಿದಿದ್ದರೂ ಕೂಡ ಆಕೆಯ ಗಂಡನ ಮೋಸಕ್ಕೆ ಬಲಿಯಾಗಿ, ಅಲ್ಲಿನ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಅನಿವಾರ್ಯವಾಗಿ ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಳ್ಳಬೇಕಾಯಿತು. ಇದರಿಂದ ಹಲವಾರು ಮಾನಸಿಕ ಒತ್ತಡಗಳಿಂದ ಬಳಲಿದಳು. ತನ್ನ ಮನಸ್ಸಿನ ವಿರುದ್ಧವಾಗಿ ಲೈಂಗಿಕ ವೃತ್ತಿಯಲ್ಲಿ ತೊಡಗುವ ಸಂದರ್ಭ ಬಂದೊದಗಿತು.

೨ ವರ್ಷದ ನಂತರ ತನ್ನ ಗಂಡ ತೆಗೆದುಕೊಂಡ ಹಣ ಮುಟ್ಟಿದ ನಂತರ ಆಕೆ ಮುಂಬೈಯಿಂದ ಬಿಡುಗಡೆ ಹೊಂದಿ ತನ್ನ ಸ್ವಂತ ಊರಿಗೆ ಹಿಂದಿರುಗಿದಳು. ತನ್ನ ಮಗಳನ್ನು ಹಿಂದಿರುಗಿ ಪಡೆದು ಆಕೆಯನ್ನು ಸಾಕಲು ಲೈಂಗಿಕ ವೃತ್ತಿಯನ್ನೇ ಮುಂದುವರೆಸಿಕೊಂಡು ಹೋದಳು. ಆದರೆ ಆಕೆಯ ಗಂಡ ಬೇರೊಬ್ಬಳನ್ನು ಮದುವೆ ಮಾಡಿಕೊಂಡಿದ್ದ.

ಈಗ ಆಕೆಯ ಮಗಳನ್ನು ಮದುವೆ ಮಾಡಿಕೊಟ್ಟಿದ್ದಾಳೆ. ಆದರೆ ಲೈಂಗಿಕ ವೃತ್ತಿಯಿಂದ ಅವಳಿಗೆ ಎಚ್.ಐ.ವಿ. ಸೊಂಕು ತಗುಲಿದೆ. ಮಲಕಮ್ಮಳ ಬದುಕಿನ ವೃತ್ತಾಂತದಿಂದ ತಿಳಿದು

ಬರುವುದೇನೆಂದರೆ ಸ್ವಂತ ತನ್ನ ಗಂಡನ ಮೋಸಕ್ಕೆ ಬಲಿಯಾಗಿ ಒಲ್ಲದ ಮನಸ್ಸಿನಿಂದ ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಂಡು ಹಲವಾರು ಮಾನಸಿಕ ತೊಂದರೆಗಳಿಗೆ ಒಳಗಾಗಿ, ಸಾಮಾಜಿಕ ಸ್ಥಾನಮಾನಗಳನ್ನು ಕಳೆದುಕೊಂಡು ಹುಟ್ಟಿನಿಂದಲೇ ತಂದೆ-ತಾಯಿ ಕಳೆದುಕೊಂಡು ಅತಂತ್ರ ಜೀವನ ಸಾಗಿಸಿದ ಮಲಕಮ್ಮ ಕೊನೆಯವರೆಗೂ ನೆಮ್ಮದಿ ಬದುಕು ಕಾಣಲಿಲ್ಲ. ಸಾವಿನ ದವಡೆಯಲ್ಲಿಯೇ ಜೀವನ ಸವೆಸುತ್ತಿದ್ದಾಳೆ.

೩. ಶಾಂತಮ್ಮ (ಹೆಸರು ಬದಲಾಯಿಸಲಾಗಿದೆ)

ಶಾಂತಮ್ಮ ೨೮ರ ಹರೆಯದ ಹೆಣ್ಣುಮಗಳು. ಬಾಲ್ಯದಲ್ಲಿಯೇ ತಂದೆ-ತಾಯಿಯನ್ನು ಕಳೆದುಕೊಂಡರು. ಅತ್ಯಂತ ಕಡುಬಡತನ ಕುಟುಂಬ. ಸಂಬಂಧಿಕರ ಸಹಾಯದಿಂದ ಬೆಳೆದು ದೊಡ್ಡವರಾದರು. ಅಣ್ಣ ಸಂಬಂಧಿಕರ ಹಿಟ್ಟಿನ ಗಿರಣಿ ನಡೆಸುತ್ತ ಹೊಟ್ಟೆ-ಬಟ್ಟೆ ತುಂಬಿಕೊಳ್ಳುತ್ತಿದ್ದ. ಮುಂದೆ ಶಾಂತಮ್ಮ ಕೂಡ ಹೊರಗಡೆ ಕೂಲಿ ಕೆಲಸಕ್ಕೆ ಹೋಗಲು ಶುರು ಮಾಡಿದಳು. ಚೆಲುವೆಯಾಗಿರುವ ಶಾಂತಮ್ಮಳ ಮೇಲೆ ಕಾಮುಕರ ಕಣ್ಣು ಬೀಳಲು ಪ್ರಾರಂಭಿಸಿದವು. ಕೆಲಸಕ್ಕೆ ಹೋದಾಗ ಕೆಲಸಗಾರನೊಂದಿಗೆ ಹಣಕ್ಕಾಗಿ ಸಂಬಂಧ ಹೊಂದಿದಳು. ಪರಿಸ್ಥಿತಿಯ ಒತ್ತಡಗಳಿಗೆ ಒಳಗಾಗಿ ಕೆಲಸಗಾರನೊಂದಿಗೆ ಸಂಬಂಧ ಹೊಂದಿರುವುದು ಊರಿಗೆ ಗೊತ್ತಾಯಿತು. ದಿನಾಲು ಸಮಾಜದವರಿಂದ, ನೆರೆಹೊರೆಯುವರಿಂದ ಸೂಳೆ ಲಜ್ಜೆಗೆಟ್ಟವಳು, ಇಟ್ಟುಕೊಂಡವಳು ಮುಂತಾದವುಗಳ ಬೈಗುಳಗಳು ಆಕೆಯ ಮೇಲೆ ಪ್ರಾರಂಭವಾದವು. ಇದರಿಂದ ಆಶ್ರಯ ನೀಡಿದ ಸಂಬಂಧಿಕರು ಮನೆ ಬಿಟ್ಟು ಹೊರ ಹಾಕಿದರು. ಅಣ್ಣ ಕೂಡ ನನ್ನ ಮುಖ ನೋಡಬೇಡ. ಈ ಊರಿನಿಂದ ಎಲ್ಲಿಯಾದರೂ ಹೋಗಿ ಬೀಡು ಇಲ್ಲವಾದರೆ ಬಾವಿಯಲ್ಲೊ ಅಥವಾ ಉರಲು ಹಾಕಿಕೊಂಡು ಸತ್ತು ಬೀಡು ಎಂದು ಹೇಳಿದ. ಅಂದು ಮನೆಯಿಂದ ಹೊರಬಂದು ಮಠಗಳಲ್ಲಿ, ಗುಡಿಗಳಲ್ಲಿ ಕೆಲಸ ಮಾಡುತ್ತ ಜೀವನ ಸಾಗಿಸುತ್ತ ಮುಂದೆ ಸಮಾಜ ಅವಳನ್ನು ಸಂಪೂರ್ಣವಾಗಿ ತಿರಸ್ಕರಿಸಲ್ಪಟ್ಟಾಗ ವೇಶ್ಯಾವೃತ್ತಿಯನ್ನೆ ಬದುಕಿನ ಉದ್ಯೋಗವನ್ನಾಗಿ ಮಾಡಿಕೊಡಳು. ಆದರೆ ಈಕೆಗೆ ಯಾವುದೇ ರೋಗಗಳಿಲ್ಲ ಎಂದು ಹೇಳುತ್ತಾಳೆ. ಶಾಂತಮ್ಮಳ ಬದುಕಿನಿಂದ ತಿಳಿದು ಬರುವುದೇನೆಂದರೆ ಬಡತನ, ಹಸಿವು ಎಂತಹ ಹೀನ ಪರಿಸ್ಥಿತಿಗೆ ತಂದೊಡ್ಡುತ್ತಿದೆ ಎಂಬುದನ್ನು ಗೊತ್ತಾಗುತ್ತದೆ.

೪. ಕಸ್ತೂರಿ (ಹೆಸರು ಬದಲಾಯಿಸಲಾಗಿದೆ)

ಕಸ್ತೂರಿ ೩೩ ವಯಸ್ಸಿನ ಮಹಿಳೆಯಾಗಿದ್ದಾಳೆ. ತಂದೆ ಇಲ್ಲ, ತಾಯಿ ಇದ್ದಾಳೆ. ಇಬ್ಬರು ಅಣ್ಣಂದಿರು, ಅತ್ತಿಗೆಯರು ಇದ್ದಾರೆ. ಕಸ್ತೂರಿಗೆ ಅವರ ಅಣ್ಣಂದಿರು ಮದುವೆ ಮಾಡಿಕೊಟ್ಟರು.

ಆದರೆ ಗಂಡನೊಂದಿಗೆ ಸಂತೃಪ್ತ ಸಂಸಾರಿಕ ಬದುಕನ್ನು ಸಾಗಿಸಬೇಕೆನ್ನಷ್ಟರಲ್ಲಿ ಗಂಡ ಅಪಘಾತದಿಂದ ಸಾವನ್ನು ಅಪ್ಪಿದ. ಮುಂದೆ ವಿಧವೆಯಳಾಗಿ ತವರು ಮನೆಗೆ ಬಂದಾಗ ಅಣ್ಣಂದಿರು ಮತ್ತು ಅಣ್ಣಂದಿರ ಹೆಂಡತಿಯರು ಹಲವು ರೀತಿಯಲ್ಲಿ ಕಿರುಕುಳ ಕೊಡಲು ಪ್ರಾರಂಭಿಸಿದರು. ಇನ್ನೂ ಯಾರು ಹತ್ತಿರ ಇರಬಾರದು ಎಂದು ಭಾವಿಸಿ ಪುನಾಕ್ಕೆ ದುಡಿಯಲು ಹೋದಳು. ಅಲ್ಲಿ ಯಾವುದೇ ಕೆಲಸ ದೊರಕದೆ ಅಲೆದಾಡುತ್ತಿದ್ದಾಗ ಘರವಾಲಿಯ ಪರಿಚಯವಾಗಿ ವೇಶ್ಯಾವೃತ್ತಿಗೆ ತನ್ನ ಬದುಕನ್ನು ಅರ್ಪಿಸಿದಳು.

ಕೆಲವು ವರ್ಷಗಳ ನಂತರ ಅಲ್ಲಿ ಬರುವ ಗಿರಾಕಿಗಳಲ್ಲಿ ಒಬ್ಬ ಆಕೆಯನ್ನು ಮದುವೆಯಾಗಲು ಇಚ್ಚಿಸಿದ. ಇದಕ್ಕೆ ಘರವಾಲಿಯ ಒಪ್ಪಿಗೆ ಕೂಡ ಇತ್ತು. ಏಕೆಂದರೆ ಈಕೆ ರಸ್ತೆಯಲ್ಲಿ ಕೆಲಸಕ್ಕಾಗಿ ಅಲೆದಾಡುತ್ತಿದ್ದಾಗ ಘರವಾಲಿಯ ಪರಿಚಯವಾಗಿ ಬಂದವಳು. ಅವಳ ಮೇಲೆ ವಿಶ್ವಾಸವಿಟ್ಟಿದ್ದನು. ನಂತರ ಅವರಿಬ್ಬರ ಮದುವೆಯಾಯಿತು. ಈ ಎರಡನೇ ಗಂಡ ವಾಹನ ಚಾಲಕನಾಗಿದ್ದನು. ಅವಳ ಬದುಕಿನಲ್ಲಿ ವಿಧಿ ಮತ್ತೊಂದು ಆಟವಾಡಿತ್ತು. ಆತನೂ ಕೂಡ ತನ್ನ ವಾಹನದೊಂದಿಗೆ ಮನೆಗೆ ಮರಳುತ್ತಿದ್ದಾಗ ಯಮವಾಗಿ ಎದುರಿಗೆ ಬಂದ ಲಾರಿಯೊಂದು ಡಿಕ್ಕಿ ಹೊಡೆದು ತೀರಿಕೊಂಡನು. ಇದರಿಂದ ಮಾನಸಿಕವಾಗಿ ಜರ್ಜಿತಗೊಂಡ ಕಸ್ತೂರಿ ಬದುಕಿಗಾಗಿ ಮತ್ತೆ ಅದೇ ವೃತ್ತಿಯನ್ನು ಮುಂದುವರಿಸಿದಳು. ಆದರೆ ಆಕೆ ಈ ಲೈಂಗಿಕ ವೃತ್ತಿಯಿಂದ ಹೊರಬರಲು ಪ್ರಯತ್ನಿಸುತ್ತಿದ್ದಾಳೆ. ಕಸ್ತೂರಿಯ ಬದುಕಿನಲ್ಲಿ 'ವಿಧಿ ಆಟ' ಆಡಿರುವುದರಿಂದ ತನ್ನ ಈ ವೃತ್ತಿಗೆ ಮೂಲ ಕಾರಣವಾಯಿತು ಎಂದು ಹೇಳಬಹುದು.

ಅಧ್ಯಾಯ ೫

ಸಮಾರೋಪ

ಸಮಾರೋಪ

ಭಾರತೀಯ ಸಮಾಜದಲ್ಲಿ ಕಂಡು ಬರುವ ಹಲವಾರು ಸಮಸ್ಯೆಗಳಲ್ಲಿ ಲೈಂಗಿಕ ವೃತ್ತಿ ಅಥವಾ ವೇಶ್ಯಾವೃತ್ತಿಯು ಅತ್ಯಂತ ಹಳೆಯ ವೃತ್ತಿಗಳಲ್ಲಿ ಒಂದಾಗಿದೆ. ಸಮಾಜದ ಕೆಲ ಹಿಂದುಳಿದ ವರ್ಗಗಳಲ್ಲಿನ ಮೌಢ್ಯತೆ, ಅನುಚಾನವಾಗಿ ನಡೆದುಕೊಂಡು ಬಂದ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ದೇವದಾಸಿ ಪದ್ಧತಿ, ಬಡತನ ಮುಂತಾದವು ವೇಶ್ಯಾವೃತ್ತಿ ಬೆಳೆಯುವುದಕ್ಕೆ ಪೂರಕವಾದ ಅಂಶಗಳಾಗಿವೆ. ಬಡ ಮಹಿಳೆಯರು ಹೊಟ್ಟೆಪಾಡಿಗಾಗಿ ಮನಸ್ಸಿನಲ್ಲದೆ ಕೆಟ್ಟ ವೃತ್ತಿಗಳಿದರೆ, ಸುಸಂಸ್ಕೃತ ಸಮಾಜಕ್ಕೆ ಸೇರಿದ ಸುಶಿಕ್ಷಿತರು ಮೋಜಿಗಾಗಿ ಇಲ್ಲವೆ ಐಷರಾಮಿ ಜೀವನಕ್ಕಾಗಿ ಲೈಂಗಿಕ ವೃತ್ತಿಗೆ ಇಳಿದಿರುವುದು ಇದರ ಇನ್ನೊಂದು ಮುಖ.

ಭಾರತದಲ್ಲಿ ಇಂದು ಪ್ರತಿದಿನ ಇನ್ನೂರಕ್ಕಿಂತ ಹೆಚ್ಚು ಸ್ತ್ರೀಯರು ಮೈಮಾರುವ ದಂಧೆಗೆ ಇಳಿಯುತ್ತಿದ್ದಾರೆ. ವೇಶ್ಯಾವಾಟಿಕೆ ಅತ್ಯಂತ ಗಂಭೀರ ಸಮಸ್ಯೆಯಾಗಿ ಪರಿಣಮಿಸಿದ. ಬಡತನದ ಕಾರಣದಿಂದ ಇಲ್ಲವೆ ಗ್ರಾಹಕವಾದದ ಹೆಚ್ಚುತ್ತಿರುವ ಆಮಿಷಗಳಿಗೆ ಬಲಿಯಾಗುವ ಇವರಿಗೆ ಸೂಕ್ತ ಪುನವರ್ಸತಿಯ ಅಗತ್ಯ ಕಲ್ಪಿಸುವತ್ತ ಸರ್ಕಾರ ಸೋತಿದೆ. ಮಹಿಳೆ ಮತ್ತು ಮಕ್ಕಳನಲು ವೇಶ್ಯಾವೃತ್ತಿಗೆ ತಳ್ಳುವುದರಿಂದ ಸೃಷ್ಟಿಯಾಗುವ ಒಂದು ದಿನ ವರಮಾನ ೨೫ ಕೋಟಿ ರೂಪಾಯಿಗಳು ಎಂದು ವರದಿಯಾಗಿದೆ. ಇಂದು ಮಹಿಳೆ ಮಕ್ಕಳು ವೇಶ್ಯಾವೃತ್ತಿಯಲ್ಲಿ ತೊಡಗಿಕೊಂಡು ಕಷ್ಟದ ಬದುಕು ಸಾಗಿಸುತ್ತಿದ್ದಾರೆ.

ಅತ್ಯಾಚಾರ ವಿಷಯದಲ್ಲಿ ವೇಶ್ಯಾವೃತಿಯವರಿಗೂ ಕಾನೂನು ಪರವಾಗಿದೆ. ವೇಶ್ಯಾವೃತ್ತಿಯು ಕಾನೂನು ಪ್ರಕಾರ ಅಪರಾಧ ಎಂದಿರುವುದರಿಂದ ವೇಶ್ಯೆಯರ ಮೇಲೆ ಅತ್ಯಾಚಾರದ ಪ್ರಶ್ನೆಯೇ ಬರುವುದಿಲ್ಲ. ಆದರೆ ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತ್ತಿ ನಡೆಸುವ ಹಕ್ಕಿಗೆ ಇನ್ನೂ ಕಾನೂನು ಇದೆ. ಮನಸ್ಸಿಗೆ ವಿರುದ್ಧವಾಗಿ ಸಂಭೋಗ ನಡೆದರೆ ಅದು ಅತ್ಯಾಚಾರವೇ ಸರಿ

ಎಂದು ತೀರ್ಮಾನಗಳುಂಟು. ವೇಶ್ಯೆಯಾದ ಮಾತ್ರದಿಂದ ಅವಳಿಗೆ ಮಾನವ ಸಹಜ ಬೇಸರ, ಅನಿಷ್ಟ, ಅಕಾಮ, ಜಿಗುಪ್ಸೆ ಇವುಗಳಿಗೆ ಆಸ್ಪದವಿಲ್ಲ ಎಂದು ಹೇಳಲಾಗುವುದಿಲ್ಲ. ಅವಳೊಂದು ಯಂತ್ರವಲ್ಲ, ಬಾಡಿಗೆಗೆ ಸಲ್ಲುವ ದೇಹವಾದರೂ ಅಲ್ಲಿಯೂ ಇಚ್ಛೆಗೆ ಅವಕಾಶವಿದೆ, ಸ್ವಾತಂತ್ರ್ಯವಿದೆ ಎಂಬುದನ್ನು ನ್ಯಾಯ ಎತ್ತಿ ಹಿಡಿದಿರುವುದನನು ನಾವು ನೆನಪಿಸಿಕೊಳ್ಳಬಹುದು.

ರಸ್ತೆ ಬದಿ, ರೈಲ್ವೆ ಸ್ಟೇಷನ್, ಲಾಡ್ಜ್‌ಗಳಲ್ಲಿ ಬಸ್ ನಿಲ್ದಾಣ ಮುಂತಾದವುಗಳ ಕಡೆ ವೇಶ್ಯಾವಾಟಿಕೆ ಚಟುವಟಿಕೆಗಳಲ್ಲಿ ತೊಡಗಿರುವ ಲೈಂಗಿಕ ಕಾರ್ಯಕರ್ತೆಯರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ಆದೇಶಿಸಿರುವುದು ಸ್ವಾಗತಾರ್ಹ ಕ್ರಮವಾದರೂ ಹೀಗೆ ಬಂದನಕ್ಕೊಳಗಾದ ಮಹಿಳೆಯರ ತಮ್ಮ ಬದುಕನ್ನು ಬದಲಾಯಿಸಿಕೊಳ್ಳಲು ಆರ್ಥಿಕವಾಗಿ ಸ್ವತಂತ್ರರಾಗಲು ಪರ್ಯಾಯ ವ್ಯವಸ್ಥೆಯನ್ನು ರೂಪಿಸುವಲ್ಲಿ ಸರ್ಕಾರಗಳು ವಿಫಲಗೊಂಡಿವೆ. ಆದ್ದರಿಂದ ಈ ಸರ್ಕಾರಗಳು ಕೈಗೊಳ್ಳುವ ಸುಧಾರಣೆಗಿಂತ ಹೆಚ್ಚಾಗಿ ಸಮಸ್ಯೆಗಳನ್ನು ಸೃಷ್ಟಿಸಿದೆ. ಈಗಾಗಲೇ ಘೋರಣೆಗೊಂಡಿರುವ ಲೈಂಗಿಕ ಕಾರ್ಯಕರ್ತೆಯರ ಬದುಕನ್ನು ಮತ್ತಷ್ಟು ಯಾತನೆಗೆ ತಳ್ಳಿವೆ. ಅಲ್ಲದೆ ಏಡ್ಸ್ ಮಹಾಮಾರಿಯ ಭಯವಂತೂ ಮೈ ಮಾರಿಕೊಳ್ಳುವ ಸ್ತ್ರೀಯರ ಭವಿಷ್ಯಕ್ಕೆ ಬೆಂಕಿಯನ್ನಿಟ್ಟಿದೆ.

ಸರಿಸುಮಾರು ೫೦೦ ಮಂದಿ ಮಹಿಳೆಯರು ಗುಲಬರ್ಗಾದಲ್ಲಿ ವಿವಿಧ ಕಡೆ ಲೈಂಗಿಕ ವೃತ್ತಿಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಲ್ಲಿ ಅರ್ಧಕ್ಕಿಂತಲೂ ಅಧಿಕ ಲೈಂಗಿಕ ಕಾರ್ಯಕರ್ತೆಯರ ಜೀವನವೂ ಅತ್ಯಂತ ಸಂಕಷ್ಟದಲ್ಲಿದೆ. ಇದರಲ್ಲಿ ಅರ್ಧದಷ್ಟು ಜನ ಹಿಂದೂಳಿದ ದಲಿತ ಸಮುದಾಯದಿಂದ ಬಂದವರು ಎನ್ನುವುದು ಗಮನಿಸಬೇಕಾದ ಸಂಗತಿ.

ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವ ಅನೇಕ ಮಹಿಳೆಯರು ಹಣದುಬ್ಬರ ಕಾರಣದಿಂದಾಗಿ, ಅನೇಕ ಉದ್ದಿಮೆಗಳನ್ನು ಮುಚ್ಚುವುದರಿಂದ, ಜೀವನ ಸಾಗಿಸಲು ಲೈಂಗಿಕ ವೃತ್ತಿಯನ್ನು ಅವಲಂಬಿಸಬೇಕಾಗಿದೆ ಎನ್ನುತ್ತಾರೆ. ಇದೇಂಥಾ ವಿಪರ್ಯಾಸ ನೋಡಿ.

ಭಾರತ ಸಂವಿಧಾನದ ಅಡಿಯಲ್ಲಿ ರಚಿತವಾದ ಯಾವುದೇ ಕಾನೂನಿನಲ್ಲಿ ವೇಶ್ಯಾವಾಟಿಕೆಯನ್ನು ಕಾನೂನು ಬಾಹಿರವೆಂದಾಗಲಿ, ನಿಷಿದ್ಧ ವೃತ್ತಿಯೆಂದಾಗಲಿ ಹೇಳಿಲ್ಲ. ಬದುಕುವ ಎಲ್ಲಾ ಅವಕಾಶಗಳು ಮುಚ್ಚಲ್ಪಟ್ಟಾಗ, ಒಂದು ಹೊತ್ತಿನ ಊಟಕ್ಕಾಗಿ ಮೈಮಾರಿಕೊಳ್ಳುವ ಸ್ತ್ರೀಯರ ಹಕ್ಕುಗಳ ಬಗ್ಗೆ, ಸ್ಥಿತಿಗತಿಗಳ ಬಗ್ಗೆ ಕಾನೂನೂ ಯೋಚಿಸುವುದಿಲ್ಲ. ವಿಪರ್ಯಾಸವೆಂದರೆ ವೇಶ್ಯೆಯರ ವಿರುದ್ಧ ದಾಖಲಾಗುವ ದೂರುಗಳಲ್ಲಿ ಶೇಕಡ ೯೯ರಷ್ಟು ಮಹಿಳೆಯರು ಈ

ವೃತ್ತಿಯನ್ನು ಅವಲಂಬಿಸುವ ಪ್ರಮುಖ ಕಾರಣದ ಬಗ್ಗೆ ಈ ಕಾಯ್ದೆ ಏಕೆ ಯೋಚಿಸುವುದಿಲ್ಲ. ಅವರುಗಳ ಜೀವನವಿಡೀ ಪುನರ್ವಸತಿಯ ಬಗ್ಗೆ ಯಾಕೆ ಯೋಚಿಸುವುದಿಲ್ಲ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಇದರ ಬಗ್ಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಬೇಕಾಗಿದೆ.

ಆದ್ದರಿಂದ "ಗುಲ್ಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯ ಸಾಮಾಜಿಕ ಸ್ಥಿತಿಗತಿಗಳು" ಎಂಬ ಶೀರ್ಷಿಕೆಯಡಿಯಲ್ಲಿ ಬರೆಯಲ್ಪಟ್ಟಿರುವ ಸಂಪ್ರಬಂಧ ೪ ಅಧ್ಯಯನಗಳನ್ನು ಒಳಗೊಂಡಿದೆ. ಮೊದಲ ಅಧ್ಯಯನದ ಆರಂಭದಲ್ಲಿ ಅಧ್ಯಯನ ಉದ್ದೇಶ, ವ್ಯಾಪ್ತಿ, ವಿಧಾನ, ಲೈಂಗಿಕ ಕಾರ್ಯಕತೆರ್ಯರ ಕುರಿತು ನಡೆದ ಅಧ್ಯಯನಗಳು ಹಾಗೂ ಅಧ್ಯಯನ ಕ್ಷೇತ್ರದ ಪರಿಚಯವನ್ನು ವಿವರಿಸಲಾಗಿದೆ. ಎರಡನೆಯ ಅಧ್ಯಯನದಲ್ಲಿ ವೇಶ್ಯಾವೃತ್ತಿ ಅಥವಾ ಲೈಂಗಿಕ ವೃತ್ತಿ ನಡೆದು ಬಂದ ದಾರಿ ಕುರಿತು ಚರ್ಚಿಸುತ್ತ ಲೈಂಗಿಕ ಕಾರ್ಯಕರ್ತೆಯರ ಐತಿಹಾಸಿಕ ಹಿನ್ನೆಲೆ, ಲೈಂಗಿಕ ವೃತ್ತಿಯ ಪರಿಕಲ್ಪನೆ ಮತ್ತು ಈ ವೃತ್ತಿಗೆ ಪ್ರೇರಿತವಾದ ಅಂಶಗಳು ಹಾಗೂ ಪ್ರಕಾರಗಳು ಇವುಗಳ ಕುರಿತು ನನಗೆ ದೊರೆತ ಅನೇಕ ಸಾಮಗ್ರಿಗಳನ್ನು ಆಧಾರವಾಗಿಟ್ಟುಕೊಂಡು ವಕ್ತೃಗಳಿಂದ ದೊರೆತ ಮಾಹಿತಿಯಿಂದ ವಿವರಿಸಲಾಗಿದೆ.

ಮೂರನೆಯ ಅಧ್ಯಯನದಲ್ಲಿ ಲೈಂಗಿಕ ಕಾರ್ಯಕರ್ತೆಯರ ಸಾಮಾಜಿಕ ಸ್ಥಿತಿಗತಿಗಳು ಕುರಿತು ಚರ್ಚಿಸಲಾಗಿದೆ. ಇಂದು ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ಲೈಂಗಿಕ ಕಾರ್ಯಕರ್ತೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರಿಗೆ ಸಮಾಜದಲ್ಲಿ ಯಾವುದೇ ಗೌರವ ಸ್ಥಾನಮಾನಗಳು ಇಲ್ಲಿ ಸಮಾಜ ಅವರನ್ನು ಕಾಣುವ ದೃಷ್ಟಿ ಬದಲಾಗಬೇಕಿದೆ. ಈ ಹಿನ್ನೆಲೆಯಲ್ಲಿ ಲೈಂಗಿಕ ಕಾರ್ಯಕರ್ತೆಯರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಅವುಗಳಿಗೆ ಪರಿಹಾರ ಕ್ರಮಗಳನ್ನು ಕುರಿತು ವಿವರಿಸಲಾಗಿದೆ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೌಖ್ಯ ಮೈರಾಡ ಮತ್ತು ಕೆ.ಎಚ್.ಪಿ.ಟಿ. ಸಂಸ್ಥೆಗಳು ಲೈಂಗಿಕ ಕಾರ್ಯಕರ್ತೆಯರ ಬದುಕು ಮತ್ತು ಬವಣೆಗಳಿಗೆ ಹೇಗೆ ಸ್ಪಂದಿಸುತ್ತಿವೆ. ಅವರ ಸಮಸ್ಯೆಗಳಿಗೆ ಯಾವ ರೀತಿ ಕ್ರಮಗಳನ್ನು ಕೈಗೊಂಡಿವೆ. ಲೈಂಗಿಕ ಕಾರ್ಯಕರ್ತೆಯರ ಬದುಕಿಗೆ ಆ ಸಂಸ್ಥೆಗಳು ಹೇಗೆ ಹತ್ತಿರವಾಗಿವೆ ಎಂಬುದನ್ನು ಹಾಗೂ ಒಟ್ಟು ಅಧ್ಯಯನದ ಫಲಿತಾಂಶಗಳು ಕ್ಷೇತ್ರ ಕಾರ್ಯದಿಂದ ಪಡೆದ ಮಾಹಿತಿಯ ಹಿನ್ನೆಲೆಯಲ್ಲಿ ತಿಳಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಲೈಂಗಿಕ ಕಾರ್ಯಕರ್ತೆಯರ ಜೀವನ ವೃತ್ತಾಂತಗಳನ್ನು ತಿಳಿಸುವುದರ ಮೂಲಕ ಅವರು ಈ ವೃತ್ತಿಯಲ್ಲಿ ತೊಡಗಿಸಿಕೊಳ್ಳಲು ಕಾರಣವಾದ ಪರಿಸ್ಥಿತಿಗಳು ಹಾಗೂ ನಂತರದಲ್ಲಿ ಅವರ ಪರಿಸ್ಥಿತಿಗಳ ಕುರಿತು ತಿಳಿಸಲಾಗಿದೆ.

ಅನುಬಂಧದಲ್ಲಿ ಗ್ರಂಥಋಣ, ವಕ್ತೃಗಳ ವಿವರ ಹಾಗೂ ಲೈಂಗಿಕ ಕಾರ್ಯಕರ್ತೆಯರ ಕೆಲವು ಛಾಯಾಚಿತ್ರಗಳನ್ನು ಅಧ್ಯಯನದಲ್ಲಿ ಇಡಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯರ ಕುರಿತು ಯಾವುದೇ ಎಂ.ಫಿಲ್., ಪಿಎಚ್.ಡಿ. ರೀತಿಯಲ್ಲಿ ಅಧ್ಯಯನಗಳು ನಡೆಯದೇ ಇರುವುದನ್ನು ಗಮನಿಸಬಹುದು. ಆದ್ದರಿಂದ ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಲೈಂಗಿಕ ಕಾರ್ಯಕರ್ತೆಯರ ಕುರಿತು ಎಂ.ಫಿಲ್. ಸಂಪ್ರಬಂಧವೇ ಮೊದಲನೇ ಅಧ್ಯಯನವಾಗಿದೆ. ಮುಂದಿನ ಸಂಶೋಧನೆಗಳಿಗೆ ಹಾಗೂ ಅಧ್ಯಯನಗಳಿಗೆ ಸಹಕಾರಿಯಾಗಬಲ್ಲದೆಂಬ ಅಪೇಕ್ಷೆ ಈ ಅಧ್ಯಯನಕ್ಕಿದೆ. ಈ ಅಧ್ಯಯನದಿಂದ ಕೆಲವು ನನ್ನದೇಯಾದ ಸಲಹೆಗಳನ್ನು ವಿವರಿಸಿದ್ದೇನೆ.

ಒಟ್ಟಿನಲ್ಲಿ ಪ್ರಸ್ತುತ ದಿನಗಳಲ್ಲಿ ಗಂಭೀರ ಸಮಸ್ಯೆಯಾಗಿ ಕಾಡುತ್ತಿರುವ "ಲೈಂಗಿಕ ಕಾರ್ಯಕರ್ತೆಯರ ಬದುಕು ಮತ್ತು ಬವಣೆಗಳನ್ನು ಕಟ್ಟಿಕೊಡಲು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿ ಬದುಕುತ್ತಿರುವ ಲೈಂಗಿಕ ಕಾರ್ಯಕರ್ತೆಯರ ಇಂದಿನ ಸನ್ನಿವೇಶದಲ್ಲಿ ಇಂತಹ ಅಧ್ಯಯನಗಳು ಹೆಚ್ಚು ಮಹತ್ವವೆನಿಸುತ್ತವೆ. ಈ ವಿಷಯ ಕುರಿತು ಅಧ್ಯಯನ ಮತ್ತು ಕಾಲದ ಮಿತಿಯಿಂದಾಗಿ ಇಷ್ಟಕ್ಕೆ ಸೀಮಿತಗೊಳಿಸಿಕೊಂಡು ಅಂತಿಮಗೊಳಿಸಲಾಗಿದೆ.

ಸಲಹೆಗಳು

* ಲೈಂಗಿಕ ಕಾರ್ಯಕರ್ತೆಯರ ಬಗ್ಗೆ ವಾಸ್ತವಿಕ ಬದುಕಿನ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬೇಕಾದರೆ ಇವರ ಮೇಲೆ ಇನ್ನು ಹೆಚ್ಚಿನ ಅಧ್ಯಯನಗಳು ನಡೆಯಬೇಕು.
* ಲೈಂಗಿಕ ವೃತ್ತಿನಿರಿತ ಮಹಿಳೆಯರ ಆರೋಗ್ಯದ ಬಗ್ಗೆ ಹೆಚ್ಚು ಪರಿಣಾಮಕಾರಿಯಾದ ಸಂಶೋಧನಾತ್ಮಕ ಅಧ್ಯಯನಗಳು ನಡೆಯಬೇಕು.
* ಲೈಂಗಿಕ ಕಾರ್ಯಕರ್ತೆ ಯರನ್ನು ಸಮಾಜ ನೋಡುವ ದೃಷ್ಟಿಕೋನ ಬದಲಾಗಲು ಈ ಹಿನ್ನೆಲೆಯಲ್ಲಿ ಅವರ ಕುರಿತು ಉಪನ್ಯಾಸ ಕಾರ್ಯಕ್ರಮ ಶಿಬಿರಗಳು ನಡೆಸುವುದರ ಮೂಲಕ ಪ್ರಯತ್ನಿಸಬೇಕು.
* ಲೈಂಗಿಕ ವೃತ್ತಿನಿರತ ಮಹಿಳೆಯರ ಸಮಸ್ತ ಬದುಕಿನ ಬಗ್ಗೆ ಎಲ್ಲಾ ವಿಶ್ವವಿದ್ಯಾಲಯದಲ್ಲಿನ ಸಮಾಜಶಾಸ್ತ್ರ ವಿಭಾಗ, ಮಾನವಶಾಸ್ತ್ರ ವಿಭಾಗ, ಮಹಿಳಾ ಅಧ್ಯಯನ ವಿಭಾಗ, ಕಾನೂನು ಮನಃಶಾಸ್ತ್ರ ವಿಭಾಗಗಳಲ್ಲಿ ತಜ್ಞರು, ಚಿಂತಕರು, ಸಂಶೋಧಕರು, ವಿದ್ವಾಂಸರು,

ಸಂಶೋಧನಾ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಅಧ್ಯಯನ, ಚಿಂತನ ಮಂಥನಗಳನ್ನು ನಡೆಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತಂದು ಆರೋಗ್ಯಕರ ಬದುಕನ್ನು ಸಾಗಿಸಲು ಪ್ರಯತ್ನಗಳು ನಡೆಯಬೇಕು.

* ಲೈಂಗಿಕ ವೃತ್ತಿಯಲ್ಲಿ ನಿರತರಾಗಿರುವ ಅಬಲೆ ಮಹಿಳೆಯರ ಮನೋಭಾವನೆಯನ್ನು ತೊಲಗಿಸಿ, ಅವರಲ್ಲಿ ಹೊಸಬದುಕಿನ ಕನಸುಗಳನ್ನು ಮೂಡಿಸುವ ಕೆಲಸ ನಡೆಯಬೇಕು.

* ಇವರು ದೇಹ ಮಾಡಿಕೊಳ್ಳುವುದನ್ನು ತಪ್ಪಿಸಿ, ಇನ್ನಿತರ ವೃತ್ತಿಯ ಮೂಲಕ ದುಡಿಯುವಂತೆ ಪ್ರೇರೇಪಿಸಿತು.

* ಈ ದಂಧೆಯಲ್ಲಿನ ಮಧ್ಯೆವರ್ತಿಗಳ ಹಾಗೂ ಇದನ್ನೇ ಉದ್ದಿಮೆಯನ್ನಾಗಿ ಮಾಡಿಕೊಂಡ ಪುರುಷರ ವಿರುದ್ಧ ಕ್ರಮ ಕೈಗೊಳ್ಳಬೇಕು ಇಂಥಹವರನ್ನು ಶಿಕ್ಷಿಸಲು ಕಠಿಣವಾದ ಕಾಯ್ದೆ ತರಬೇಕು.

* ಲೈಂಗಿಕ ಕಾರ್ಯಕರ್ತೆಯರರಿಗೆ ಹಲವಾರು ಸೃಜನಶೀಲ ಅಂದರೆ ಸಾಹಿತ್ಯ, ಸಂಗೀತ, ಕಲೆ, ನೃತ್ಯ, ಚಿತ್ರಕಲೆ ಮುಂತಾದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಪ್ರೇರೇಪಿಸಿ ಅದರಲ್ಲಿನ ಸೃಜನಶೀಲ ಮನಸ್ಸನ್ನು ಹೊರಹಾಕಬೇಕು. ಇವುಗಳಿಂದ ಅವರ ಬದುಕಿನಲ್ಲಿ ಹೊಸತನವನ್ನು ಕಂಡುಕೊಳ್ಳಬಹುದು. ಈ ನೆಲೆಯಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಘ-ಸಂಸ್ಥೆಗಳು ಕಾರ್ಯನಿರ್ವಹಿಸಬೇಕಾದದ್ದು ಬಹಳಷ್ಟು ಅವಶ್ಯಕತೆ ಇದೆ.

ಗುಲ್ಬರ್ಗಾದಲ್ಲಿನ ಹಲವು ಸರ್ಕಾರೇತರ ಸಂಘ-ಸಂಸ್ಥೆಗಳು ಲೈಂಗಿಕ ಕಾರ್ಯಕರ್ತೆಯ ರೊಂದಿಗೆ ಕಾರ್ಯನಿರ್ವಹಿಸುತ್ತಿವೆ. ವಿಶೇಷವಾಗಿ ಅವರ ಆರೋಗ್ಯ ಸ್ಥಿತಿಗತಿಗಳನ್ನು ಕುರಿತು ಹೆಚ್ಚು ಜಾಗೃತಿಯನ್ನು ಮೂಡಿಸಲು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಅವರಿಗೆ ಆರೋಗ್ಯ ಸೌಲಭ್ಯಗಳನ್ನು ಕೊಡುವುದರ ಮೂಲಕ ಸಮುದಾಯದಲ್ಲಿ ಭಾಗವಹಿಸುವಂತೆ ಮಾಡುತ್ತಿರುವುದು ಕಂಡು ಬಂತು.

ಒಟ್ಟಿನಲ್ಲಿ ಪ್ರಸ್ತುತ ದಿನಗಳಲ್ಲಿ ಗಂಭೀರ ಸಮಸ್ಯೆಯಾಗಿ ಕಾಡುತ್ತಿರುವ "ಲೈಂಗಿಕ ಕಾರ್ಯಕರ್ತೆಯರ ಬದುಕು ಮತ್ತು ಬವಣೆ"ಗಳನ್ನು ಕಟ್ಟಿಕೊಡಲು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿ ಬದುಕುತ್ತಿರುವ ಲೈಂಗಿಕ ಕಾರ್ಯಕರ್ತೆಯರ ಇಂದಿನ ಸನ್ನಿವೇಶದಲ್ಲಿ ಇಂತಹ ಅಧ್ಯಯನಗಳು ಹೆಚ್ಚು ಮಹತ್ವವೆನಿಸುತ್ತವೆ. ಈ ವಿಷಯ ಕುರಿತು ಅಧ್ಯಯನ ಮಾಡುವ ದೃಷ್ಟಿಕೋನಗಳು ಹಲವಾರು ಇವೆ. ನನ್ನ ಅಧ್ಯಯನ ಮತ್ತು ಕಾಲದ ಮಿತಿಯಿಂದಾಗಿ ಇಷ್ಟಕ್ಕೆ ಸೀಮಿತಗೊಳಿಸಿಕೊಂಡು ಅಂತಿಮಗೊಳಿಸಲಾಗಿದೆ.

ಅನುಬಂಧ

ಪರಾಮರ್ಶನ ಗ್ರಂಥಗಳು

ವಕ್ತೃ ವಿವರ

ಕೋಷ್ಟಕಗಳು

ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು:

೧. ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು – ಚ.ನ.ಶಂಕರರಾವ್, ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

೨. Female Sex Work in Karnataka - Ichar ಕೈಪಿಡಿ

೩. Sankipa - A Project Funded by KHPT ಕೈಪಿಡಿ

೪. ದಿ ಸೆಕೆಂಡ್ ಸೆಕ್ಸ್ – ಸಿಮೊನ್ ದ ಬೋವಾ, ಅನು: ಡಾ.ಹೆಚ್.ಎಸ್.ಶ್ರೀಮತಿ, ಅಧ್ಯಯನ ಮಂಡಲ, ೨೦೦೭.

೫. ಮಹಾರಾಷ್ಟ್ರ ರಾಜ್ಯದ ತುಂಬ ಹರಿಯುತ್ತಿರುವ ವೇಶ್ಯಾ ಸೋದರಿಯರ ಕಣ್ಣೀರು ಕಡಲಿನ ಕೋಗಿಲೆ ಗಾನ – ಡಾ. ಚೆನ್ನಣ್ಣ ವಾಲಿಕಾರ, ದಲಿತ ಬಂಡಾಯ ಪ್ರಕಾಶನ ಕೇಂದ್ರ, ಗುಲಬರ್ಗಾ, ೧೯೯೯.

೬. ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು – ಕೆ. ಭೈರಪ್ಪ, ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

೭. ಮಹಿಳಾ ಚಳವಳಿ ಮತ್ತಿ ಮಹಿಳಾ ವಿಷಯಗಳು – ಡಾ. ಎಂ.ಉಷಾ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೮. ಕರ್ನಾಟಕ ದೇವದಾಸಿಯರ ಸಮಾಜೋ–ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ – ಡಾ. ಚೆನ್ನಣ್ಣ ವಾಲಿಕಾರ

೯. ಪಾತರದವರು – ಡಾ. ಶೈಲಜ ಹಿರೇಮಠ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ಹರಕೆಯ ಹೆಣ್ಣು – ಡಾ. ಕೆ.ಜಿ. ಗುರುಮೂರ್ತಿ, ವಿಮೋಚನ ಪ್ರಕಾಶನ, ಅಥಣಿ, ಬೆಳಗಾವಿ ಜಿಲ್ಲೆ.

೧೧. ಸಾಮಾಜಿಕ ಸಮಸ್ಯೆಗಳು – ಎಸ್. ರಾಜಶೇಖರ್

೧೨. ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು – ಡಾ. ಈರಣ್ಣ ಚ. ಮುಳುಗುಂದ, ಸೃಷ್ಟಿ ಪ್ರಕಾಶನ, ಧಾರವಾಡ, ೨೦೦೨.

೧೩. ನಗರ ನಾಕವಲ್ಲಿ – ಹೆಚ್.ಆರ್.ಚಂದ್ರವದನರಾವ್, ಸತ್ಯನಾರಾಯಣ ಪಬ್ಲಿಕೇಷನ್ಸ್, ನಂಜನಗೂಡು, ೨೦೦೨.

೧೪. ಪಾಂಚಾಲಿ – ಬಿ.ವಿ. ನಾಗರಾಜ, ಆಪ್ತಪ್ರಕಾಶನ, ಬೆಂಗಳೂರು, ೨೦೦೧.

೧೫. ಸಾಮಾಜಿಕ ಸಮಸ್ಯೆಗಳು – ಎಮ್. ನಾರಾಯಣ

೧೬. ನಗರ ಸಮಾಜಶಾಸ್ತ್ರ – ರಾಮಚಂದ್ರ ಜೋಶಿ, ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

೧೭. ನಗರ ಸಮಾಜಶಾಸ್ತ್ರ – ಕೆ. ಭೈರಪ್ಪ, ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

೧೮. ಲೈಂಗಿಕ ಕಾರ್ಯಕರ್ತೆಯರು – ಸುಧಾ – ೨೦೦೮, ಮಾರ್ಚ್

೧೯. ತರಂಗ – ೨೦೦೬, ನವ್ಹೆಂಬರ್

೨೦. ಕರ್ಮವೀರ – ೧೯೯೮, ಡಿಸೆಂಬರ್

೨೧. ದಿಕ್ಸೂಚಿ – ೨೦೦೩, ಜುಲೈ

೨೨. ಪ್ರಿಯಾಂಕ – ೧೯೯೯, ಜನವರಿ

೨೩. ಕರ್ಮವೀರ – ೧೯೯೪ ಎಪ್ರಿಲ್

೨೪. ತರಂಗ – ಏಪ್ರಿಲ್, ೧೯೯೯

೨೫. ದಿಕ್ಸೂಚಿ – ಜನವರಿ ೧೯೯೯

೨೬. ಬೆವರು – ಸಿದ್ರಾಮ ಹೊನ್ಕಲ್, ಸೂರ್ಯಕಾಂತ ಪಾಟೀಲ್

೨೭. ಕಲ್ಬುರ್ಗಿ ಜಿಲ್ಲಾ ದರ್ಶನ – ಡಾ. ಟಿ.ಎಂ. ಭಾಸ್ಕರ, ಶ್ರೀ ರಾಜಶೇಖರ್ ಹತಗುಂದಿ

೨೮. ಬದುಕಿನ ಬುತ್ತಿ – ಪ್ರೊ. ಶ್ರೀಶೈಲ ನಾಗರಾಳ

೨೯. ಒಲಂಪಿಕ್ಸ್ ಎಂಬ ಕೆಂಪು ದೀಪ – ಡಾ. ಲೀಲಾ ಸಂಪಿಗೆ.

೩೦. ಸಾಮಾಜಿಕ ಪಿಡುಗುಗಳ ಮಧ್ಯೆ ಹೆಣ್ಣು – ಶೋಭಾ ಹೆಚ್.ಜಿ, ಸ್ತ್ರೀ ಜಾಗರೂಕತೆ ಪ್ರಕಾಶನ, ಬೆಂಗಳೂರು.

೩೧. ಸಮಕಾಲೀನ ಸಾಮಾಜಿಕ ಸಮಸ್ಯೆಗಳು – ಅಖಿಲಾ ಏಜನ್ಸೀಸ್, ಬೆಂಗಳೂರು.

೩೨. ಓಲಂಪಿಕ್ಸ್ ಎಂಬ ಕೆಂಪು ದೀಪ – ಡಾ. ಲೀಲಾ ಸಂಪಿಕೆ, ಘಾಪಿರಸ್ ಮೀಪ್ಲವರ ಮಿಡಿಯಾ, ಹೌಸ್ ಪ್ರಕಟನೆ,

೩೩. ಮಹಿಳಾ ಬಿಡುಗಡೆ ಹಾದಿಯಲ್ಲಿ – ಎನ್. ಗಾಯತ್ರಿ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೩೪. ಕರ್ನಾಟಕ ದೇವದಾಸಿಯರ ಸಮಾಜೋಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ – ಚೆನ್ನಣ್ಣ ವಾಲೀಕಾರ

೩೫. ಕುಡುಬಿಯರ ಸಮಾಜೋ ಮತ್ತು ಸಾಂಸ್ಕೃತಿಕ ಅಧ್ಯಯನ – ಎ.ಡಿ.ಬಸವರಾಜ, ಎಂ.ಫಿಲ್. ಸಂಪ್ರಬಂಧ.

೩೬. ದುಶ್ಚಟಗಳು – ಡಾ. ಎಸ್.ಪಿ.ಯೋಗಣ್ಣ, ಶಿವರಂಜಿನಿ ಪಬ್ಲಿಕೇಷನ್ಸ್, ಮೈಸೂರು.

೩೭. ದೇವದಾಸಿ ಸಮಸ್ಯೆ – ಆಶಾರಮೇಶ ಮತ್ತು ತಿಲೋಮಿನಾ ಎಚ್.ಪಿ, ಮಟ್ಟರಾಜ ಸಂಯುಕ್ತ ಮಹಿಳಾ ವೇದಿಕೆ ಪ್ರಕಟಣೆ.

ಪತ್ರಿಕೆಗಳು:

೧. ಕರ್ಮವೀರ, ೨೭.೧೨.೧೯೯೮.

೨. ದಿಕ್ಸೂಚಿ, ಜುಲೈ, ೨೦೦೩.

೩. ಪ್ರಜಾವಾಣಿ, ಏಪ್ರಿಲ್, ೨೦೦೪.

೪. ವಿಜಯ ಕರ್ನಾಟಕ, ೨೦.೦೨.೨೦೦೭

೫. ಕರ್ಮವೀರ, ೦೩.೦೪.೧೯೯೪.

೬. ಸಂಧ್ಯಾಕಾಲ, ೦೮.೦೯.೨೦೦೮

೭. ವಿಜಯ ಕರ್ನಾಟಕ, ೩೧.೦೭.೨೦೦೪

ವಕ್ತೃವಿವರ

ಹೆಸರು	ವಯಸ್ಸು	ಧರ್ಮ	ಜಾತಿ	ಶಿಕ್ಷಣ	ವೈವಾಹಿಕ ಹಿನ್ನೆಲೆ	ಸಂದರ್ಶನ ದಿನಾಂಕ
ರೇಣುಕಾ	೩೧	ಹಿಂದೂ	–	ಪ್ರಾಥಮಿಕ	ವಿವಾಹಿತೆ	೧೫.೦೭.೨೦೦೯.
ಬಸಮ್ಮ	೨೮	ಹಿಂದೂ	ಲಿಂಗಾಯತ	ಅನಕ್ಷರಸ್ಥೆ	ಅವಿವಾಹಿತೆ	೧೫.೦೭.೨೦೦೯.
ಸಂಗೀತ	೨೬	ಹಿಂದೂ	–	ಅನಕ್ಷರಸ್ಥೆ	ವಿಚ್ಛೇದಿತೆ	೦೧.೦೮.೨೦೦೯
ಈರಮ್ಮ	೩೩	ಹಿಂದೂ	–	ಅನಕ್ಷರಸ್ಥೆ	ವಿವಾಹಿತೆ	೧೦.೦೮.೨೦೦೯
ಸಾಬಿರಾ	೩೦	ಮುಸ್ಲಿಂ	–	ಪ್ರಾಥಮಿಕ	ಅವಿವಾಹಿತೆ	೧೦.೦೮.೨೦೦೯
ದೇವಮ್ಮ	೨೮	ಹಿಂದೂ	ಪ.ಜಾತಿ	ಅನಕ್ಷರಸ್ಥೆ	ವಿಧವೆ	೧೦.೦೮.೨೦೦೯
ಸುನಿತ	೩೫	ಹಿಂದೂ	ಪ.ಜಾತಿ	೭ನೇ ತರಗತಿ	ವಿಧವೆ	೨೮.೦೮.೨೦೦೯
ಮಂಜುಳಾ	೨೩	ಹಿಂದೂ	–	ಪಿ.ಯು.ಸಿ.	ಅವಿವಾಹಿತೆ	೦೧.೦೯.೨೦೦೯
ರೇಖಾ	೩೫	ಹಿಂದೂ	–	ಅನಕ್ಷರಸ್ಥೆ	ವಿಧವೆ	೦೧.೦೯.೨೦೦೯
ಶರಣಮ್ಮ	೩೫	ಹಿಂದೂ	ಪ.ಜಾತಿ	ಅನಕ್ಷರಸ್ಥೆ	ಅವಿವಾಹಿತೆ	೦೧.೦೯.೨೦೦೯
ಕಸ್ತೂರಮ್ಮ	೩೨	ಹಿಂದೂ	ಲಿಂಗಾಯತ	ಅನಕ್ಷರಸ್ಥೆ	ವಿಧವೆ	೦೫.೦೯.೨೦೦೯

ಕೋಷ್ಟಕಗಳು

ಸರಕು ಸಾಗಾಣಿಕೆ ಸ್ಥಳಗಳಲ್ಲಿ ಲೈಂಗಿಕ ಕಾರ್ಯಕರ್ತೆಯರು

ಕಾರು	ಟ್ರಕ್ಕು	ಟಾಂಗಾ	ಒಂಟೆ
ರಿಕ್ಷಾ	ಟೆಂಪೋ	ಸೈಕಲ್ ಮೋಟಾರು	ಕೋಣ
ಜೀಪು	ಆಟೋ	ಸೈಕಲ್	ಆಳು
ಬಸ್ಸು	ಲಾರಿ	ರೈಲ್ವೆ	ಕುದುರೆ
		ಬಂಡಿ	ಕಳ್ಳರು



ಕೋಷ್ಟಕಗಳು

ಮಹಾರಾಷ್ಟ್ರದ ಮತ್ತು ಆಂಧ್ರಪ್ರದೇಶ ಗಡಿ ಪ್ರದೇಶಗಳಲ್ಲಿ ಲೈಂಗಿಕ ಕಾರ್ಯಕರ್ತೆಯರು

ಸೇಡಂ ಚಿಂಚೋಳಿ ಚಿತ್ತಾಪೂರ ಯಾನಗುಂದಿ ಯಾದಗಿರಿ ಸೈದಾಪೂರ

ಗುಲಬರ್ಗಾ ವಲಯದ ಕಾರ್ಯಕರ್ತೆಯರು

ಆಳಂದ ಚುಂಚೂರು ಅಫಜಲಪೂರ ಮಣ್ಣೂರು ಮಾಸ್ಯಾಳ ಹಾರುತಿಹಡಗಲಿ



" ವೇಶ್ಯಾವಾಟಿಕೆಯಲ್ಲಿ ಈ ನಗು ಅನಿವಾರ್ಯವಾಗುತ್ತೆ! ಚಿತ್ರಕೃಪೆ ತರಂಗ
ನವೆಂಬರ್ 2006



"ಗಿರಾಕಿಗಳೊಡನೆ ವೇಶ್ಯೆಯರು" ಚಿತ್ರ ಕೃಪೆ ಜನವರಿ 1997 ತರಂಗ







ಬಾಲ್ಯ ವೇಶ್ಯ ಚಿತ್ರ ಕೃಪೆ ತರಂಗ 23 ನವೆಂಬರ
2006



ಬಂದಾನೋ ... ಬಾರನೋ .... ಹೊಟ್ಟೆಪಾಡಿನೊಂದಿಗೆ ಅವಮಾನವನ್ನೂ
ಕಾವು ತೊಡಬೇಕಲ್ಲ? ಗಿರಾಕಿಗಳ ನಿರೀಕ್ಷೆಯಲ್ಲಿ ಲೈಂಗಿಕ ಕಾರ್ಯಕರ್ತೆಯರು
-ಚಿತ್ರ ಕೃಪೆ ತರಂಗ 23 ನವೆಂಬರ 2006



ಗುಲ್ಬರ್ಗಾ ಲಾಡ್ಜೊಂದರಲ್ಲಿ ಸ್ಥಳೀಯ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ
ಯುವತಿಯನ್ನು ಪೊಲೀಸರು ಬಂಧಿಸಿರುವುದು - ಚಿತ್ರ ಕೃಪೆ
ಸಂಪಾದಕ 08 ಸೆಪ್ಟೆಂಬರ 2007



